ಅಧ್ಯಕ್ಷರು: ಆಯಿತು, ಸದರಿ ವಿಧೇಯಕವನ್ನು ನಾಳೆ ತೆಗೆದುಕೊಳ್ಳೋಣ. ಈಗ ಬಜೆಟ್ ಮೇಲಿನ ಚರ್ಚೆ ಮುಂದುವರೆಯುವುದು.

12.30 ಪಿ.ಎಂ.

2001-2002ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ಅಧ್ಯಕ್ಷರೇ, ಸಮಯದ ಅಭಾವವನ್ನು ಅರಿತುಕೊಂಡು ಈ ಆಯವ್ಯಯದ ಬಗ್ಗೆ ನೇರವಾಗಿ ವಿಷಯಕ್ಕೆ ನಾನು ಬರುತ್ತಿದ್ದೇನೆ. ಈ ಆಯವ್ಯಯವನ್ನು ನಾನು ನಾಲ್ಕೈದು ಭಾಗಗಳಲ್ಲಿ ಕ್ಷಕಿರಣದ ರೀತಿಯಲ್ಲಿ ನೋಡಬೇಕೆನ್ನುವ ವಿಚಾರವನ್ನು ಇಟ್ಟುಕೊಂಡಿದ್ದೇನೆ. ಮೊದಲನೆಯದಾಗಿ ನಾನು ಈ ಆಯವ್ಯಯವನ್ನು ಸಂಪೂರ್ಣವಾಗಿ ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ಕೆಲವು ಸ್ವಾಗತಾರ್ಹವಾಗಿರತಕ್ಕ ವಿಚಾರಗಳು ಸಹಿತ ಇದೆ. ಇಲ್ಲದೆ ಹೋದರೆ ನಮ್ಮ ಆಡಳಿತ ಪಕ್ಷದಲ್ಲಿರತಕ್ಕ ಮುಖಂಡರುಗಳು ವಿರೋಧಪಕ್ಷದವರೆಲ್ಲಾ ಬೇಜವಾಬ್ದಾರಿಯಿಂದ ಮಾತನಾಡುತ್ತಾರೆ ಎನ್ನುವುದನ್ನು ಸಹಿತ ಹೇಳುತ್ತಾರೆ. ಅದರಿಂದ ಕೆಲವು ಕ್ರಮಗಳನ್ನು ಮಾಡಿದ್ದಾರೆ. ಉದಾಹರಣೆಗೆ ಕರ್ನಾಟಕದ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಒಬ್ಬ ರೈತ ಪ್ರತಿನಿಧಿಯನ್ನು ಆಯ್ಕೆ ಮಾಡಿರತಕ್ಕದ್ದು. ಇದು ಸೂಕ್ತವಾದ ಕ್ರಮ. ಭಾಗ್ಯಜ್ಯೋತಿ, ಕುಟೀರಜ್ಯೋತಿಗಳಿಂದ 41 ಕೋಟಿ ರೂಪಾಯಿಗಳ ವಿದ್ಯುತ್ ಬಾಕಿ ವಾಪಸ್ ಬರುತ್ತಲೇ ಇರಲಿಲ್ಲ. ಅದರಿಂದಾಗಿ ಅದನ್ನು ಸರ್ಕಾರವೇ ಕಟ್ಟಿಕೊಡುವ ನಿರ್ಧಾರವನ್ನು ತೆಗೆದುಕೊಂಡಿದ್ದೀರಿ. ಅದನ್ನೂ ಸಹಿತ ನಾವು ಒಪ್ಪುತ್ತೇವೆ. ರೈತರ ಕಲ್ಯಾಣ ನಿಧಿಯನ್ನು ನೂರರಿಂದ 200 ಇನ್ನೂರು ಸಹಿತ ರೂಪಾಯಿಗೆ ತೆಗೆದುಕೊಂಡು ಹೋಗಿ ಅದನ್ನು 400 ಕೋಟಿ ರೂಪಾಯಿಗಳಿಗೆ ಏರಿಸುವ ಭರವಸೆಯನ್ನು ಕೊಟ್ಟಿದ್ದೀರಿ. ಅದು ಸಹಿತ ಸ್ವಾಗತಾರ್ಹವಾಗಿರತಕ್ಕ ವಿಚಾರ. 2000-01 ರಲ್ಲಿ ಒಂದೂವರೆ ಲಕ್ಷ ಮನೆಗಳನ್ನು ಕಟ್ಟಿದ್ದೇವೆ, ಈ ವರ್ಷ ಎರಡು ಲಕ್ಷ ಮನೆಗಳನ್ನು ಕಟ್ಟುತ್ತೇವೆ ಎಂದು ಹೇಳಿದ್ದೀರಿ. ಅದು ಒಪ್ಪತಕ್ಕದ್ದು. ಗ್ರಾಮ ಪಂಚಾಯಿತಿಗಳಿಗೆ ಎರಡು ಲಕ್ಷ ರೂಪಾಯಿಗಳಿಂದ ಮೂರುವರೆ ಲಕ್ಷ ರೂಪಾಯಿಗಳ ಅನುದಾನವನ್ನು ತೆಗೆದುಕೊಂಡು ಹೋಗಿದ್ದಾರೆ. ಅದನ್ನೂ ಸಹಿತ ನಾನು ಒಪ್ಪುತ್ತೇನೆ. ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನವನ್ನು ಹೆಚ್ಚು ಮಾಡುವ ದೃಷ್ಟಿಯನ್ನು ಇಟ್ಟುಕೊಂಡು ಹೇಳಿರುವುದು ಸೂಕ್ತವಾದುದು. ಒಂದು ವರ್ಷ ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯರು ಕೆಲಸ ಮಾಡಿದರೆ ಅವರಿಗೆ ಗೌರವಧನವನ್ನು ಕೊಡುವ ವಿಚಾರವನ್ನು ಏನು ಹೇಳಿದ್ದೀರಿ, ಅದನ್ನೂ ಸಹಿತ ನಾನು ಒಪ್ಪುತ್ತೇನೆ. ಮತ್ತೇ ಅದೇ ರೀತಿ 2001-02ನೇ ಇಸವಿಯಲ್ಲಿ 15 ಸಾವಿರ ಶಿಕ್ಷಕರ ನೇಮಕಾತಿಯನ್ನು ಮಾಡಿದ್ದೇವೆ ಎಂದು ಹೇಳುತ್ತೀರಿ. ಅದನ್ನೂ ಸಹಿತ ನಾನು ಒಪ್ಪುತ್ತೇನೆ. ಪರಿಶಿಷ್ಟ ಜಾತಿ ವರ್ಗದವರ ಆಯೋಗದ ರಚನೆ ಏನು ಇದೆ, ಇದರ ಬಗ್ಗೆ ನಾವೆಲ್ಲರೂ ಸಹಿತ ಬಹಳ ದಿವಸಗಳಿಂದ ಈ ವಿಚಾರದ ಬಗ್ಗೆ ಕೇಳುತ್ತಿದ್ದೆವು. ಒಂದು ಆಯೋಗ ಆಗಬೇಕು ಎಂದು. ಕೇಂದ್ರ ಸರ್ಕಾರದಲ್ಲಿ ಯಾವ ರೀತಿ ಆಯೋಗವಾಗಿದೆ, ಅದೇ ರೀತಿ ಒಂದು ಆಯೋಗ ಆಗಬೇಕೆಂದು ನಾವು ಒತ್ತಾಯವನ್ನು ಮಾಡುತ್ತಿದ್ದೆವು. ಇವತ್ತು ಅದನ್ನು ಮಾಡಿದ್ದೀರಿ.

ಇವತ್ತು ನಾವು ಅದನ್ನು ಸ್ವಾಗತ ಮಾಡುತ್ತೇವೆ. ಆಶ್ರಮ ಶಾಲೆ ಪ್ರತಿ ಮಗುವಿಗೆ ಆಹಾರ ಭತ್ಯೆಯನ್ನು 250-300 ರೂಪಾಯಿ ಮಾಡಿರುವುದು, ಸಮವಸ್ತ್ರ ಭತ್ಯೆಯನ್ನು ಜಾಸ್ತಿ ಮಾಡಿರುವುದು, ಅಲ್ಪಸಂಖ್ಯಾತರ, ಅನುದಾನವನ್ನು 12 ರಿಂದ 18 ಕೋಟಿ ರೂಪಾಯಿ ಮಾಡಿರುವುದು ಸಹಿತ ಒಳ್ಳೆಯದೆ. ಕೆಎಸ್‌ಆರ್‌ಟಿಸಿ ಯಲ್ಲಿ ಪೂರ್ಣ ಅಂಗವಿಕಲರಿಗೆ ಬಸ್ ಪಾಸನ್ನು ಕೊಡಬೇಕೆನ್ನುವ ವಿಚಾರ ಬಹಳ ದಿನಗಳಿಂದಲೂ ಇತ್ತು. ಅದನ್ನು ಅನುಷ್ಠಾನಕ್ಕೆ ತರುವ ಭರವಸೆಯನ್ನು ಕೊಟ್ಟು ಕೆಎಸ್‌ಆರ್‌ಟಿಸಿ ಗೆ ಸರ್ಕಾರದಿಂದ ದುಡ್ಡನ್ನು ಕೊಡತಕ್ಕದ್ದು ಮಾಡಿದ್ದೀರಿ. ಅದನ್ನೂ ಸಹಿತ ನಾನು ಒಪ್ಪುತ್ತೇನೆ. ಬಹಳ ಮುಖ್ಯವಾಗಿ ಈ ಸರ್ಕಾರ ಎರಡು ಕೆಲಸಗಳನ್ನು ಮಾಡತಕ್ಕ ವಿಚಾರದಲ್ಲಿ ನಾವು ನಿರ್ವಿವಾದವಾಗಿ ಈ ಸದನದ ಎಲ್ಲಾ ಸದಸ್ಯರುಗಳು ಸಹಿತ ಒಪ್ಪುತ್ತಾರೆ. ಒಂದು ಮನೆಯನ್ನು ಕಟ್ಟುವುದಕ್ಕೆ ಆದ್ಯತೆಯನ್ನು ಕೊಟ್ಟಿರತಕ್ಕದ್ದು. ವಿಶ್ವಬ್ಯಾಂಕ್, ನಬಾರ್ಡ್ ಮತ್ತು ಹುಡ್ಕೋ ಸಂಸ್ಥೆಯಿಂದ ರಸ್ತೆಗಳನ್ನು ರಿಪೇರಿ ಮಾಡಲಿಕ್ಕೆ ತೆಗೆದುಕೊಂಡಿರುವ ಕ್ರಮ, ಅದು ಲೋಕೋಪಯೋಗಿ ಇಲಾಖೆಯ ಸಚಿವರಿರಲಿ, ಅಥವಾ ಗ್ರಾಮೀಣಾಭಿವೃದ್ಧಿ ಇಲಾಖೆಯ ಮಂತ್ರಿಗಳಿರಲಿ, ಈ ಅನುಷ್ಠಾನಗಳನ್ನು ಏನು ತೆಗೆದುಕೊಳ್ಳಬೇಕೆಂದು ಹೇಳಿದ್ದೀರಿ, ಇದು ಸಹಾ ಸಮರ್ಥನೀಯವಾದುದು ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಕೇಂದ್ರ ಸರ್ಕಾರದಿಂದ ಸಹಕಾರವನ್ನು ಪಡೆದು, ನಬಾರ್ಡ್‌ನಿಂದ ಸಹಕಾರವನ್ನು ಪಡೆದು, ವಿಶ್ವಬ್ಯಾಂಕ್‌ನಿಂದ ಸಹಕಾರವನ್ನು ಪಡೆದು ಹತ್ತು ಸಾವಿರ ಕಿಲೋಮೀಟರ್ ರಸ್ತೆಗಳನ್ನು ಏನು ರಿಪೇರಿ ಮಾಡಬೇಕೆಂದು ಹೊರಟಿದ್ದೀರಿ, ಇದೂ ಸಹಿತ ಒಳ್ಳೆಯ ಕೆಲಸವೇ. ಮತ್ತೆ ಮೊದಲನೇ ಬಾರಿಗೆ ರಾಜಧಾನಿ ನಿಧಿಯನ್ನು 50 ಕೋಟಿ ರೂಪಾಯಿ ಮಾಡಬೇಕು ಎಂದು ಹೇಳಿ ಅನುದಾನವನ್ನು ಕೊಡಬೇಕೆಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳು ಏನು ನಿರ್ಧಾರವನ್ನು ಮಾಡಿದ್ದಾರೆ, ಅದು ಸಹಿತ ಒಳ್ಳೆಯದು. ಮತ್ತೆ ಬೆಂಗಳೂರಿನಲ್ಲಿ ಸಂಚಾರಿ ವ್ಯವಸ್ಥೆ ಬಹಳ ಕೆಟ್ಟಿತ್ತು. ಅದಕ್ಕೋಸ್ಕರವಾಗಿ ಪೊಲೀಸರು ಕಲೆಕ್ಟ್ ಮಾಡತಕ್ಕ ಫೀಸನ್ನು, ಫೈನ್‌ಗಳನ್ನು ಅವರಿಗೆ ಕೊಡತಕ್ಕದ್ದು, ಅದನ್ನು ಟ್ರಾಫಿಕ್ ಇಂಪ್ರೂವ್‌ಮೆಂಟ್ ಬಾಡಿಗೆ ಎಂದು ಹೇಳಿದ್ದೀರಿ, ಅದನ್ನೂ ಸಹಿತ ನಾನು ಒಪ್ಪುತ್ತೇನೆ. ನೇತ್ರಾವತಿ ನೀರಿನ ಸದುಪಯೋಗದ ವಿಚಾರದ ಬಗ್ಗೆ ಏನು ಪ್ರಸ್ತಾವನೆಯಾಗಿದೆ, 5 ಕೋಟಿ ರೂಪಾಯಿಗಳನ್ನು ಮಾನ್ಯ ಮುಖ್ಯಮಂತ್ರಿಗಳು ಅದಕ್ಕಾಗಿ ಕೊಡುತ್ತೇವೆಂದು ಹೇಳಿದ್ದಾರೆ. ಅದೂ ಸಹಿತ ಸರಿಯಾದ ಕ್ರಮವೇ. ಮಾನ್ಯ ಅಧ್ಯಕ್ಷರೇ, ತಾವು ಬಹಳ ಆಸಕ್ತಿಯನ್ನು ಆ ವಿಚಾರದಲ್ಲಿ ವಹಿಸಿದ್ದೀರಿ. ನಿಮಗೆ ವಿಶೇಷವಾಗಿ ನಾನು ಅದಕ್ಕೋಸ್ಕರ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮತ್ತು ಆಡಳಿತ ಸುಧಾರಣೆ ಮತ್ತು ಯೋಜನೇತರ ವೆಚ್ಚಗಳನ್ನು ಕಡಿಮೆ ಮಾಡುವ ದೃಷ್ಟಿಯಿಂದಾಗಿ ಡಿವಿಜನಲ್ ಮಟ್ಟದ ಹುದ್ದೆಗಳನ್ನು ರದ್ದುಮಾಡಿರತಕ್ಕದ್ದು, ಒಂದು ವರ್ಷ ಹೊಸ ವಾಹನಗಳನ್ನು ಖರೀದಿ ಮಾಡದೇ ಇರತಕ್ಕದ್ದು, ನಿಯಮ 285ಕ್ಕೆ ಕೆಸಿಎಸ್‌ಆರ್ ರೂಲ್ಸ್‌ಗೆ ತಿದ್ದುಪಡಿಯನ್ನು ಮಾಡಲಿಕ್ಕೆ ಹೊರಟಿರುವುದು, ಸಾರ್ವತ್ರಿಕ ವರ್ಗಾವಣೆಯನ್ನು ಈ ವರ್ಷ ರದ್ದು ಮಾಡಿರುವುದು ಇದೆಲ್ಲವೂ ಸಹಿತ ನಾವು ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ಯೋಜನೇತರ ವೆಚ್ಚಗಳನ್ನು ಕರ್ನಾಟಕ ಸರ್ಕಾರ ಕಡಿಮೆ ಮಾಡದೇ ಹೋದರೆ ಇವತ್ತು ನಾವು ಬಹಳ ಕೆಳಹಂತಕ್ಕೆ ಹಣಕಾಸಿನ ದೃಷ್ಟಿಯಿಂದಾಗಿ ಹೋಗುತ್ತೇವೆ ಎನ್ನುವುದನ್ನು ಒಪ್ಪುತ್ತೇವೆ. ಮತ್ತೆ ಕೆಲವಕ್ಕೆ ತೆರಿಗೆ ವಿನಾಯಿತಿಯನ್ನು

ಕೊಟ್ಟಿದ್ದೀರಿ, ತೆಂಗಿನಕಾಯಿ, ಕೊಬ್ಬರಿ, ಕಡ್ಲೆಬೀಜ, ಸೂರ್ಯಕಾಂತಿ ಬೀಜ, ಎಣ್ಣೆ ಬೀಜ ಇದರ ಮಾರಾಟ ತೆರಿಗೆಯನ್ನು 4 ರಿಂದ 2 ಪರ್‌ಸೆಂಟ್‌ಗೆ ಇಳಿಸಿದ್ದೀರಿ. ಅಡಿಕೆ ಮೇಲೆ ಮಲ್ಟಿ ಪಾಯಿಂಟ್ ಟ್ಯಾಕ್ಸ್ ಟಿ.ಓ.ಟಿ. ಇಷ್ಟನ್ನೂ ಸಹಿತ ರದ್ದು ಮಾಡಿರತಕ್ಕದ್ದನ್ನು ಈ ಆಯವ್ಯಯದಲ್ಲಿ ಮೇಲುನೋಟಕ್ಕಷ್ಟೇ ಅಲ್ಲ, ಒಳಹೊಕ್ಕು ನೋಡಿದಾಗಲೂ ಸಹಿತ ಯಾರು ಸಹಿತ ಇದನ್ನು ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಈ ಸರ್ಕಾರದ ವೈಫಲ್ಯತೆಗಳೇನು? ಇವರು ಹೇಳಿರುವ ವಿಚಾರಗಳಲ್ಲಿ ಅನುಮಾನಗಳೇನು? ಯಾವುದನ್ನು ಮಾಡುವುದಕ್ಕೆ ಆಗುವುದಿಲ್ಲ, ಯಾವುದು ಬರೀ ಘೋಷಣೆಗಳನ್ನು ಮಾಡಿಕೊಂಡಿದ್ದಾರೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಇವರ ಟ್ರ್ಯಾಕ್ ರೆಕಾರ್ಡ್ ಏನು? ಇವರು ಕಳೆದ ವರ್ಷ ಏನೇನು ಮಾಡಿದ್ದಾರೆ ಎನ್ನುವುದು ಕೆಲವು ಅಸಾಧ್ಯವಾಗಿರತಕ್ಕ ಮಾತು. ಇವರು ಹೇಳಿರುವ ಮಾತುಗಳನ್ನು ನೋಡಿದರೆ ಇದಕ್ಕಿಂತ ಸರ್ವಶ್ರೇಷ್ಠವಾದ ಆಯವ್ಯಯ ಇಂಡಿಯಾ ದೇಶದಲ್ಲಿ ಯಾವ ಮುಖ್ಯ ಮಂತ್ರಿಯೂ ಮಾಡಿಲ್ಲ. ಯಾವ ಅರ್ಥ ಸಚಿವರೂ ಮಾಡಿಲ್ಲ ಎನ್ನುವುದನ್ನು ಬೊಗಳೆ ಹೊಡೆದುಕೊಂಡಿದ್ದಾರೆ. ಶಿವನಸಮುದ್ರ, ಕಾವೇರಿ ವಿವಾದದ ಬಗ್ಗೆ ಇರತಕ್ಕ ಮುಖ್ಯವಾದ ವಿಚಾರ. ಕಾವೇರಿ ನೀರಿನ ವಿಚಾರ ಬಗೆಹರಿಯದೆ ಶಿವನಸಮುದ್ರದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡತಕ್ಕಂಥದ್ದರ ಬಗ್ಗೆ ತಾವು ಹೇಳಿದ್ದೀರಿ, ಇದು ಹೇಗೆ ಸಾಧ್ಯ? ಟಿ ಅಂಡ್ ಡಿ ಲಾಸಸ್ ಇವರೇ ಹೇಳಿದ ಹಾಗೆ ಕೆಇಬಿ ಯಲ್ಲಿ ಟ್ರಾನ್ಸ್‌ಮಿಷನ್ ಲಾಸಸ್ ಕಳೆದ ವರ್ಷ 20 ಇದ್ದದ್ದು ಈ ವರ್ಷ 38 ಕ್ಕೆ ಹೋಗಿದೆ. ಇದನ್ನು 9 ಪರ್‌ಸೆಂಟ್‌ಗೆ ಇಳಿಸುತ್ತೇವೆಂದು ಹೇಳಿದ್ದಾರೆ. ಮತ್ತೆ ತತ್ಕಾಲ್ ಯೋಜನೆ. ಯಾರಿಗೋಸ್ಕರ ಸ್ವಾಮಿ ಈ ತತ್ಕಾಲ್ ಯೋಜನೆಯನ್ನು ತಂದಿರುವುದು? ಮಾನ್ಯ ಪ್ರಧಾನಮಂತ್ರಿಗಳು ಬಡವರಿಗೆ ರೈತರಿಗೆ 50 ಪೈಸೆಗೆ ಒಂದು ಯೂನಿಟ್ ಕರೆಂಟನ್ನು ಕೊಡಿ ಎಂದರೆ ನೀವು 1.35 ಪೈಸೆಗೆ ಕರೆಂಟನ್ನು ಮಾರುತ್ತೇವೆಂದು ಹೇಳಿದ್ದೀರಲ್ಲಾ, ಯಾರು ಈ ಕರೆಂಟನ್ನು ತೆಗೆದುಕೊಳ್ಳುತ್ತಾರೆ? ಒಬ್ಬ ಬಡವ 25 ಸಾವಿರ ರೂಪಾಯಿ ಕೊಟ್ಟು ಐಪಿ ಸೆಟ್ ಕನೆಕ್ಷನನ್ನು ಯಾರು ತೆಗೆದುಕೊಳ್ಳುವುದಕ್ಕಾಗುತ್ತದೆ ಎಂಬುದನ್ನು ದಯವಿಟ್ಟು ಹೇಳಿ. ಅದಷ್ಟೇ ಅಲ್ಲ, ಭ್ರಷ್ಟಾಚಾರಕ್ಕೆ ಮಾರ್ಗವಾಗುತ್ತದೆ. ಇದರ ಬಗ್ಗೆ ನಮಗೆ ಬಹಳ ಅನುಮಾನ ಇದೆ ಮತ್ತೆ ನಿರಂತರವಾಗಿ ವಿದ್ಯುತ್ ಎಂದು ಹೇಳುತ್ತೀರಿ ನಾನು ರೂಲ್ 69 ರಲ್ಲಿ ವಿದ್ಯುಚ್ಛಕ್ತಿಯ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಹೇಳಿದೆ. ಮಹಾರಾಷ್ಟ್ರದಿಂದ ಬೇರೆ ಬೇರೆ ಖಾಸಗಿ ವಿದ್ಯುತ್ತಿನ ಉತ್ಪಾದನಾ ಕೇಂದ್ರಗಳಿಂದ ವಿದ್ಯುತ್‌ನ್ನು ತೆಗೆದುಕೊಳ್ಳುವುದಕ್ಕೆ ನೂರು ಕೋಟಿ ರೂಪಾಯಿಗಳನ್ನು ಕೊಡಿ ಎಂದು ಹೇಳಿದೆ. ನೂರಲ್ಲ, 2,800 ಕೋಟಿ ರೂಪಾಯಿಗಳು ಬಾಕಿ ಇದೆ. 2,800 ಕೋಟಿ ರೂಪಾಯಿ ರಾಜ್ಯ ಸರ್ಕಾರದಿಂದ ಕೆಇಬಿ ಗೆ ಮತ್ತು ಕೆಪಿಟಿಸಿಎಲ್‌ಗೆ ಬಾಕಿ ಇದೆ. ಮೂರು ವರ್ಷದ್ದು ಬಾಕಿ ಇದೆ. ನಮ್ಮ ಕಾಲದಲ್ಲಿ ಇದ್ದದ್ದು 700 ಕೋಟಿ ರೂಪಾಯಿಗಳು. ಈ ಎರಡು ವರ್ಷಗಳಲ್ಲಿ ಆಗಿರುವುದು 2,200 ಕೋಟಿ ರೂಪಾಯಿಗಳು. 2,900 ಕೋಟಿ ರೂಪಾಯಿಗಳ ಬಗ್ಗೆ ಏನೂ ಸಹಿತ ಆಯವ್ಯಯದಲ್ಲಿ ಹೇಳದೆ ಬಂಡವಾಳ ಇಲ್ಲದೇ ಇರುವ ಬಡಾಯಿಯನ್ನು ಹೊಡೆದುಕೊಂಡು ಈ ಆಯವ್ಯಯ ಬಹಳ ಚೆನ್ನಾಗಿದೆ ಎಂದು ಹೇಳುತ್ತಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ: ನೀವ್ಯಾಕೆ 700 ಕೋಟಿ ರೂಪಾಯಿಗಳನ್ನು ಉಳಿಸಿ ಹೋಗಿದ್ದೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ: ನಿರಂತರವಾದ ವಿದ್ಯುಚ್ಛಕ್ತಿಯನ್ನು ಕೊಡುತ್ತಾರಂತೆ. ನಿರಂತರವಾದ ವಿದ್ಯುತ್ತನ್ನು ಕೊಡಬೇಕಾದರೆ ನೀವು ಮುಖ್ಯವಾಗಿ ಮಾಡಬೇಕಾಗಿರುವುದು 25 ಕೋಟಿ ರೂಪಾಯಿಗಳನ್ನು ಕೆಇಬಿಗೆ ಕೊಡಿ ರೈತರ ಪರಿಸ್ಥಿತಿ ಯಾವ ಸ್ಥಿತಿಗೆ ಬಂದಿದೆ? ಭೂಕಂದಾಯವನ್ನು ಪಂಚಾಯಿತಿಗೆ ವಸೂಲು ಮಾಡಲು ಕೊಡುತ್ತಾರಂತೆ. ಯಾವ ಊರಿನಲ್ಲಿ ರೆವಿನ್ಯೂ ಕಲೆಕ್ಷನ್ ಭೂಕಂದಾಯ ಆಗುತ್ತಿದೆ ಸ್ವಾಮಿ? ಯಾರಿಗೆ ಇದನ್ನೆಲ್ಲಾ ನೀವು ಹೇಳುತ್ತಿದ್ದೀರಿ? ಹೋದ ವರ್ಷ ಜಂಬ ಹೊಡೆದುಕೊಂಡಿರಿ. ಇವರೇನು ಹೇಳಿದರು, ಜನ ನಗುತ್ತಾರೆ, ಕರ್ನಾಟಕದಲ್ಲಿ ಒಂದು ಸಾವಿರ ಸ್ವಚ್ಛ ಗ್ರಾಮಗಳು. ಎಲ್ಲಿ ಸ್ವಾಮಿ? ಮುಳುಬಾಗಿಲಿನಲ್ಲಿ ಮಾಡಿದ್ದಾರಾ? ಕನಕಪುರದಲ್ಲಿ ಮಾಡಿದ್ದಾರಾ? ಮದ್ದೂರಿನಲ್ಲಿ ಮಾಡಿದ್ದಾರಾ? ಯಾವ ಊರಿನಲ್ಲಿ ಮಾಡಿದ್ದಾರೆ? ಸ್ವಚ್ಛ ಗ್ರಾಮಗಳನ್ನು ಇನ್ನೂ ಗುರುತು ಹಚ್ಚುವುದಕ್ಕೆ ಆಗಿಲ್ಲ. ಅದನ್ನು ಒಂದು ದೊಡ್ಡ ಬಡಾಯಿ ಎಂದು ಹೇಳಿದ್ದಾರೆ. ಒಂದು ಸಾವಿರ ಊರುಗಳನ್ನು ಸ್ವಚ್ಛ ಮಾಡಿಬಿಡುತ್ತೇವೆಂದು ಹೇಳಿ. ನಮಗೊಂದು ಅನುದಾನ. ಮಾನ್ಯ ತಿಮ್ಮಪ್ಪನವರೇ, ನೀವೇ ಹೇಳಿ ತಮ್ಮ ಉತ್ತರದಲ್ಲಿ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರ ಮೇಲೆ ಸರ್ಟಿಫಿಕೇಟ್ ಕೊಡುವಾಗ ಶಿಕ್ಷೆ ಮಾಡುತ್ತೇವೆ ಎಂದು. ಅದಕ್ಕೆ ಕಾನೂನಿನಲ್ಲಿ ಅವಕಾಶ ಇದೆ. ಅದನ್ನು ನೀವೇನು ಬಜೆಟ್‌ನಲ್ಲಿ ಹೇಳುವುದು? ಎಐಸಿಸಿ ಅಧಿವೇಶನವಾಯಿತು. ಖಾಸಗೀಕರಣವನ್ನು ನಾವು ಮಾಡುವುದಿಲ್ಲ, ಮತ್ತೆ 70ರ ಕಾಂಗ್ರೆಸ್‌ನ ವಿಚಾರಗಳನ್ನು ತೆಗೆದುಕೊಂಡು ಬರುತ್ತೇವೆ ಎಂದು ಹೇಳಿದರು. ಈ ಆಯವ್ಯಯದಲ್ಲಿ ಏನು ಹೇಳಿದ್ದೀರಿ? ನೂರು ಕೋಟಿ ರೂಪಾಯಿಗಳನ್ನು ವಾಲಂಟರಿ ರೈಟರ್‌ಮೆಂಟ್‌ಗೆ ಕೊಡುವುದಾಗಿ ಹೇಳುತ್ತೀರಿ. 12 ಉದ್ದಿಮೆಗಳನ್ನು ಇನ್ನು ಮೂರು ತಿಂಗಳಿನಲ್ಲಿ ಖಾಸಗೀಕರಣ ಮಾಡುವುದಾಗಿ ಹೇಳಿದ್ದೀರಿ. ತಾವು ಅನುಸರಿಸುತ್ತಿರುವ ಆರ್ಥಿಕ ನೀತಿಯು ಬಡವರಿಗೆ ಉಪಯೋಗವಾತಕ್ಕದ್ದಲ್ಲವೆಂಬ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಗ್ರಾಮೀಣ ಪ್ರದೇಶದ ಜನಗಳಿಗೆ ಅನುಕೂಲವಾಗತಕ್ಕದ್ದಲ್ಲ. ಶಾಸಕರಿಗೆ 25 ಲಕ್ಷ ರೂಪಾಯಿ ಕ್ಷೇತ್ರದ ಅಭಿವೃದ್ಧಿಗೆ ಕೊಡುವುದಾಗಿ ಹೇಳಿದ್ದಾರೆ. ಆದರೆ ಅದು ಕನ್ನಡಿಯೊಳಗಿರುವ ಗಂಟು. ಅದಕ್ಕಾಗಿ ನಾನ್ ಪ್ಲಾನ್ ವೆಚ್ಚವು ಕಡಿಮೆಯಾಗಬೇಕು, ನಮ್ಮೆಲ್ಲರ ಸಹಕಾರ ಬೇಕೆಂದು ಹೇಳಿದ್ದಾರೆ. ನಾನ್ ಪ್ಲಾನ್ ವೆಚ್ಚ ಕಡಿಮೆ ಮಾಡಲು ನಮ್ಮಗಳ ಸಹಕಾರ ಏತಕ್ಕೆ? ಮೊದಲು ತಮ್ಮ ಮಂತ್ರಿ ಮಂಡಲದ ಸಂಖ್ಯೆಯನ್ನು ಕಡಿಮೆ ಮಾಡಿ. ವೆಚ್ಚವನ್ನು ಕಡಿಮೆ ಮಾಡಿ, ನಾವು ವೆಚ್ಚ ಸುಧಾರಣೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿದರೆ, ಅನಗತ್ಯ ಸಹಾಯಧನವನ್ನು ನಿವಾರಿಸಿದರೆ, ವಿತ್ತೀಯ ಕೊರತೆ ಯಶಸ್ವಿಯಾಗಿ ತಗ್ಗಿದರೆ ಎಂದು ಬಜೆಟ್‌ನಲ್ಲಿ ಹೇಳಿದ್ದೀರಿ. ತಮ್ಮ ಬಜೆಟ್‌ನಲ್ಲಿ ವಿತ್ತೀಯ ಕೊರತೆ 2,900 ಕೋಟಿ ರೂಪಾಯಿ ಇದೆ. ಹಾಗಿದ್ದರೆ ಶಾಸಕರ ಕ್ಷೇತ್ರಕ್ಕೆ 25 ಲಕ್ಷ ರೂಪಾಯಿಗಳಂತೆ 75 ಕೋಟಿ ರೂಪಾಯಿಗಳನ್ನು ಹೇಗೆ ಕೊಡುತ್ತೀರಿ? ಆ ರೀತಿ ವಿತ್ತೀಯ ಕೊರತೆಯನ್ನು ಯಶಸ್ವಿಯಾಗಿ ತಗ್ಗಿಸಿದರೆ ಮಾತ್ರ ಈ ಮೊತ್ತವನ್ನು ಹಂಚಿಕೆ ಮಾಡಲು ಸಾಧ್ಯ ಎನ್ನುವುದನ್ನು ನಾನು ಹೇಳಲೇ ಬೇಕಾಗಿದೆಯೆಂದು ಹೇಳಿದ್ದೀರಿ. ಆದ್ದರಿಂದ ಇದು ಒಂದು ಕನ್ನಡಿಯೊಳಗಿನ ಗಂಟು ಎಂದು ಹೇಳಿದ್ದು. ಪ್ರಾದೇಶಿಕ ಅಸಮಾನತೆಯ ಬಗ್ಗೆ ಹೇಳುತ್ತಾ

ಹುಬ್ಬಳ್ಳಿ ಮತ್ತು ಬಳ್ಳಾರಿ ಆಸ್ಪತ್ರೆಗಳಿಗೆ 10 ಕೋಟಿ ರೂಪಾಯಿಗಳನ್ನು ಕೊಡುವುದಾಗಿ ಹೇಳಿದ್ದಾರೆ. ಅದನ್ನು ಒಪ್ಪಿಕೊಳ್ಳೋಣ. ಹಾಗಾದರೆ ರಾಯಚೂರಿನ ಒಪೆಕ್ಸ್ ಆಸ್ಪತ್ರೆಯ ಗತಿ ಏನಾಯಿತು? ಜಿಲ್ಲಾ ಸಚಿವರು ಇಲ್ಲೇ ಇದ್ದಾರೆ. ನಿಮ್ಮ ಅಧ್ಯಕ್ಷರಿಂದ ಅದನ್ನು ಉದ್ಘಾಟನೆ ಮಾಡಿಸಿದಿರಾ? ಆಸ್ಪತ್ರೆ ನಡೆಯುತ್ತಿದೆಯೇ? ಯಾವ ಸ್ಥಿತಿಗೆ ಅದು ಬಂದಿದೆ? ಅದಕ್ಕೆ 30 ಕೋಟಿ ರೂಪಾಯಿಗಳನ್ನು ತೊಡಗಿಸಿ ಅಲ್ಲಿ ಒಬ್ಬ ವೈದ್ಯರೂ ಇಲ್ಲ, ಇನ್‌ಸ್ಟ್ರುಮೆಂಟ್ ಇಲ್ಲ. ಆ ಒಪೆಕ್ಸ್ ಆಸ್ಪತ್ರೆಯ ಬಗ್ಗೆ ತಾವು ಹೇಳುವುದಿಲ್ಲ. ಯಾವ ಘನ ಉದ್ದೇಶದಿಂದ ಬೀದರ್, ಬಳ್ಳಾರಿ, ಗುಲ್ಬರ್ಗಾ, ರಾಯಚೂರು ಗಳ ಬಡವರಿಗೆ ಅನುಕೂಲವಾಗಬೇಕೆಂದು ಒಪೆಕ್ಸ್ ಆಸ್ಪತ್ರೆ ಮಾಡಿದರೆ ಮುಖ್ಯಮಂತ್ರಿಗಳು ಚಕಾರವೆತ್ತಿಲ್ಲ. ಬಳ್ಳಾರಿಗೆ 3,300 ಕೋಟಿ ರೂಪಾಯಿಗಳನ್ನು ಕೊಡುವುದಾಗಿ ಏನು ಹೇಳಿದ್ದರು ಅದರ ಬಗ್ಗೆ ಅವರ ಚಕಾರವಿಲ್ಲ. ಅಲಘ್ ಸಮಿತಿಯ ವರದಿ ಮೂಲೆಗುಂಪಾಯಿತು, ಈಗ ಮಾನ್ಯ ನಂಜುಂಡಪ್ಪನವರ ಸಮಿತಿ ಮಾಡಿದ್ದಾರೆ. ಕೇವಲ ಕಮಿಟಿ ಮಾಡುವುದರಲ್ಲೇ ಕಾಲ ಕಳೆಯುತ್ತೀರಾ. ಸಾರ್ವಜನಿಕ ವೆಚ್ಚ ಪರಿಶೀಲನಾ ಸಮಿತಿಯನ್ನು ಮಾಡಿರುವುದಾಗಿ ಹೇಳಿದ್ದಾರೆ. ಅದನ್ನು ಎಂದು ಮಾಡುತ್ತಾರೋ ಗೊತ್ತಿಲ್ಲ. ಇವುಗಳು ನನಗೆ ಇರುವ ಅನುಮಾನಗಳು. ಕಳೆದ ವರ್ಷ ಇವರು ಏನು ಹೇಳಿದ್ದರು ಅದರಲ್ಲಿ ಏನು ಮಾಡಿದ್ದಾರೆ ಎಲ್ಲಿ ವಿಫಲರಾಗಿದ್ದಾರೆ ಎಂಬ ಬಗ್ಗೆ ಹೇಳಬೇಕಾಗುತ್ತದೆ. ರಾಜ್ಯದ ಯೋಜನಾ ಆಯೋಗ ರಚನೆಯಾಯಿತು. ಅದಕ್ಕೆ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಯವನ್ನು ಉಪಾಧ್ಯಕ್ಷರನ್ನಾಗಿ ಮಾಡಿದ್ದೀರಿ. ತಮಗೆ ಕಳೆದ 16 ತಿಂಗಳಿನಲ್ಲಿ ಯೋಜನಾ ಆಯೋಗವನ್ನು ರಚನೆ ಮಾಡಲು ಆಗಿಲ್ಲ. ಯೋಜನಾ ಆಯೋಗ ಏನು ಶಿಫಾರಸ್ಸು ಮಾಡಿದೆಯೋ ತಮಗೆ ಗೊತ್ತಿಲ್ಲ. ಕರಸಮಾಧಾನ ಯೋಜನೆ ಜಾರಿಗೆ ತರುವುದಾಗಿ ಹೇಳಿದರು. ಅದರ ಮೂಲಕ 200 ಕೋಟಿ ರೂಪಾಯಿಗಳನ್ನು ವಸೂಲಿ ಮಾಡುವುದಾಗಿ ಹೇಳಿದ್ದರು. ಆದರೆ ತಾವು ಎಲ್ಲಿ ಗ್ರಾಮೀಣ ಬಡ ಮಹಿಳೆಯರಿಗೆ ವೈಯಕ್ತಿಕ ಆರೋಗ್ಯ ಕಿಟ್ಟುಗಳ ಅಗತ್ಯವಿದೆ, ಈ ಯೋಜನೆಗೆ 18 ಕೋಟಿ ರೂಪಾಯಿಗಳ ವಾರ್ಷಿಕ ಅನುದಾನವನ್ನು ನಿಗದಿಗೊಳಿಸಲಾಗಿದೆಯೆಂದು ಹೇಳಿದ್ದರು. ಆದರೆ ಈ ವರ್ಷ ಇದಕ್ಕೆ 2 ಕೋಟಿ 30 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಎರಡು ಲಕ್ಷ ಮನೆಗಳನ್ನು ಕಟ್ಟುವುದಾಗಿ ಹೇಳಿದ್ದರು. 16 ತಿಂಗಳುಗಳಾಯಿತು ಇದುವರೆಗೆ 30 ಸಾವಿರ ಮನೆಗಳೂ ಪೂರ್ಣವಾಗಿಲ್ಲ. ಇಂದಿರಾ ಆವಾಜ್, ಅಂಬೇಡ್ಕರ್ ಯೋಜನೆಯನ್ನು ಬಿಟ್ಟು ಆಶ್ರಯದಲ್ಲಿ ತಾವು ಏನು ಮಾಡಿದ್ದೀರಿ? ಆಶ್ರಯದಲ್ಲಿ ಒಂದೂವರೆ ಲಕ್ಷ ಮನೆ ಕಟ್ಟುವುದಾಗಿ ಹೇಳಿದ್ದರು, ಆದರೆ ಕಳೆದ 16 ತಿಂಗಳುಗಳಲ್ಲಿ ಒಂದು ಮನೆಯೂ ಆಗಿಲ್ಲ. ಈ ವರ್ಷ ಪುನಃ ಎರಡು ಲಕ್ಷ ಮನೆಗಳನ್ನು ಕೊಡುತ್ತಾರಂತೆ, ಹಳ್ಳಿಗಳಲ್ಲಿ ಒಂದು ರೀತಿ ಬಾಂಬೆ ಬಂತು, ಮದ್ರಾಸ್ ಬಂತು, ಸಿಂಗಪೂರ್ ಬಂತು ಎಂದು ತೋರಿಸುತ್ತಾರೆ, ಆ ರೀತಿ ಆಗಿದೆ ಇದು. ಇವರ ಹತ್ತಿರ ಹಣವೆಲ್ಲಿದೆ. ಕರ್ನಾಟಕ ರಾಜ್ಯದಲ್ಲಿ ಎಂದಾದರೂ 35 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದ ಉದಾಹರಣೆ ಇದೆಯೇ?

ಶ್ರೀ ಐಪಿಯರುಲ್ ಇಸ್ಲಾಂ (ವಸತಿ ಸಚಿವರು): ನಾನು ಪಟ್ಟಿಯನ್ನು ಕೊಟ್ಟಿದ್ದೇನೆ. You are a senior leader. I have got lot of respect to you. In 16 districts, this year they have completed 100%. Sir, let him say

with Deputy Commissioner's report about the target that we have achieved. Such a senior leader is speaking sarcastically. I can understand speaking from opposition, but not to this extent.

ಶ್ರೀ ಪಿ.ಜಿ.ಆರ್. ಸಿಂಧ್ಯ: ನಾನು ಭಾಷಣ ಮಾಡತಕ್ಕ ಸಂದರ್ಭದಲ್ಲಿ ಅವರು ಇರಲಿಲ್ಲ. ಮಧ್ಯದಲ್ಲಿ ಬಂದು ಕೂಗಾಡಲು ಹೋಗಬೇಡಿ. ನಾನು ಏನು ಹೇಳಿದ್ದೇನೆ ಎಂಬುದನ್ನು ದಯಮಾಡಿ ಕಾಗೋಡು ತಿಮ್ಮಪ್ಪನವರಿಂದ ತಿಳಿದುಕೊಳ್ಳಿ. ರಾಜ್ಯದ ಇತಿಹಾಸದಲ್ಲಿ 35 ಜನ ರೈತರ ಆತ್ಮಹತ್ಯೆ ಎಂದೂ ಆಗಿರಲಿಲ್ಲ. ನಮ್ಮ ರೈತ ಬಜೆಟ್‌ನ ಕೇಂದ್ರ ಬಿಂದು ಎಂದು ಹೇಳಿದ್ದಂಥ ಮುಖ್ಯ ಮಂತ್ರಿಗಳು ಕನಿಷ್ಟಪಕ್ಷ ಆತ್ಮಹತ್ಯೆ ಮಾಡಿಕೊಂಡ ಒಂದಾದರೂ ಕುಟುಂಬಕ್ಕೆ ತಮ್ಮ ಮುಖವನ್ನು ತೋರಿಸುವ ಸೌಜನ್ಯವನ್ನು ತೋರಿಸಿದ್ದೀರಾ ಒಂದು ಕಡೆ ಮುಖ್ಯ ಮಂತ್ರಿಗಳು ಹೋಗಿ ಏಕೆ ಹೀಗೆ ಮಾಡಿಕೊಳ್ಳುತ್ತಿದ್ದೀರಾ ಎಂದು ಕೇಳಲಿಲ್ಲ. ಎಲ್ಲದಕ್ಕೂ ಟಾಸ್ಕ್ ಫೋರ್ಸ್‌ಗಳನ್ನು ಮಾಡುತ್ತಾರೆ. ಎಲ್ಲದಕ್ಕೂ ಸಮಿತಿಗಳನ್ನು ರಚನೆ ಮಾಡುತ್ತಾರೆ. ಆತ್ಮಹತ್ಯೆ ಮಾಡಿಕೊಳ್ಳುವ ಬಗ್ಗೆ ಸದನದ ಸಮಿತಿ ಮಾಡಿ ಏಕೆ ಹಾಗೆ ಮಾಡಿಕೊಳ್ಳುತ್ತಾರೆ ಎಂಬ ಬಗ್ಗೆ ಕೇಳುವ ಔದಾರ್ಯವನ್ನು ತೋರಿಸಲಿಲ್ಲವಲ್ಲ ಎಂಬ ನೋವು ನನಗನಿಸಿದೆ. ಸರ್ಕಾರಕ್ಕೆ ಮೋಟಾರ್ ವಾಹನ ಇಲಾಖೆ, ಅಬ್ಕಾರಿ ಇಲಾಖೆ, ವಾಣಿಜ್ಯ ತೆರಿಗೆಗಳು ಈ ಮೂರು ಇಲಾಖೆಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಆದಾಯ ಬರುತ್ತದೆ. ಮೋಟಾರ್ ಇಲಾಖೆಯಿಂದ 520 ಕೋಟಿ ರೂಪಾಯಿಗಳ ಗುರಿ ಇತ್ತು. ಅಂದಾಜು 470 ಕೋಟಿ ರೂಪಾಯಿಗಳನ್ನು ಗುರಿ ಮುಟ್ಟಬಹುದು. 50 ಕೋಟಿ ರೂಪಾಯಿಗಳ ಕೊರತೆ ಇದೆ. ತಾವು ಅಲ್ಲಿಗೆ ಒಬ್ಬರು ಅಧಿಕಾರಿಯನ್ನು ಹಾಕಿದ್ದೀರಿ. ತಾವು ಅದನ್ನು ಮಾಡಬೇಕು, ಇದನ್ನು ಮಾಡಬೇಕೆಂದು ಇಲ್ಲಿಂದ ಆದೇಶವನ್ನು ಕೊಡುತ್ತೀರಿ. ಆ ಕಛೇರಿಯಲ್ಲಿ ತಮ್ಮ ಆದೇಶವನ್ನು ಯಾವ ರೀತಿ ಪಾಲಿಸುತ್ತಾರೆ ಗೊತ್ತೆ? ಬೆಂಗಳೂರಿನಲ್ಲಿರುವ ಐದು ಆರ್.ಟಿ.ಓ. ಗಳಿಂದ ಟ್ರಾನ್ಸ್‌ಪೋರ್ಟ್ ಕಮೀಷನವರ್‌ರವರ ಖರ್ಚಿಗೆಂದು 25 ಸಾವಿರ ರೂಪಾಯಿಗಳನ್ನು ತಂದುಕೊಡಬೇಕೆಂದು ಫಿಕ್ಸ್ ಮಾಡಿದ್ದಾರೆ. ಅವರು ಒಂದು ವಾಹನ ತರಿಸಿಕೊಂಡಿದ್ದು ಆ ಕುರಿತ ದಾಖಲಾತಿಗಳನ್ನು ನಾನು ಕೊಡುತ್ತೇನೆ. ಆ ವಾಹನಕ್ಕೆ ಕೆ.ಎಸ್.ಆರ್.ಟಿ. ಯಿಂದ ಪೆಟ್ರೋಲ್ ತುಂಬಿಸಿಕೊಳ್ಳುತ್ತಾರೆ ಮತ್ತು ಅದಕ್ಕೆ ಒಬ್ಬ ಡ್ರೈವರ್ ಸಹಿ ಮಾಡುತ್ತಾನೆ. ಆತನನ್ನು ಯಾರೆಂದು ಕೇಳಿ ನೂರು ಸಲ ಟೆಲಿಫೋನ್ ಮಾಡಿದರೂ ಟ್ರಾನ್ಸ್‌ಪೋರ್ಟ್ ಕಮೀಷನರ್ ಅಲ್ಲಿ ಸಿಗುವುದಿಲ್ಲ. ಅಲ್ಲದೆ, ಅಲ್ಲಿಗೆ ಯಾರೇ ಅಧಿಕಾರಿಗಳು ಹೋಗಿ 'ನಿಮ್ಮ ಮೇಲೆ ಲೋಕಾಯುಕ್ತ ಇದೆ' ಎಂದರೆ ಅದಕ್ಕವರು 'ಅದು ನನ್ನ ಕೆಳಗಡೆ ಇದೆ' ಎಂದೆನ್ನುತ್ತಾರೆ। ಅಂದರೆ, ಮೊದಲ ಮಹಡಿಯಲ್ಲಿ ಟ್ರಾನ್ಸ್‌ಪೋರ್ಟ್ ಕಮೀಷನರ್ ಇದ್ದಾರೆ, ನೆಲ ಮಹಡಿಯಲ್ಲಿ ಲೋಕಾಯುಕ್ತರಿದ್ದಾರೆ। ಇಂತಹ ಅಧಿಕಾರಿಗಳನ್ನು ನೀವು ಇಟ್ಟುಕೊಂಡು how can you reach your target? ಆಕ್ಸಿಡೆಂಟ್ ರೇಟನ್ನು ಕಡಿಮೆ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ, ಅದನ್ನು ಹೇಗೆ ಕಡಿಮೆ ಮಾಡುತ್ತೀರಿ? ಮಾನ್ಯ ಮುಖ್ಯಮಂತ್ರಿಗಳು ಸಾರಿಗೆ ಆಯುಕ್ತರ ಕಛೇರಿಯಲ್ಲಿರುವ ಅಧಿಕಾರಿಗಳನ್ನು ಕರೆಸಲಿ. ಆದರೆ, ಮುಖ್ಯಮಂತ್ರಿಗಳಿಗೆ ಗೊತ್ತಾಗುವುದಿಲ್ಲ, ಅವರ ಸುತ್ತಲೂ ಒಂದು ಕಾಕಸ್ ಇರುತ್ತದೆ. ಯಾರೇ ಅಧಿಕಾರದಲ್ಲಿದ್ದರೂ ಒಂದು ಕಾಕಸ್ ಇರುತ್ತದೆ. ಮುಖ್ಯಮಂತ್ರಿಗಳ ಹೆಸರನ್ನು

ಕನ್‌ವೀನಿಯೆಂಟಾಗಿ ಡ್ರಾಪ್ ಮಾಡುತ್ತಾ 'ನಾನು ಸಿ.ಎಂ. ಮನುಷ್ಯ, ನಾನು ಸಿ.ಎಂ. ಮನುಷ್ಯ' ಎಂದೆನ್ನುತ್ತಾ ಲಕ್ಷಾಂತರ ರೂಪಾಯಿಗಳನ್ನು ವಸೂಲು ಮಾಡಿದ್ದಾರೆ. ಅಲ್ಲಿರುವ ಅಧಿಕಾರಿಗಳು ಅಫಿಡವಿಟ್ ಕೊಡುವುದಕ್ಕೂ ಸಹ ತಯಾರಿದ್ದಾರೆ. They are prepared to give affidavit saying that this man is demanding money. Orders are not coming from the transport commissioner, but orders are coming from the agents. 'ಶ್ರೀಧರ್' ಎನ್ನುವಂಥ ಪಾಪದ ಪ್ರಾಣಿಗಳನ್ನು ಸಸ್ಪೆಂಡ್ ಮಾಡುತ್ತೀರಿ ಮತ್ತು 'ಒಳ್ಳೆಯದು' ಎಂದು ಸರ್ಟಿಫಿಕೇಟ್ ಕೊಟ್ಟು ರೀ-ಇನ್‌ಸ್ಟೇಟ್ ಮಾಡುತ್ತೀರಿ. ಇಂತಹ ಭ್ರಷ್ಟ ಅಧಿಕಾರಿಗೆ ನೀವು ಕೋಚಿಂಗ್ ಕೊಡುತ್ತಿದ್ದೀರಲ್ಲಾ, ಇದು ಸಾಬೀತಾಗದೆ ಹೋದರೆ ಮಾನ್ಯ ಅಧ್ಯಕ್ಷರು ಕೊಡುವಂಥ ಯಾವುದೇ ಶಿಕ್ಷೆಯನ್ನು ಎದುರಿಸಲು ನಾನು ಸಿದ್ಧನಿದ್ದೇನೆ. If you are fighting against corruption, you do it. ಇದನ್ನು ನಿಮ್ಮ ಕೈಯಿಂದ ಮಾಡುವುದಕ್ಕಾಗುತ್ತದೆಯೇ? ಇದು ಮೊದಲನೆಯದು. ಎರಡನೆಯದಾಗಿ, ಆರ್.ಟಿ.ಓ. ಕಛೇರಿಗಳಲ್ಲಿ ನಾಗರಿಕ ಸನ್ನದು ಕೊಡುತ್ತಾರಂತೆ. ಅದಕ್ಕೋಸ್ಕರವೇ ನಾನು ಹೇಳಿದ್ದು ಭ್ರಷ್ಟಚಾರದ ವಿರುದ್ಧ ಧರ್ಮ ಸಮರ ಮಾಡಬೇಕೆಂದು ನೀವೇನು ಹೇಳುತ್ತಿದ್ದೀರಿ ಮತ್ತು 'ಪಾರದರ್ಶಕ ಸರ್ಕಾರ' ವೆಂದು ಏನು ಸಾಕಷ್ಟು ಹೇಳುತ್ತಿದ್ದೀರಿ, ಈ ತರಹ ನೂರೆಂಟು ವಿಚಾರಗಳನ್ನು ನಾನು ಹೇಳುವುದಿಲ್ಲ. ವಾಣಿಜ್ಯ ತೆರಿಗೆ ಇಲಾಖೆಗೆ ಸಂಬಂಧಿಸಿದಂತೆ ಆಗಿರುವ ನೋಟಿಫಿಕೇಶನ್ ಅನ್ನು ನೀವು ಯಾರ ಅನುಕೂಲಕ್ಕೋಸ್ಕರ ಮಾಡಿದ್ದೀರಿ ಎಂದು ಕೇಳುತ್ತಿದ್ದೇನೆ. ಮತ್ತು ಮುನ್ನೂರು ಬೀರ್ ಅಂಗಡಿಗಳನ್ನು ತೆರೆಯುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದೀರಲ್ಲಾ, ಯಾರಿಗೆ ಅನುಕೂಲ ಮಾಡಿಕೊಡುವುದಕ್ಕೆ ನೀವು ಈ ರೀತಿ ಮಾಡಿದ್ದೀರಿ? ಇದರ ಬಗ್ಗೆ ಇವೊತ್ತು ಜನರು ನಾಚಿಕೊಳ್ಳುತ್ತಾರೆ. ಮಂತ್ರಿಗಳಾಗಿರುವ ಅನೇಕರ ಬಗ್ಗೆ ನನಗೆ ಗೌರವವಿದೆ. ಆದರೆ, ಮುಖ್ಯಮಂತ್ರಿಗಳು ಈ ತರಹ ಮಾಡಬಾರದು. ಇದನ್ನು ನಾನು ನೇರವಾಗಿ ಹೇಳುತ್ತಿದ್ದೇನೆ: ಮುಖ್ಯಮಂತ್ರಿಗಳವರೇ ಆ ಇಲಾಖೆಯನ್ನು ಇಟ್ಟುಕೊಂಡಿದ್ದಾರೆ. ನಾನು ಬೇರೆಯವರ ಬಗ್ಗೆ ಹೇಳುತ್ತಿಲ್ಲ. ಇದರ ಬಗ್ಗೆ ನೀವು ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ಇದಾದ ನಂತರ ವರ್ಗಾವಣೆ ಕುರಿತು ಹೇಳುವುದಾದರೆ, ಈ ವರ್ಷ ವರ್ಗಾವಣೆ ಪ್ರಕ್ರಿಯೆಯನ್ನು ನಿಲ್ಲಿಸುತ್ತಿದ್ದೇವೆಂದು ಹೇಳಿದ್ದಾರೆ. ಏಕೆ? ರೇಟ್ ಜಾಸ್ತಿ ಮಾಡುವುದಕ್ಕೆ ನಿಲ್ಲಿಸುತ್ತಿದ್ದೀರಾ? ಇವೊತ್ತಿನವರೆಗಾದರೂ ವರ್ಗಾವಣೆ ನಿಂತಿದೆಯೇ? ಪ್ರತಿನಿತ್ಯವೂ ವರ್ಗಾವಣೆ ಆಗುತ್ತಲೇ ಇದೆ. 'ಮುಖ್ಯಮಂತ್ರಿಗಳ ಅನುಮೋದನೆಯೊಂದಿಗೆ' ಎಂದು ಬರುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು 'ನಾನು ಈ ವರ್ಷ ಸಾರ್ವತ್ರಿಕ ವರ್ಗಾವಣೆ ಮಾಡುವುದಿಲ್ಲ' ಎಂದು ಆಯವ್ಯಯ ಪತ್ರ ಮಂಡಿಸುವಾಗ ಹೇಳಿದ್ದಾರೆ. ನಿಮ್ಮ ಶಾಸಕಾಂಗ ಪಕ್ಷದಲ್ಲಿ ಆಗಲೇ ಈ ಕುರಿತು ಚರ್ಚೆ ಪ್ರಾರಂಭವಾಗಿದೆ. ಮುಖ್ಯಮಂತ್ರಿಗಳು ಹೇಳಿರುವ ಮಾತನ್ನು ಉಳಿಸಿಕೊಳ್ಳಲಿ ನೋಡೋಣ. ಮತ್ತೊಂದು ವಿಚಾರ ಹೇಳುತ್ತೇನೆ: ಆಡಳಿತ ಪಕ್ಷದ ಮಾನ್ಯ ಸದಸ್ಯರು ಬೇಸರಪಟ್ಟುಕೊಳ್ಳಬಾರದು. ಏನೆಂದರೆ, ಕಳೆದ ಸಾಲಿನ ವರ್ಷದ ಆಯವ್ಯಯ ಪತ್ರದಲ್ಲಿ 'ವಿಶ್ವಬ್ಯಾಂಕಿನ ನೆರವಿನಿಂದ ಬಡತನ ನಿರ್ಮೂಲನವಾದ ಕಾರಣದ ಫಲರಾಗಿ 'ಜಲ ಸಂವರ್ಧನೆ' ಎನ್ನುವ ಯೋಜನೆ ರೂಪಿಸಲಾಗಿದೆ. ಆರಂಭಿಕವಾಗಿ ಈ ಯೋಜನೆಯಡಿ ಇಪ್ಪತ್ತೈದು

ಸಾವಿರ ಕೆರೆಗಳ ಹೂಳು ತೆಗೆದು ಮುಂದಿನ ಐದು ವರ್ಷಗಳಲ್ಲಿ ಪುನರುಜ್ಜೀವನಗೊಳಿಸಲಾಗುವುದು' ಎಂದು ತಿಳಿಸಿದ್ದರೆ, ಪ್ರಸಕ್ತ ಸಾಲಿನ ವರ್ಷದ ಆಯವ್ಯಯ ಪತ್ರದಲ್ಲಿ 'ರಾಜ್ಯಾದ್ಯಂತವಿರುವ ಐದು ಸಾವಿರ ಕೆರೆಗಳ ಪುನಶ್ಚೇತನಗೊಳಿಸುವ ಕಾರ್ಯಕ್ರಮವನ್ನು ಮುಂಬರುವ ಐದು ವರ್ಷಗಳಲ್ಲಿ ಹಮ್ಮಿಕೊಳ್ಳಲಾಗುವುದು' ಎಂದಿದ್ದಾರೆ. ಇಪ್ಪತ್ತೈದು ಸಾವಿರದಿಂದ ಐದು ಸಾವಿರ ಕೆರೆಗಳಿಗೆ ಏಕೆ ಇಳಿಸಿದ್ದೀರಿ? ಇಪ್ಪತ್ತು ಸಾವಿರ ಕೆರೆಗಳ ಪುನಶ್ಚೇತನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಯಿತೇ? ಕೆರೆಗಳಲ್ಲಿನ ಹೂಳೆತ್ತುವ ಕಾರ್ಯಗಳೆಲ್ಲವೂ ಮುಗಿದು ಹೋಯಿತೇ? ಇಂತಹ ವಿಚಾರಗಳ ಕುರಿತು ನಾವು ನಿಮ್ಮನ್ನು ಕೇಳಬಾರದೇ? ಇದು ನಿಮ್ಮ ವೈಫಲ್ಯತೆ ಅಲ್ಲವೇ? ಇದು ನಿಮ್ಮ ಸಾಧನೆಯೇ? ಇದನ್ನೇ ನೀವು 'ಸಾಧನೆ' ಎಂದು ಹೇಳಿಕೊಳ್ಳುವುದಾದರೆ ದೇವರೇ ನಿಮ್ಮನ್ನು ಕಾಪಾಡಬೇಕಷ್ಟೆ. ಅದೇ ರೀತಿ ಕಳೆದ ವರ್ಷದ ಆಯವ್ಯಯ ಪತ್ರದಲ್ಲಿ ಮತ್ತೊಂದು ಮಾತನ್ನು ಹೇಳಿದ್ದೀರಿ. 'ಮಾರ್ಚಿ 21ನೇ ತಾರೀಖಿನೊಳಗೆ ಬೆಂಗಳೂರಿನಲ್ಲಿ ಪಡಿತರ ಚೀಟಿಗಳ ಗಣಕೀಕರಣ ಕಾರ್ಯ ಸಂಪೂರ್ಣಗೊಳ್ಳುತ್ತದೆ' ಎಂದು. ಆದರೆ, ಇನ್ನೂ ಪ್ರಾರಂಭವೇ ಆಗಿಲ್ಲ. ಅದಕ್ಕೋಸ್ಕರವೇ 'ಈ ಬಜೆಟ್ ರೈತರ ಪಾಲಿಗೆ ಸಕ್ಕರೆ ಮಿಠಾಯಿ, ಬಡವರ ಪಾಲಿಗೆ ಕಡಲೇಪುರಿ' ಎಂದು ನಾನು ಹೇಳಿದ್ದು. ನಿಜವಾಗಿಯೂ ಹಣಕಾಸಿನ ಸ್ಥಿತಿ-ಗತಿ ಏನು? ನಿನ್ನೆ ದಿವಸ ಹೇಳಿದ ಒಂದು ವಿಚಾರವನ್ನು ತಿದ್ದಿಕೊಂಡರು. ಪ್ರಸಕ್ತ ವರ್ಷದ ಆಯವ್ಯಯದಲ್ಲಿನ ಯೋಜನಾ ವೆಚ್ಚ 8,588 ಕೋಟಿ ರೂಪಾಯಿಗಳಷ್ಟಿದ್ದರೆ, ಕಳೆದ ವರ್ಷದಲ್ಲಿ 7,274 ಕೋಟಿ ರೂಪಾಯಿಗಳಿದ್ದವು. ಕಳೆದ ವರ್ಷ ನೀವು ಗ್ರಾಮೀಣಾಭಿವೃದ್ಧಿಗೆ ಶೇಕಡ ನಾಲ್ಕರಷ್ಟು ಖರ್ಚು ಮಾಡಿದ್ದೀರಿ. ಈ ವರ್ಷ ಅದನ್ನು ಶೇಕಡ ಮೂರೂವರೆಗೆ ಇಳಿಸಿದ್ದೀರಿ. ಇದು ರೈತರ ಪರವಾಗಿರುವ ಬಜೆಟ್। ಅದೇ ರೀತಿ ನೀರಾವರಿ ಯೋಜನೆಗೆ ಕಳೆದ ವರ್ಷ ಶೇಕಡ ನಲವತ್ತರಷ್ಟು ಹಣ ಇಟ್ಟಿದ್ದರೆ, ಈ ವರ್ಷ ಅದನ್ನು ಶೇಕಡ ಮೂವತ್ತೊಂದಕ್ಕೆ ಇಳಿಸಿದ್ದೀರಲ್ಲಾ, ಇದು ರೈತರ ಪರವಾಗಿರುವ ಬಜೆಟ್। ಅನಂತರ, ಕುಡಿಯುವ ನೀರಿಗಾಗಿ ಶೇಕಡ ಎಂಟರಿಂದ ಏಳಕ್ಕೆ ಇಳಿಸಿದ್ದೀರಲ್ಲ, ಇದು ರೈತರ ಪರವಾಗಿರುವ ಬಜೆಟ್। ಅಲ್ಲದೆ, ಪರಿಶಿಷ್ಟ ಜಾತಿ ಮತ್ತು ಪಂಗಡಗಳವರ ಕಲ್ಯಾಣಕ್ಕೆ ಒದಗಿಸುತ್ತಿದ್ದ ಶೇಕಡ ಮೂರರಷ್ಟು ಹಣವನ್ನು ಸಹ ಕಡಿಮೆ ಮಾಡಿದ್ದಾರೆ. 1999-2000ನೇ ಸಾಲಿನಲ್ಲಿ 5,231 ಕೋಟಿ ರೂಪಾಯಿಗಳಷ್ಟು ಬಜೆಟ್ ಇದ್ದು ಶೇಕಡ ನಲವತ್ತರಷ್ಟು ಬೆಳವಣಿಗೆ ಇದ್ದರೆ, ಪ್ರಸಕ್ತ ವರ್ಷದಲ್ಲಿ 8,578 ಕೋಟಿ ರೂಪಾಯಿಗಳ ಬಜೆಟ್ ಇದ್ದು ಶೇಕಡ ಇಪ್ಪತ್ತೆರಡರಷ್ಟು ಬೆಳವಣಿಗೆ ಕಡಿಮೆಯಾಗಿದೆ. ಏಕೆ ಸುಮ್ಮನೆ ಜಂಭಪಟ್ಟುಕೊಳ್ಳುತ್ತಿದ್ದೀರಿ? ರಾಜ್ಯದ ಈಗಿನ ಹಣಕಾಸಿನ ಪರಿಸ್ಥಿತಿ ಸರಿಯಿಲ್ಲ, ದೇಶದ್ದೂ ಸಹ ಸರಿಯಿಲ್ಲ, ನಾವು ಇದೇ ರೀತಿಯಲ್ಲಿ ಮುಂದುವರೆದುಕೊಂಡು ಹೋಗಬೇಕಾಗಿದೆಯೆಂದು ಹೇಳಬೇಕು. ಅದು ಬಿಟ್ಟು 'ನಾವು ಆಕಾಶವನ್ನೇ ಇಳಿಸುತ್ತೇವೆ' ಎಂದು ಏಕೆ ಇಲ್ಲದ ಬಡಾಯಿ ಕೊಚ್ಚಿಕೊಳ್ಳಲು ಹೊರಟಿದ್ದೀರಿ? ಇನ್ನು ರೆವಿನ್ಯೂ ಡಿಫಿಸಿಟಿ ಕುರಿತು ತಮ್ಮ ಗಮನಕ್ಕೆ ತರುವುದಾದರೆ, ಕಳೆದ ಎರಡು ವರ್ಷಗಳಲ್ಲಿ ರಾಷ್ಟ್ರದ ಯಾವುದೇ ರಾಜ್ಯದಲ್ಲೂ ಕೂಡ ಇಷ್ಟೊಂದು ರೆವಿನ್ಯೂ ಡಿಫಿಸಿಟ್ ಆಗಿರಲಿಲ್ಲ. 2,624 ಕೋಟಿ ರೂಪಾಯಿಗಳಷ್ಟು ರೆವಿನ್ಯೂ ನೀವು ನಿಮ್ಮ ಗಮನಕ್ಕೆ ತರಬೇಕು. 1994-95 ರಲ್ಲಿ ಪ್ಲಸ್ ಐದು ಇದ್ದು ಪಾಸಿಟೀವ್ ಆಗಿತ್ತು, 1995-96 ರಲ್ಲೂ ಪಾಸಿಟೀವ್ ಆಗಿತ್ತು ಮತ್ತು 1996-97 ರಲ್ಲೂ ಪಾಸಿಟೀವ್ ಆಗಿತ್ತು.

(ಈ ಹಂತದಲ್ಲಿ ಮಾನ್ಯ ಛೇರ್ಮನ್‌ರಾದ ಶ್ರೀ ಬಿ.ಬಿ. ಶಿವಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಮಾನ್ಯ ಖಮರುಲ್ ಇಸ್ಲಾಂರವರೇ ಇದು ಪಾಸಿಟೀವ್ ಆಗಿದ್ದರೆ ನಿಮಗೆ ದುಡ್ಡು ಜಾಸ್ತಿ ಬರುತ್ತದೆ, ನೀವು ಇನ್ನು ಹೆಚ್ಚು ಉತ್ಸಾಹದಿಂದ ಹೆಚ್ಚು ಮನೆಗಳನ್ನು ಬಡವರಿಗೆ ಕೊಡಬಹುದು. ನೀವು ಮನೆಗಳನ್ನು ಕೊಡುತ್ತಿಲ್ಲವೆಂದು ನಾನು ಹೇಳುತ್ತಿಲ್ಲ, ಅದಕ್ಕೆ ಸಮಯವಾಗುತ್ತಿಲ್ಲವೆಂದಷ್ಟೆ ಹೇಳಿದ್ದು. ಅಷ್ಟಕ್ಕೆ ತಾವು ಕೋಪಿಸಿಕೊಂಡಿರಿ. 1988-99ನೇ ಸಾಲಿನಲ್ಲಿ ಐದನೇಯ ವೇತನ ಆಯೋಗ ಜಾರಿಯಾದಂಥ ಸಂದರ್ಭದಲ್ಲಿ ರೆವಿನ್ಯೂ ಡಿಫಿಸಿಟ್ ಒಂದು ಸಾವಿರದಷ್ಟಾಯಿತು. ರೆವಿನ್ಯೂ ಡಿಫಿಸಿಟ್ ನೆಗೆಟೀವ್ ಆದಲ್ಲಿ ರಾಜ್ಯ ಎಂಬುದು ಎಲ್ಲಿ ಉಳಿಯುತ್ತದೆ? Revenue deficit is increasing. ರೆವಿನ್ಯೂ ಡಿಫಿಸಿಟ್‌ಗೆ ಸಂಬಂಧಿಸಿದಂತೆ ಇವರು ಕೇಂದ್ರ ಸರ್ಕಾರದಿಂದ ಸಾಲ ತೆಗೆದುಕೊಂಡು ಬಂದು ಇಲ್ಲಿ ಅದನ್ನು ಭರಿಸುವುದು. ಈ ವರ್ಷ ಭಾರತ ಸರ್ಕಾರದಿಂದ ಸುಮಾರು 2,106 ಕೋಟಿ ರೂಪಾಯಿಗಳಷ್ಟು ಹಣವನ್ನು ಸಾಲವಾಗಿ ತೆಗೆದುಕೊಂಡು ಬರುತ್ತಿದ್ದಾರೆ. ಕೇಂದ್ರದವರು ಸಾಲ ಕೊಟ್ಟರೆ ಪರವಾಗಿಲ್ಲ, ಇಲ್ಲದಿದ್ದರೆ ನಿಮ್ಮಿಂದ ಇದನ್ನು ತರುವುದಕ್ಕಾಗುವುದಿಲ್ಲ. ಇದನ್ನು ತಾವು ಏನು ಮಾಡಿದ್ದೀರಿ? ಇದು ನಿಜವಾಗಿಯೂ ನಿಮ್ಮ ಹಣಕಾಸಿನ ಸ್ಥಿತಿ. ಇಲ್ಲಿವರೆಗೂ ಹಣಕಾಸಿನ ಸ್ಥಿತಿ-ಗತಿ ಬಗ್ಗೆ ಏನು ಹೇಳಿಕೊಂಡು ಬಂದಿರಿ, ಇಷ್ಟೊತ್ತು ಆ ರೀತಿ ಇಲ್ಲ. ಇದಕ್ಕೆ ಕಾರಣವೇನು? ಈ ಕುರಿತಂತೆ ನಾವು ಸಲಹೆಗಳನ್ನು ಕೊಡಬೇಕಾಗತ್ತದೆ.

1.00 ಪಿ.ಎಂ.

ತಮಗೆ ರಾಜಕೀಯ ಇಚ್ಛಾಶಕ್ತಿ ಇಲ್ಲ. ತಮಗೆ ರಿಸೋರ್ಸ್‌ಸ್‌ನ್ನು ಮೊಬಿಲೈಸ್ ಮಾಡಿಕೊಳ್ಳಬೇಕು ಎನ್ನುವುದಾಗಿದ್ದರೆ ಅಡಿಷನಲ್ ಟ್ಯಾಕ್ಸ್‌ನ್ನು ಹಾಕಿ ಎಂದು ನಾನು ಹೇಳುವುದಿಲ್ಲ. ಹುದ್ದೆಗಳನ್ನು ಕಡಿಮೆ ಮಾಡುವ ಪ್ರಯತ್ನ ಮಾಡಲು ತಾವು ಹೊರಟಿದ್ದೀರಿ. ಆದರೆ ಅದರಿಂದ ತಕ್ಷಣದ ಫಲಿತಾಂಶವೇನೂ ಸಿಗುವುದಿಲ್ಲ. ಡಿ.ಪಿ.ಸಿ. ಹುದ್ದೆಗಳು ರದ್ದಾದ ತಕ್ಷಣವೇ ಐ.ಎ.ಎಸ್. ಅಧಿಕಾರಿಗಳು ಮನೆಗೆ ಹೋಗಿಬಿಡುತ್ತಾರೆಯೇ? ತಾವು ಅವರಿಗೆ ಬಡ್ತಿಯನ್ನು ಕೊಡುವುದಿಲ್ಲವಷ್ಟೆ. ಆ ವೆಚ್ಚವು ಹಾಗೆಯೇ ಇರುತ್ತದೆ. ಇವರೇನು ಈ ವರ್ಷದಲ್ಲಿ 2,600 ಕೋಟಿ ರೂಪಾಯಿಗಳ ಡೆಫಿಸಿಟ್ ಹೇಳಿದ್ದಾರೆ ಅದು ವಾಸ್ತವಾಂಶವಲ್ಲ. ಇದು ನನಗೆ ತಿಳಿದ ಮಟ್ಟಿಗೆ 3,500 ಕೋಟಿ ರೂಪಾಯಿಗಳನ್ನು ಮೀರುತ್ತದೆ. ತಾವು ಈ ರೀತಿ ಸುಳ್ಳು ಅಂಕಿ ಅಂಶವನ್ನು ಕೊಟ್ಟು ಸದನವನ್ನು ತಪ್ಪುದಾರಿಗೆ ಎಳೆದಿದ್ದೀರಿ. ಇಲ್ಲದಿದ್ದರೆ ತಾವು ನಮ್ಮ ಹತ್ತಿರ ಹಣವಿಲ್ಲವೆಂದು ಹೇಳಿ. ಇದರ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಯಾಗಲಿ. ಡಿಯರ್‌ನೆಸ್ ಅಲೋಯೆನ್ಸ್‌ನ್ನು ಬೇಸಿಕ್ ಮೇಲೆ ಲೆಕ್ಕ ಹಾಕುವ ಪದ್ಧತಿಯನ್ನು ಯಾವಾಗ ತೆಗೆದುಕೊಂಡೆವೋ ಅವತ್ತಿನಿಂದ ಈ ಕಷ್ಟಕ್ಕೆ ರಾಷ್ಟ್ರ ಸಿಕ್ಕಿಹಾಕಿಕೊಂಡಿದೆ. ಇದರ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲಿ ಚರ್ಚೆ ಬೇಡವೆ? ತಾವು ತೆಹಲ್ಕಾದ ಬಗ್ಗೆ ಚರ್ಚೆ ಕೇಳುತ್ತೀರಿ, ಆದರೆ ಇದರ ಬಗ್ಗೆ ಏಕೆ ಕೇಳುವುದಿಲ್ಲ?

ಪ್ರೊ. ಬಿ.ಕೆ. ಚಂದ್ರಶೇಖರ್ (ವಾರ್ತಾ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯರವರು ಬಜೆಟ್ ಡೆಫಿಸಿಟ್ 2,500 ಕೋಟಿ ರೂಪಾಯಿಗಳಿಂದ 3,500 ಕೋಟಿ

ರೂಪಾಯಿಗಳಾಗುತ್ತದೆ ಎಂದು ಸದನಕ್ಕೆ ಸುಳ್ಳು ಮಾಹಿತಿಯನ್ನು ಕೊಟ್ಟು ತಪ್ಪುದಾರಿಗೆ ಎಳೆಯುತ್ತಿದ್ದೀರಿ. ದಯಮಾಡಿ ಮಾನ್ಯ ಸಿಂಧ್ಯರವರು ಅದು ಹೇಗೆ 3,500 ಕೋಟಿ ರೂಪಾಯಿಗಳು ಆಗುತ್ತದೆ ಎಂಬ ಬಗ್ಗೆ ಸೂಚನೆಯನ್ನು ಕೊಟ್ಟರೆ ನಾವು ಸುಳ್ಳು ಹೇಳಿದ್ದೇವೋ, ನಿಜವನ್ನು ಹೇಳಿದ್ದೇವೋ ಎಂಬ ಬಗ್ಗೆ ಪುನಃ ನಾವೇ ಮಾತನಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಚಂದ್ರಶೇಖರ್‌ರವರು ಅಪರೂಪಕ್ಕೆ ಇಲ್ಲಿ ಬಂದಿದ್ದಾರೆ. ನನಗೆ ಸಮಯದ ಅಭಾವವಿದೆ, ಇಲ್ಲದಿದ್ದರೆ ಆದರ ಬಗ್ಗೆ ವಿವರಣೆ ಕೊಡುತ್ತಿದ್ದೆ. ಅವರ ಬಜೆಟ್‌ನಲ್ಲಿರುವ ಕಾಸ್‌ಮೆಟಿಕ್ಸ್‌ನ ಬಗ್ಗೆ ನಾನು ಸ್ವಾಗತ ಮಾಡಿದ್ದೇನೆ. ಎಲ್ಲಿ ಅನುಮಾನಗಳಿವೆ ಎನ್ನುವ ಬಗ್ಗೆ ಹೇಳಿದ್ದೇನೆ. ತಮ್ಮ ವೈಫಲ್ಯತೆಯ ಬಗ್ಗೆ ಹೇಳಿದ್ದೇನೆ. ಅದಕ್ಕೆ ಏನು ಮಾಡಬೇಕು ಎಂಬ ಬಗ್ಗೆ ಹೇಳುತ್ತಿದ್ದೇನೆ. ತಮಗೆ ನಿಜವಾಗಿಯೂ ರೈತರ ಮೇಲೆ ಪ್ರೀತಿ ಇದ್ದರೆ, ಸಹಾಯ ಮಾಡಬೇಕೆಂದಿದ್ದರೆ ರೈತರ ಸಾಲದ ಮೇಲಿರುವ ಬಡ್ಡಿಯನ್ನು ಮನ್ನಾ ಮಾಡಿ. ಆಗ ತಮ್ಮನ್ನು ಮೆಚ್ಚುತ್ತೇನೆ. ನಮಗೆ ಜನರು 1983ರಲ್ಲಿ ಅಧಿಕಾರವನ್ನು ಕೊಟ್ಟಿದ್ದಾಗ, 1985, 1995ರಲ್ಲಿ ನಮಗೆ ಅಧಿಕಾರವಿದ್ದಾಗ ಆ ಕೆಲಸವನ್ನು ಮಾಡಿದ್ದೇವೆ. ಆದರೆ ತಾವು ಏಕೆ ಅದನ್ನು ಮಾಡಲು ಆಗುವುದಿಲ್ಲ? ಸೊಸೈಟಿಯವರು, ಅಪೆಕ್ಸ್ ಬ್ಯಾಂಕ್‌ನವರು ಎರಡು ಪರ್‌ಸೆಂಟ್‌ನ್ನು ತುಂಬಿಕೊಡಿ ಎಂದು ಹೇಳುತ್ತಿದ್ದೀರಲ್ಲಾ ತಮಗೇನು ಹೇಳಬೇಕು? ತಾವು ರೈತರ ಪರವಾಗಿದ್ದೀರಾ ತಾವು ಕರ ಸಮಾಧಾನ ಯೋಜನೆಯನ್ನು ಮಾಡುತ್ತೇವೆಂದು ಎಕ್ಸೈಜ್‌ನವರು ಕರೆದರೂ ತಮಗೆ ಹಣವನ್ನು ಕೊಟ್ಟಿಲ್ಲ. ರೈತರ ಆತ್ಮಹತ್ಯೆಯ ಬಗ್ಗೆ ಮಾತನಾಡುತ್ತಾ ಮಾನ್ಯ ಮುಖ್ಯಮಂತ್ರಿಯವರು, ಪಂಜಾಬ್‌ನಲ್ಲಿ ನಾಲ್ಕು ಸಾವಿರ ರೈತರು ಸಾಯುತ್ತಾರೆ, ಸತ್ತವರಿಗೆಲ್ಲಾ ಪರಿಹಾರವನ್ನು ಕೊಡಲು ಆಗುವುದಿಲ್ಲವೆಂದು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಅದಕ್ಕಾಗಿ ಆತ್ಮಹತ್ಯೆಗೆ ಇನ್‌ಸೆಂಟೀವ್ ಇರಬಾರದು ಎಂದು ಹೇಳಿದರು. ಇದನ್ನು ರೈತರು ಯಾವ ರೀತಿ ತಡೆದುಕೊಳ್ಳುತ್ತಾರೆ ಎಂಬ ಬಗ್ಗೆ ನೀವೇ ಯೋಚನೆ ಮಾಡಿ. ಯಾರಾದರೂ ಜೀವವನ್ನು ಕೊಡಲು ತಯಾರಿರುತ್ತಾರೆಯೇ?

ಶ್ರೀ ಕಾಗೋಡು ತಿಮ್ಮಪ್ಪ: ಆತ್ಮಹತ್ಯೆ ಮಾಡಿಕೊಂಡಿದ್ದಕ್ಕೆ ಪ್ರಚೋದನೆ ಕೊಟ್ಟಂತಾಗುತ್ತದೆಂದು ಹೇಳಿದ್ದಕ್ಕೆ, ಅದರ ಬಗ್ಗೆ ವಿಚಾರಣೆ ಮಾಡಲು ಒಳಪಡಿಸುವುದಾಗಿ ಮುಖ್ಯ ಮಂತ್ರಿಯವರು ಹೇಳಿದ್ದು.

ಶ್ರೀ ಪಿ.ಜಿ.ಆರ್. ಸಿಂಧ್ಯ: ರೈತರು ಸತ್ತರೆ ಕನಿಷ್ಟಪಕ್ಷ ತಮ್ಮ ತಹಶೀಲ್ದಾರರು, ಅಸಿಸ್ಟೆಂಟ್ ಕಮೀಷನರ್‌ರವರು ಹೋಗಲಿಲ್ಲವೆಂದು ನಾನು ಹೇಳಿದ್ದು. ಅವರು ಹೋಗಿ ವಿಚಾರಣೆ ಮಾಡಿ ಎಂದು ನಾನು ಹೇಳಿದ್ದು. ಆತ್ಮಹತ್ಯೆಯ ಪ್ರಕರಣಗಳು ಜಾಸ್ತಿಯಾಗುತ್ತಿದೆ, ಆದ್ದರಿಂದ ಇದರ ಬಗ್ಗೆ ಸದನದ ಸಮಿತಿಯನ್ನು ಮಾಡಿ ಇಂಥ ಸಂದರ್ಭದಲ್ಲಿ ಯಾವ ರೀತಿಯಾಗಿ ಪರಿಹಾರವನ್ನು ಕೊಡಬೇಕು, ಆತ್ಮಹತ್ಯೆ ಮಾಡಿಕೊಳ್ಳಲು ಕಾರಣವೇನು, ಮುಂತಾದ ಬಗ್ಗೆ ಸರ್ಕಾರಕ್ಕೆ ಗೈಡ್‌ಲೈನ್ಸ್ ಇರಬೇಕಾಗುತ್ತದೆ. ತಾವು ರೈತರಿಗೆ ನಿಜವಾಗಿಯೂ ಸಹಾಯ ಮಾಡಬೇಕೆಂದಿದ್ದರೆ ಗೊಬ್ಬರಕ್ಕೆ ಸಹಾಯವನ್ನು ಕೊಡಬಹುದಿತ್ತು. ಮತ್ತು ಬೀಜಕ್ಕೆ ತಾವು ಸಬ್ಸಿಡಿಯನ್ನು ಕೊಡಲಿಲ್ಲ. ತಾವು 400 ಕೋಟಿ ರೂಪಾಯಿ ಆವರ್ತನಿಧಿಯೆಂದೇನು ಹೇಳಿದ್ದೀರಿ,

ಅದಕ್ಕೆ ಬದಲಾಗಿ ರೈತರಿಗೆ ಹಾರ್ವೆಸ್ಟ್ ಮುಗಿದ ಮೇಲೆ ಶೇಖರಣೆಗೆ ಸಾಲದ ಸೌಲಭ್ಯ ಕೊಟ್ಟರೆ ಬಹಳ ದೊಡ್ಡ ಉಪಕಾರವಾಗುತ್ತಿತ್ತು. ಅದನ್ನೂ ಸಹ ತಾವು ಮಾಡಲಿಲ್ಲ. ರಾಜ್ಯದಲ್ಲಿ ಸುಮಾರು ಆರು ಕೋಟಿ ಜಾನುವಾರುಗಳು ಇದೆ. ಈಗ ಅದು 9 ಕೋಟಿಯಾಗಿದೆಯೆಂದು ಹೇಳುತ್ತಾರೆ. ಹೋದ ವರ್ಷ ಇದರಲ್ಲಿ 5 ಕೋಟಿ 30 ಲಕ್ಷ ರೂಪಾಯಿಗಳನ್ನು ಇಟ್ಟಿದ್ದರು. ಆದರೆ ಬಿಡುಗಡೆ ಮಾಡಿದ್ದು 2 ಕೋಟಿ 50 ಲಕ್ಷ ರೂಪಾಯಿಗಳು ಮಾತ್ರ. ಈ ಹಣವನ್ನು ಬಿಡುಗಡೆ ಮಾಡಲು ತಮಗೆ ಇರುವ ತೊಂದರೆಯಾದರೂ ಏನು? ಜೊತೆಗೆ ಇದಕ್ಕೆ ಹೆಚ್ಚಿನ ಹಣವನ್ನು ಈ ವರ್ಷ ಕೊಡಬೇಕು. ತಾವು ಕಿರಾಣಿ ಅಂಗಡಿಗಳಲ್ಲಿ ಬೀಯರನ್ನು ಮಾರಾಟ ಮಾಡಲು ಪರವಾನಗಿ ಕೊಡಲು ಹೊರಟಿದ್ದೀರಿ, ದಯಮಾಡಿ ತಕ್ಷಣವೇ ಅದನ್ನು ನಿಲ್ಲಿಸಬೇಕು. ಅದು ಸದನಕ್ಕೆ ಮಾತ್ರವಲ್ಲ ಶಾಸಕರಿಗೂ ಅವಮಾನವನ್ನು ತರತಕ್ಕದ್ದು. ಇಂಥ ಬಜೆಟ್‌ನ್ನು ಪಾಸ್ ಮಾಡಲು ತಾವೆಲ್ಲರೂ ಹೋಗಿದ್ದರಾ ಎಂದು ಜನರು ಕೇಳುತ್ತಾರೆ. ಇದನ್ನು ಯಾರಿಗೋಸ್ಕರ ಮಾಡಿದ್ದೀರಿ? ಅಬ್ಕಾರಿ ಕಾಯ್ದೆಯನ್ನು ಉಲ್ಲಂಘನೆ ಮಾಡಿದಂತಾಗುವುದಿಲ್ಲವೆ? ಬಿಯರ್‌ನಲ್ಲಿ ಆಲ್ಕೋಹಾಲ್‌ನ ಅಂಶವಿಲ್ಲವೆ? ಅದನ್ನು ಮಾರಾಟ ಮಾಡಲು ಅನುಮತಿ ತೆಗೆದುಕೊಳ್ಳುವುದು ಬೇಡವೆ? ಕಳೆದ ಸಲ ಮಾನ್ಯ ಮುಖ್ಯಮಂತ್ರಿಯವರು ಯಾವ್ಯಾವುದೋ ಲಾಬಿಗಳ ಬಗ್ಗೆ ಮಾತನಾಡಿದರು. ನಾವು ಈಗ ಅದೇ ನಾಲಿಗೆಯನ್ನು ಉಪಯೋಗಿಸಬಹುದೆ? ತಾವು ಯಾವ ಲಾಬಿಗೆ ಒಳಗಾಗಿದ್ದೀರಿ ಎಂದು ಕೇಳಬಹುದೆ? ಆದರೆ ನಾನು ಕೇಳಲು ಹೋಗುತ್ತಿಲ್ಲ. ನಾವು ಅಧಿಕಾರದಲ್ಲಿದ್ದಾಗ ಹತ್ತು ವೈನ್ ಶಾಪ್‌ಗಳಿಗೆ ಪರವಾನಗಿಯನ್ನು ಕೊಟ್ಟಂಥ ಸಂದರ್ಭದಲ್ಲಿ ಎಷ್ಟೊಂದು ಆರ್ಭಟ ಮಾಡಿದರು? ಚೌಡಯ್ಯನವರು, ನಾಗರತ್ನಮ್ಮನವರು ಆಗ ವಿರೋಧ ಪಕ್ಷದಲ್ಲಿದ್ದರು. ಐವತ್ತು ವೈನ್ ಶಾಪ್‌ಗಳಿಗೆ ರಾಜ್ಯಾದ್ಯಂತ ಪರವಾನಗಿಯನ್ನು ಕೊಟ್ಟಂಥ ಸಂದರ್ಭದಲ್ಲಿ ಜನತಾದಳದವರು ಹೆಂಡದ ದೊರೆಗಳ ಪ್ರತಿನಿಧಿಗಳು ಎಂದು ಹೇಳಿದ್ದರು. ಈಗ ತಾವು ಯಾರ ಪ್ರತಿನಿಧಿಗಳು? ಎಂದು ನಾನು ಕೇಳುವುದಕ್ಕೆ ಹೋಗುವುದಿಲ್ಲ. ಬಿಯರ್‌ನ್ನು ಪ್ರಾವಿಷನ್ ಸ್ಟೋರ್‌ಗಳಲ್ಲಿ ಸೀಮೆಎಣ್ಣೆಯನ್ನು ಮಾರಾಟ ಮಾಡಿದಂತೆ ಮಾರಲು ಹೊರಟಿದ್ದೀರಲ್ಲಾ ಯಾರನ್ನು ತೃಪ್ತಿ ಪಡಿಸಲು ಹೊರಟಿದ್ದೀರಿ? ದಯಮಾಡಿ ಇದನ್ನು ನಿಲ್ಲಿಸಿ. ಬಳ್ಳಾರಿಗೆ 3,200 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಿರಲ್ಲಾ ಅದೂ ಇಲ್ಲ. ಮಾನ್ಯ ವೀರಪ್ಪಮೊಯ್ಲಿರವರು ಬಹಳ ಕಷ್ಟಪಟ್ಟು ಹಣಕಾಸಿನ ಸುಧಾರಣೆಯ ಬಗ್ಗೆ ವರದಿಯನ್ನು ಕೊಟ್ಟರು. ನಾನು ಮೊಯ್ಲಿರವರ ಹಿತೈಷಿಯಾಗಿ ತಾವು ಮಾಜಿ ಮುಖ್ಯಮಂತ್ರಿಗಳು, ಹಣಕಾಸಿನ ಆಯೋಗ ಮುಂತಾದ ಬಗ್ಗೆ ಅಧ್ಯಕ್ಷರಾಗಲು ಹೋಗಬೇಡಿ, ತಮ್ಮ ಘನತೆಗೆ ಇದು ತಕ್ಕದ್ದಲ್ಲ ಎಂದು ಹೇಳಿದ್ದೆ. ಪಾಪ ಅವರು ರಾಜ್ಯದ ಹಣಕಾಸು ದೃಷ್ಟಿಯಿಂದ ಆ ಕೆಲಸವನ್ನು ಮಾಡಲು ಒಪ್ಪಿಕೊಂಡು ವರದಿಯನ್ನು ಕೊಟ್ಟರು. ನಿಜವಾಗಿಯೂ ಆ ಆಯೋಗ ಕೆಲವಾರು ಒಳ್ಳೆಯ ವಿಚಾರಗಳನ್ನು ಹೇಳಿದೆ. ಪಾಪ ನಿನ್ನೆ ಮೊಯ್ಲಿರವರು ಇದರ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತ ಮಾಡಿದ್ದಾರೆ. ಈ ವರ್ಷದ ಬಜೆಟ್‌ನಲ್ಲಿ ಅದನ್ನು ತಂದಿಲ್ಲ. ಇವರು ಇನ್ನೂ ಒಂದೇ ಬಜೆಟ್‌ನ್ನು ಮಾಡಿಸಿರುವುದು. ಅನಂತರ ಚುನಾವಣೆ ಬರುತ್ತದೆ. ತಾವು ಇದನ್ನು ಕಾರ್ಯಗತ ಮಾಡುವುದು ಯಾವಾಗ? ತಾವು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿರುವ ಶಿಸ್ತು, ಪಾರದರ್ಶಕತೆ, ಭ್ರಷ್ಟಾಚಾರ ನಿರ್ಮೂಲನೆ ಯಾವಾಗ ಮಾಡುವಿರಿ? ಮೊಯ್ಲಿಯವರು ತಮ್ಮ

ವರದಿಯಲ್ಲಿ 1,450 ಕೋಟಿ ರೂಪಾಯಿ ತೆರಿಗೆ ಕೇವಲ ಅಬ್ಕಾರಿ ಇಲಾಖೆಯೊಂದರಲ್ಲೇ ಸೋರಿ ಹೋಗುತ್ತಿದೆಯೆಂದು ಹೇಳಿದ್ದಾರೆ. ಇದನ್ನು ತಡೆಗಟ್ಟಲು ತಮಗೆ ಯಾರು ಅಡ್ಡಿಪಡಿಸಿದ್ದಾರೆ? ಅದನ್ನು ವಸೂಲಿ ಮಾಡಿ. ಅದಕ್ಕೆ ಬದಲಾಗಿ ತಾವು ಬೀರ್ ಅಂಗಡಿಗಳಿಗೆ ಪರವಾನಗಿ ಕೊಡಲು ಹೊರಟಿದ್ದೀರಿ. ಅದನ್ನು ತಕ್ಷಣವೇ ನಿಲ್ಲಿಸಬೇಕು, ಯಾವುದೇ ಕಾರಣದಿಂದ ಮಾಡಲು ಹೋಗಬಾರದು. ಈಗ ಹಳದಿ ಕಾರ್ಡುಗಳನ್ನು ಹಂಚಲು ಹೊರಟಿದ್ದಾರೆ. ಗ್ರಾಮಸಭೆಗಳನ್ನು ಮಾಡಲು ಆಗುತ್ತದೆಯೇ? ಗ್ರಾಮ ಸಭೆಯೆಂದರೆ ಪಂಚಾಯಿತಿ ಸದಸ್ಯರ ಸಭೆ. ಗ್ರಾಮೀಣಾಭಿವೃದ್ಧಿ ಸಚಿವರಿಗೆ ಆಡಳಿತ ಪಕ್ಷದ ಸದಸ್ಯರು ಇದು ಆಗುವುದಿಲ್ಲವೆಂದು ಪರಿಪರಿಯಾಗಿ ಹೇಳಿದ್ದಾರೆ. ಮನೆ ಹಂಚುತ್ತೇವೆಂದು ಡಂಗೂರ ಹೊಡೆಸಿದರೆ, ಇರುವ 20 ಮನೆಗೆ ಎರಡು ಸಾವಿರ ಜನರು ದೊಣ್ಣೆ ಹಿಡಿದುಕೊಂಡು ಬರುತ್ತಾರೆ. ಇದನ್ನು ಹೇಗೆ ಮಾಡಲಿಕ್ಕಾಗುತ್ತದೆ? ಅಲ್ಲಿ ಇವರು ಹಳದಿ ಕಾರ್ಡ್ ಹಂಚುತ್ತಾರಂತೆ. ನಮ್ಮ ಸರ್ಕಾರ ಇದ್ದಾಗ ನಾವು 67 ಲಕ್ಷ ಕುಟುಂಬಗಳನ್ನು ಗುರುತು ಮಾಡಿದ್ದವೆ. ಈ ಸಂದರ್ಭದಲ್ಲಿ ನಾವು ಮಾನ್ಯ ಜೆ.ಹೆಚ್. ಪಟೇಲ್ ಅವರನ್ನು ನೆನೆಸಿಕೊಳ್ಳಬೇಕು, Out of Rs. 4000 crores and odd, we allowed Rs. 350 crore subsidy ಈಗ ಏಕೆ ನೀವೂ ಸಹಾ ಈ ಕೆಲಸವನ್ನು ಮಾಡಬಾರದು? ಇದನ್ನು ಮಾಡುವುದಕ್ಕೆ ನಿಮಗೇನು ತೊಂದರೆ ಇದೆ?

ಶ್ರೀ ಕಾಗೋಡು ತಿಮ್ಮಪ್ಪ: 67 ಲಕ್ಷ ಕುಟುಂಬಗಳನ್ನು ಗುರುತು ಮಾಡಿದ್ದೇವೆ ಎಂದು ಮಾನ್ಯ ಸಿಂಧ್ಯಾರವರು ಹೇಳುತ್ತಿದ್ದಾರೆ. ಆದರೆ ಅವರ ಪೀರಿಯಡ್‌ನಲ್ಲೇ 8 ಲಕ್ಷ ಬೋಗಸ್ ಕಾರ್ಡ್‌ಗಳಿವೆ ಎಂದು ಐಡೆಂಟಿಫೈ ಮಾಡಲಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೇ, 67 ಲಕ್ಷದಲ್ಲಿ ಕೇಲ 8 ಲಕ್ಷ ಮಾತ್ರವಲ್ಲ ಇನ್ನೂ 5-6 ಲಕ್ಷ ಬೋಗಸ್ ಇರಬಹುದು. ಅದನ್ನು ಎಲಿಮಿನೇಟ್ ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ: ಇದರಿಂದ ನೀವು ಯಾವ ರೀತಿ ಕಾರ್ಡ್‌ಗಳನ್ನು ಕೊಟ್ಟದ್ದೀರಿ ಎಂಬುದು ಅರ್ಥವಾಗುತ್ತದೆಯಲ್ಲವೇ?

ಶ್ರೀ ಪಿ.ಜಿ.ಆರ್. ಸಿಂಧ್ಯ: ಆಯಿತು ಸ್ವಾಮಿ, ನಾವು ದುಡ್ಡು ತೆಗೆದುಕೊಂಡು ಈ ಕಾರ್ಡ್‌ಗಳನ್ನು ಕೊಟ್ಟಿದ್ದೇವೆ. ಈ ಮಾತಿನಿಂದ ನಿಮಗೆ ಸಮಾಧಾನವಾಯಿತೇ?

ಶ್ರೀ ಕಾಗೋಡು ತಿಮ್ಮಪ್ಪ: ನಿಮಗೆ ಸಮಾಧಾನ ಅನ್ನಿಸಿದರೆ ನೀವು ಅದನ್ನು ಹೇಳಿಕೊಳ್ಳಬಹುದು. ನನ್ನದೇನಿದೆ ಅದರಲ್ಲಿ?

ಶ್ರೀ ಪಿ.ಜಿ.ಆರ್. ಸಿಂಧ್ಯ: ನಾವು 67 ಲಕ್ಷ ಹಸಿರು ಕಾರ್ಡ್‌ಗಳನ್ನು ಬಡವರಿಗೆ ಕೊಡುವಾಗ, ನಮ್ಮ ಸರ್ಕಾರದಲ್ಲಿ 350 ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ಕೊಟ್ಟಾಗ ಅವ್ಯವಹಾರವಾಗಿದೆ ಎಂದು ತಾವು ಒಂದು ವಿಚಾರಣಾ ಆಯೋಗವೊಂದನ್ನು ನೇಮಕ ಮಾಡಬಹುದು. ಅದರ ಬಗ್ಗೆ ನಮ್ಮದೇನೂ ತಕರಾರಿಲ್ಲ. ಬೇಕಾದರೆ ತಾವು ಅದನ್ನು ಸಿ.ಬಿ.ಐ. ಗೂ ಕೊಡಬಹುದು. ಕಾಂಗ್ರೆಸ್‌ನವರು ಬಡವರ ಪರವಾಗಿ ಮಾತನಾಡುತ್ತಾರೆ. ಕಾಂಗ್ರೆಸ್‌ನವರು ಯಾವಾಗಲೂ ಬಡವರ ಓಟುಗಳನ್ನು ಗಳಿಸಿಯೇ ಅಧಿಕಾರಕ್ಕೆ ಬರುವುದು. ಆದರೆ ಅವರು

ಮಾಡುತ್ತಿರುವುದೇನು? ಅವರಿಗೆ ತಿರುಪತಿ ನಾಮ ಹಾಕುತ್ತಿದ್ದೀರಿ. ಕರ್ನಾಟಕದಲ್ಲಿ 20 ಲಕ್ಷ ಹಳದಿ ಕಾರ್ಡ್ ಹೋಲ್ಡರ್ಸ್ ಮಾತ್ರ ಇದ್ದಾರೆಯೇ? ಇದ್ಯಾವ ನ್ಯಾಯ? ರಾಜ್ಯದಲ್ಲಿ ಆಂದೋಳನ ಆಗುತ್ತದೆ. ಯಾವುದೇ ಕಾರಣದಿಂದ ಹಸಿರು ಕಾರ್ಡ್‌ಗಳನ್ನು ರದ್ದು ಮಾಡಬಾರದೆಂದು ನಾನು ಸರ್ಕಾರದ ಮೇಲೆ ಒತ್ತಾಯ ಮಾಡುತ್ತಿದ್ದೇನೆ. ಬಡವರ ಪರವಾಗಿ ಮಾತನಾಡಲು ನಿಮಗೆ ನಾಚಿಕೆಯಾಗುವುದಿಲ್ಲವೇ? ಕಳೆದ ಬಾರಿಯ ಮ್ಯಾನಿಫೆಸ್ಟೋದಲ್ಲಿ ಕಾಂಗ್ರೆಸ್‌ನವರು ಓಲ್ಡ್ ಏಜ್ ಪೆನ್‌ಷನ್ ಅನ್ನು 100-125 ರೂಪಾಯಿಗಳಿಗೆ ಮಾಡುತ್ತೇವೆ ಎಂದು ಹೇಳಿದ್ದರು. ಅದನ್ನು ಇವರು ಮಾಡಿದ್ದಾರೆಯೇ? ಅದನ್ನ್ಯಾಕೆ ನೀವು ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿಕೊಂಡಿರಿ?

ಶ್ರೀ ಕಾಗೋಡು ತಿಮ್ಮಪ್ಪ: ಬಡತನ ರೇಖೆಗಿಂತ ಕೆಳಗಿರುವವರನ್ನು ಸರ್ವೆ ಮಾಡಿಸಿದವರು ಯಾರು?

ಶ್ರೀ ಪಿ.ಜಿ.ಆರ್. ಸಿಂಧ್ಯ: ಸರ್ಕಾರದವರು ಎಲೆಕ್ಟ್ರಿಕಲ್ ಗೂಡ್ಸ್, ಗೃಹ ಬಳಕೆಯ ಅಲ್ಯೂಮಿನಿಯಂ, ಸೀಮೆಎಣ್ಣೆ ಸ್ಟೌವ್, ಬಿಸ್ಕತ್, ಸಾಂಬ್ರಾಣಿ, ಬೆತ್ತ ಮತ್ತು ಬಿದಿರಿನ ವಸ್ತುಗಳ ಮೇಲೆ ತೆರಿಗೆ ಹಾಕಿದ್ದಾರೆ. ಬಿದಿರಿನ ವಸ್ತು ಮತ್ತು ಸಾಂಬ್ರಾಣಿಯನ್ನು ಏತಕ್ಕಾಗಿ ಉಪಯೋಗಿಸುತ್ತಾರೆ? ಇದನ್ನು ಚಟ್ಟ ಕಟ್ಟಲಿಕ್ಕೆ ಉಪಯೋಗಿಸುತ್ತಾರೆ. ಬಡವರ ಚಟ್ಟದ ಮೇಲೆ ಈ ಸರ್ಕಾರ ಟ್ಯಾಕ್ಸ್ ಹಾಕಿದೆ. ಸಾಂಬ್ರಾಣಿ, ಚಹಾ ಮತ್ತು ಬೆತ್ತದ ಮೇಲೆ ಸರ್ಕಾರ ತೆರಿಗೆ ಹಾಕಿದೆಯಲ್ಲಾ, ಇದ್ಯಾವ ನ್ಯಾಯ ಎಂಬುದನ್ನು ದಯವಿಟ್ಟು ಯಾರಾದರೂ ಹೇಳಲಿ.

ಶ್ರೀ ಕಾಗೋಡು ತಿಮ್ಮಪ್ಪ: ಹೇಳುವುದಕ್ಕಾದರೂ ಒಂದು ರೀತಿ ನೀತಿ ಬೇಡವೇ? ಮನಸ್ಸಿಗೆ ಬಂದಂತೆ ಏಕೆ ಹೇಳುತ್ತೀರಿ? ಚಟ್ಟದ ಮೇಲೆ ತೆರಿಗೆ ಹಾಕಿದ್ದೇವೆ ಎಂದು ಹೇಳಲಾಗಿದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯ: ಆಯಿತು, ದೇವರು ನಿಮಗೆ ಒಳ್ಳೆಯದನ್ನು ಮಾಡಲಿ. ಹಸಿರು ಕಾರ್ಡ್‌ಗಳನ್ನು ರದ್ದು ಮಾಡಬೇಡಿ, ಮಾಡಿದ್ದೇ ಆದರೆ ರಾಜ್ಯದಲ್ಲಿ ಇದರ ವಿರುದ್ಧ ದೊಡ್ಡ ಆಂದೋಳನವಾಗುತ್ತದೆ ಎಂದು ನಾನು ಮತ್ತೊಮ್ಮೆ ಹೇಳುತ್ತೇನೆ. ಹಿಂದೊಮ್ಮೆ ಮಾನ್ಯ ಮುಖ್ಯಮಂತ್ರಿಗಳು ಚುನಾವಣಾ ಪ್ರಣಾಳಿಕೆ ಐದು ವರ್ಷಕ್ಕೆಂದು ಇರುತ್ತದೆ, ಒಂದೇ ವರ್ಷದಲ್ಲಿ ನೀಡಿದ್ದ ಭರವಸೆಗಳನ್ನೆಲ್ಲಾ ಈಡೇರಿಸಲಿಕ್ಕಾಗುತ್ತದೆಯೇ? ಯಾವ ಸರ್ಕಾರ ತಾನೇ ಆ ಕೆಲಸವನ್ನು ಮಾಡುವುದಕ್ಕಾಗುತ್ತದೆ ಎಂದು ಇಲ್ಲಿ ಕೇಳಿದ್ದರು. ಓಲ್ಡ್ ಏಜ್ ಪೆನ್‌ಷನ್ ಅನ್ನು ತಾವು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದಂತೆ 100-125 ರೂಪಾಯಿಗಳಿಗೆ ಏರಿಸಲು ನಿಮಗಿರುವ ತೊಂದರೆಯೇನು? ಆ ಮಾತನ್ನು ನೀವು ಏಕೆ ಹೇಳಿದಿರಿ? ನೀವು ಬಡವರ ಪರವಾಗಿರುವವರೇ? ನಾವು ಬಡವರ ವಿರೋಧಿಗಳು ಅಲ್ಲವೇ? ಅದನ್ನು ಸರ್ಕಾರ ಬೇಗ ಮಾಡಲಿ.

ಶ್ರೀ ಕಾಗೋಡು ತಿಮ್ಮಪ್ಪ: ಹಿಂದೆ 1991-94ರ ಅವಧಿಯಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಾಗ ಮಾನ್ಯ ಮೊಯ್ಲಿಯವರ ಕಾಲದಲ್ಲೇ ಇದನ್ನು 60-100 ರೂಪಾಯಿಗಳಿಗೆ ಏರಿಸಲಾಗಿತ್ತು.

ಶ್ರೀ ಪಿ.ಜಿ.ಆರ್. ಸಿಂಧ್ಯ: ಆಯಿತು ಸ್ವಾಮಿ. ಈ ಚಟ್ಟದ ಮೇಲೆ ಹಾಕಿರುವ ಟ್ಯಾಕ್ಸ್ ಅನ್ನಾದರೂ ತೆಗೆದು ಹಾಕಿ. ಹಾಗೆಯೇ ಬೆತ್ತ, ಸಾಂಬ್ರಾಣಿ, ಎಲೆಕ್ಟ್ರಿಕಲ್ ಗೂಡ್ಸ್ ಮೇಲೆ ಹಾಕಿರುವ ಟ್ಯಾಕ್ಸ್ ಕೂಡ ತೆಗೆದು ಹಾಕಿ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೇ, ನಾವು ಬಳಸಿರುವಂತಹ ಪದಗಳನ್ನು ತದ್ವಿರುದ್ಧವಾಗಿ ಹೇಳಿ ತಪ್ಪು ಅಭಿಪ್ರಾಯ ಬರುವಂತೆ ಅವರು ಮಾತನಾಡುತ್ತಿದ್ದಾರೆ. ತಾವು ಅದಕ್ಕೆ ಅವಕಾಶ ಮಾಡಿಕೊಡಬಾರದು.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೇ, ಪುಸ್ತಕದ ಮೇಲೆ ತೆರಿಗೆ ಹಾಕಲಾಗಿದೆ. ಇದು ಈ ಸರ್ಕಾರ ಕನ್ನಡಕ್ಕೆ ಕೊಡತಕ್ಕ ಪ್ರೋತ್ಸಾಹವಾಗಿದೆ. You are ta[illegible]ng even the knowledge. ಕನ್ನಡ ಪುಸ್ತಕಗಳನ್ನು ಓದುವುದೇ ಬಹಳ ಕಷ್ಟವಾಗಿದೆ. ಆ ಪ್ರಕಾಶಕರ ಮೇಲೂ ಸಹಿತ ಈ ಸರ್ಕಾರ ಟ್ಯಾಕ್ಸ್ ಹಾಕಿದೆಯಲ್ಲಾ, ಇದಕ್ಕೇನು ಹೇಳಬೇಕು? ಇದರ ಹಿಂದೆ ಇರುವ ಲಾಜಿಕ್ ಏನು? ಇದಕ್ಕೆ ಮಾನ್ಯ ಬಿ.ಕೆ. ಚಂದ್ರಶೇಖರ್‌ರವರು ಏನು ಹೇಳುತ್ತಾರೆ? ಎಲ್ಲರೂ ಟಿ.ವಿ. ಮಾಧ್ಯಮದ ವಿವಿಧ ಚಾನೆಲ್‌ಗಳ ಮೊರೆ ಹೋಗುವಾಗ ಯಾರೋ ಒಂದಷ್ಟು ಪುಸ್ತಕಗಳನ್ನು ತೆಗೆದುಕೊಂಡು ಓದುತೇತವೆ ಎಂದು ಮುಂದಾದರೆ, ಅದರ ಮೇಲೂ ಟ್ಯಾಕ್ಸ್ ಹಾಕಿದರೆ ಹೇಗೆ? ಪೇಪರ್ ಮೇಲೂ ಟ್ಯಾಕ್ಸ್ ಹಾಕಲಾಗಿರುತ್ತದೆ. ಇಂಕ್ ಮೇಲೆ ಮತ್ತು ಪ್ರಿಂಟಿಂಕ್ ಮೇಲೂ ಕೂಡ ಟ್ಯಾಕ್ಸ್ ಹಾಕಲಾಗಿರುತ್ತದೆ. ಇದಾದ ಮೇಲೆ ಸರ್ಕಾರ ಪುಸ್ತಕದ ಮೇಲೆಯೂ ಏಕೆ ಟ್ಯಾಕ್ ಹಾಕಬೇಕು? ಕರ್ನಾಟಕದ ಸಮಗ್ರ ಪ್ರಕಾಶಕರು ಮತ್ತು ಪುಸ್ತಕವನ್ನು ಕೊಂಡು ಓದತಕ್ಕ ಜನರು ಇವತ್ತು ಅದನ್ನು ವಾಪಸ್ ತೆಗೆಯಬೇಕೆಂದು ಆಗ್ರಹಪಡಿಸುತ್ತಿದ್ದಾರೆ.

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೇ, ನಾನೇನು ಬಜೆಟ್ ಬಗ್ಗೆ ಭಾಷಣ ಮಾಡಲಿಕ್ಕೆ ಹೋಗುವುದಿಲ್ಲ. ಮಾನ್ಯ ಚಂದ್ರಶೇಖರ್‌ರವರ ಗಮನಕ್ಕೆ ಒಂದು ವಿಚಾರವನ್ನು ನಾನು ತರಲಿಕ್ಕೆ ಇಚ್ಛೆಪಡುತ್ತೇನೆ. ಫಿಲಂಗಳಿಗೆ ನಾವು ಸಬ್ಸಿಡಿ ಕೊಡುತ್ತಿರುವುದಿಲ್ಲದೆ ಮನರಂಜನಾ ತೆರಿಗೆಯನ್ನೂ ಶೇ. 100 ರಷ್ಟು ಸಹಾ ರದ್ದು ಮಾಡುತ್ತಿದ್ದೇವೆ. ಪುಸ್ತಕಗಳ ಮೇಲೆ ಏಕೆ ಸರ್ಕಾರದ ಕಣ್ಣು? ಕನ್ನಡ ಪುಸ್ತಕಗಳ ಪ್ರಕಾಶಕರ ಸ್ಥಿತಿ ಮಾನ್ಯ ಸಚಿವರಿಗೆ ಗೊತ್ತು. ಕನ್ನಡ ಪುಸ್ತಕವೊಂದರ ಎರಡು ಸಾವಿರ ಪ್ರತಿಗಳನ್ನು ಪ್ರಿಂಟ್ ಮಾಡಿದರೆ ಅದು ಮಾರಾಟ ಆಗುವುದಕ್ಕೆ ಇವತ್ತು 4-5 ವರ್ಷಗಳು ಬೇಕಾಗುತ್ತದೆ. ಆದುದರಿಂದ ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದು ಏನೆಂದರೆ you use your good offices to get it cancelled ಎಂದು ಸಿಂಧ್ಯಾರವರು ಹೇಳಿದಂತೆ You are taxing even the knowlege. ಓದಬೇಕೆನ್ನುವವರಿಗೆ ದೊಡ್ಡ ಡಿಸ್-ಇನ್ಸೆಂಟೀವ್ಸ್ ಅನ್ನು ನೀವು ಇವತ್ತು ಕ್ರಿಯೇಟ್ ಮಾಡುತ್ತಿದ್ದೀರಿ. ದಯವಿಟ್ಟು use your good offices.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೇ, ಕಬ್ಬಿನ ಮೇಲೆ ಪರ್ ಟನ್ ಪರ್ಚೇಸ್ ಟ್ಯಾಕ್ಸ್ 65 ರೂಪಾಯಿಗಳು ಇತ್ತು. ಅದನ್ನು ಈಗ 55 ರೂಪಾಯಿ ಮಾಡಿದ್ದಾರೆ. ಅಂದರೆ ಸರ್ಕಾರದವರು 10 ರೂಪಾಯಿ ಕಡಿಮೆ ಮಾಡಿದ್ದಾರೆ. ಮಹಾರಾಷ್ಟ್ರದಲ್ಲಿ ಇದು 20 ರೂಪಾಯಿ ಇದೆ. ರೈತರು ವಿಶೇಷವಾಗಿ ಉತ್ತರ ಕರ್ನಾಟಕದ ರೈತರ ಮುಖ್ಯವಾದ ಕಮರ್ಷಿಯಲ್ ಕ್ರಾಪ್

ಎಂದರೆ ಕಬ್ಬು ಒಂದೇ. ಮಹಾರಾಷ್ಟ್ರದ ರೀತಿಯಲ್ಲಿ ಇಲ್ಲೂ ಸಹಿತ ಸರ್ಕಾರ ಮಾಡಬೇಕೆಂದು ಕೋರುತ್ತೇನೆ. ರೋಡ್ ಸೆಸ್ ಅನ್ನು 10 ರೂಪಾಯಿನಿಂದ 5 ರೂಪಾಯಿಗಳಿಗೆ ಇಳಿಸಿದ್ದೀರಿ. ಇದನ್ನು ಹಾಗೆಯೇ ಕಂಟಿನ್ಯೂ ಮಾಡಿ. ಅದರ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ರೋಡ್ ಸೆಸ್ ಇರಲಿ. ಆದರೆ ಈ ಪರ್ಚೇಸ್ ಟ್ಯಾಕ್ಸ್ ಏನಿದೆ, ಇದನ್ನು ಮಹಾರಾಷ್ಟ್ರದಲ್ಲಿ ಇದ್ದ ಹಾಗೆ ಮಾಡಬೇಕು ಎನ್ನುವುದು ನಮ್ಮ ಆಗ್ರಹ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಏಳಿಗೆಗೋಸ್ಕರ ಆಯೋಗವೊಂದನ್ನು ರಚನೆ ಮಾಡುವುದಾಗಿ ಸರ್ಕಾರ ಹೇಳಿದೆ. ಆಯೋಗಗಳನ್ನು ರಚನೆ ಮಾಡುವುದರಲ್ಲಿ ಈ ಸರ್ಕಾರ ನಿಸ್ಸೀಮವಾಗಿದೆ. ಈಗಾಗಲೇ ಎಷ್ಟೊಂದು ಆಯೋಗಗಳು ರಚನೆಯಾಗಿವೆ. ಮಾನ್ಯ ಮೊಯ್ಲಿಯವರ ನೇತೃತ್ವದ ಆಯೋಗ, ಮಾನ್ಯ ರಾಮಸ್ವಾಮಿಯರ ನೇತೃತ್ವದ ಆಯೋಗ, ವಾಟಾಳ್ ನಾಗರಾಜ್ ನೇತೃತ್ವದ ಆಯೋಗ ಹೀಗೆ ಅನೇಕ ಆಯೋಗಗಳನ್ನು ಈ ಸರ್ಕಾರ ನೇಮಿಸಿದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಏನೋ ಒಂದಷ್ಟು ಕೆಲಸವನ್ನು ಆ ಆಯೋಗದಲ್ಲಿ ಮಾಡಲಿಕ್ಕೆ ಹೊರಟಿದ್ದರು, ಆದರೆ ಸರ್ಕಾರ ಅದಕ್ಕೆ ತಿರುಪತಿ ನಾಮ ಹಾಕಿಬಿಟ್ಟಿತು. ಅದರ ಅವಧಿಯನ್ನು ಸರ್ಕಾರ ಅಂತ್ಯಗೊಳಿಸಿತು. ಇದಲ್ಲದೆ ಸರ್ಕಾರ ಅನೇಕ ಟಾಸ್ಕ್‌ಫೋರ್ಸ್‌ಗಳನ್ನು ಸಹಾ ಮಾಡಿದೆ.

ಶ್ರೀ ಸಿ. ಬೈರೇಗೌಡ: ನಮ್ಮ ಹಳ್ಳಿಯ ಕಡೆ ಈ ಟಾಸ್ಕ್‌ಫೋರ್ಸ್‌ಗಳನ್ನು ಏನಪ್ಪ ಇದು ಟಸ್ ಪುಸ್ ಕಮಿಟಿಗಳು ಎಂದು ನನ್ನನ್ನು ಕೇಳುತ್ತಾರೆ. ಈ ಸಂದರ್ಭದಲ್ಲಿ ಇದನ್ನು ಜ್ಞಾಪಿಸಿದ್ದು ಒಳ್ಳೆಯದಾಯಿತು.

ಶ್ರೀ ಜೆ.ಟಿ. ಪಾಟೀಲ್: ಮಾನ್ಯ ಸಿಂಧ್ಯಾರವರೇ, ತಮ್ಮ ಕಾಲದಲ್ಲಿ ಗುಂಡು ಮತ್ತು ಬಂದೂಕುಗಳಿಗೆ ಸಂಬಂಧಪಟ್ಟಂತೆ ಆಯೋಗಗಳನ್ನು ನೇಮಿಸಿದ್ದೀರಿ. ನಮ್ಮ ಸರ್ಕಾರ ಸುಧಾರಣೆ ಸಲುವಾಗಿ ಆಯೋಗವೊಂದನ್ನು ರಚಿಸಿದರೆ ತಾವೇಕೆ ಅದನ್ನು ಟೀಕೆ ಮಾಡಬೇಕು?

ಶ್ರೀ ಪಿ.ಜಿ. ಆರ್. ಸಿಂಧ್ಯ: ಆಯಿತು ಸ್ವಾಮಿ, ನಾನು ಆ ಟೀಕೆಯನ್ನು ವಾಪಸ್ ತೆಗೆದುಕೊಳ್ಳುತ್ತೇನೆ. ಬೆಂಗಳೂರು ಅಭಿವೃದ್ಧಿಗೆ, ಶಿಕ್ಷಣಕ್ಕೆ, ಆರೋಗ್ಯಕ್ಕೆ, ಕೃಷಿಗೆ, ಹಣಕಾಸಿಗೆ, ಆಡಳಿತಕ್ಕೆ ಮತ್ತು ಮಾಹಿತಿ ತಂತ್ರಜ್ಞಾನಕ್ಕೆ ಸರ್ಕಾರ ಕಾರ್ಯಪಡೆಗಳನ್ನು ರಚಿಸಿದೆ. ಹಾಗಾದರೆ ಈ ಮಂತ್ರಿಗಳಿಗೇನು ಕೆಲಸ? ಮುಖ್ಯಮಂತ್ರಿಗಳು ಆಗಲಿಕ್ಕೆ ಸ್ಪರ್ಧಿಗಳಾಗಿರುವವರೇ ಇವತ್ತು ಅನೇಕ ಮಂತ್ರಿಗಳಾಗಿದ್ದಾರೆ. ಅದಕ್ಕೆ ಅವವು ಅರ್ಹರೂ ಕೂಡ ಆಗಿದ್ದಾರೆ. ಮಾನ್ಯ ಖರ್ಗೆಯವರು, ಶ್ರೀಕಂಠಯ್ಯನವರು ಮುಂತಾಗಿ ಎಲ್ಲರೂ ಹಿರಿಯ ಮಂತ್ರಿಗಳೇ ಆಗಿದ್ದಾರೆ. ಇವರುಗಳಿಗೇನು ಕೆಲಸ ಬೇಡವೇ? ಆಯೋಗದವರು ಹೇಳಿದಂತೆ ಇವರು ಕೇಳಬೇಕೇ? ಸರ್ಕಾರದವರು ಏಕೆ ಈ ಆಯೋಗಗಳನ್ನು ನೇಮಕ ಮಾಡುತ್ತಿದ್ದಾರೆ ಎಂದರೆ, either to postpone the decisions or not to take decisions ಡಿಸಿಷನ್ ತೆಗೆದುಕೊಳ್ಳುವುದು ಬೇಡವಾದಾಗ ಅದನ್ನು ಕಮಿಟಿಗೆ ರೆಫರ್ ಮಾಡುವ, ಟಾಸ್ಕ್‌ಫೋರ್ಸ್ ರಚಿಸುವ ಕೆಲಸ ಮಾಡಲಾಗುತ್ತಿದೆ. ಈ ರೀತಿಯ ಕೆಲಸ ಮಾಡಲಿಕ್ಕೆ ಈ ಸರ್ಕಾರ ಹೊರಟಿದೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೇ, ಇಷ್ಟೊಂದು ಕಾರ್ಯಪಡೆಗಳನ್ನು ಈ ಸರ್ಕಾರ ಏತಕ್ಕಾಗಿ ಮಾಡಿದೆ ಎನ್ನುವುದಕ್ಕೆ ನಾನೊಂದು ಮಾತನ್ನು ಹೇಳಬಯಸುತ್ತೇನೆ.

ಮಾನ್ಯ ರಾಜಾಜಿಯವರು ಹೇಳಿದ ಮಾತೊಂದು ನನಗೆ ಇಲ್ಲಿ ನೆನಪಾಗುತ್ತಿದೆ. ರಾಜಾಜಿಯವರು ಏನು ಹೇಳುತ್ತಿದ್ದರು ಎಂದರೆ, ಒಬ್ಬ ಮಂತ್ರಿಯಾದವರು ತನ್ನ ಇಲಾಖೆ ಬಗ್ಗೆ ಸಂಪೂರ್ಣವಾಗಿ ಜ್ಞಾನ ಹೊಂದಿರಬೇಕು, ಅದರ ಜೊತೆಗೆ ಆ ಇಲಾಖೆಯಲ್ಲದೆ ಎಲ್ಲಾ ಇಲಾಖೆಗಳ ಜ್ಞಾನವೂ ಸಹಾ ಇರಬೇಕು, ಸಾಮೂಹಿಕ ಜವಾಬ್ದಾರರಾಗಿರಬೇಕು, ಅಂತಹವರು ಮಾತ್ರ ಮಂತ್ರಿಗಳಾಗಬೇಕು ಎಂದು ಹೇಳುತ್ತಿದ್ದರು. ಈ ಸರ್ಕಾರ ಆಯೋಗಗಳನ್ನು ಹೆಚ್ಚಾಗಿ ನೇಮಿಸುತ್ತಿರುವುದನ್ನು ನೋಡಿದರೆ, ಬಹುಶಃ ಅಂತಹ ಜ್ಞಾನ ಇರುವವರು ಈ ಸರ್ಕಾರದಲ್ಲಿ ಯಾರೂ ಇದ್ದಂತೆ ಕಾಣುವುದಿಲ್ಲ ಎಂಬ ಮಾತನ್ನು ನಾನು ಹೇಳಬಯಸುತ್ತೇನೆ.

ಶ್ರೀ ಪಿ.ಹೆಚ್. ಪೂಜಾರ್: ರಾಜ್ಯಾದ್ಯಂತ ಆಯೋಗದ ರಚನೆ ಕಾರ್ಯ ಚಟುವಟಿಕೆ ನಡೆಯುತ್ತಿದೆ. ಮುಳುಗಡೆ ಭಾಗದಲ್ಲಿ ಒಂದು ಸಮಿತಿ ರಚನೆ, ನಮ್ಮಲ್ಲಿ ಎಲ್ಲರೂ ಸಮಿತಿ ರಚನೆ ಸರ್ಕಾರ, ಸಮಿತಿ ರಚನಾ ಸಚಿವರು ಎಂದು ಬಿರುದು ಕೊಡುತ್ತಿದ್ದಾರೆ. ಮುಳುಗಡೆ ಎಷ್ಟಾಗಿದೆ ಎಂದು ಅದಕ್ಕೆ ಒಂದು ಸಮಿತಿ ರಚನೆ ಮಾಡುತ್ತಿದ್ದಾರೆ, ತಿನ್ನುವುದಕ್ಕೆ ಎಷ್ಟು ಮಾಡಬೇಕೆಂದರೆ ಅದಕ್ಕೆ ಒಂದು ಸಮಿತಿ ಮಾಡುತ್ತಾರೆ. ಮಲೇರಿಯಾ ಆಗುತ್ತದೆಯೋ ಇಲ್ಲವೋ ಎಂದು ಹೇಳುವುದಕ್ಕೆ ಒಂದು ಸಮಿತಿ. ಆ ವರದಿಗಳ ಬಗ್ಗೆ ಇದುವರೆಗೆ ಏನೂ ಕ್ರಮ ಜರುಗಿಸಿಲ್ಲ. ಸಮಿತಿ ರಚನಾ ಸರ್ಕಾರದವರಿಂದ ಆ ವರದಿಗಳ ಬಗ್ಗೆ ಇದುವರೆಗೆ ಯಾವುದೇ ಕ್ರಮ ಜರುಗಿಸಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ: ನಾನು ಸರ್ಕಾರಕ್ಕೆ ಸಲಹೆ ಕೊಡುವುದು ಏನೆಂದರೆ, ಎಷ್ಟು ಆಯೋಗಗಳು, ಎಷ್ಟು ಕಾರ್ಯಪಡೆಗಳು ಏನೇನು ಕೆಲಸ ಮಾಡುತ್ತಿವೆ ಎಂದು ಜನರಿಗೆ ತಿಳಿಸುವುದಕ್ಕೆ ಎಷ್ಟು ಹಣ ಖರ್ಚಾಗುತ್ತದೆ ಎಂದು ಗೊತ್ತಾಗಬೇಕು. ನಾನ್ ಪ್ಲ್ಯಾನ್ ಎಕ್ಸ್‌ಪೆಂಡಿಚರ್ ಎಷ್ಟು ಇದೆ ಎಂದು ಗೊತ್ತಾಗಬೇಕು. ಅದಕ್ಕೆ ಒಂದು ದೊಡ್ಡ ಆಯೋಗ ಮಾಡಿ ಮಾನಿಟರ್ ಮಾಡುವುದನ್ನು ನೀವೇ ಮುಖ್ಯ ಮಂತ್ರಿಗಳೇ ಇಟ್ಟುಕೊಳ್ಳಿ. ಎಲ್ಲಾ ಮುಖ್ಯ ಮಂತ್ರಿಗಳೇ ಇಟ್ಟುಕೊಳ್ಳುತ್ತಾರೆ. ಅಗ್ರಿಕಲ್ಚರ್ ಮಿನಿಸ್ಟರ್ ಬಗ್ಗೆ ಅವರಿಗೆ ಕಾನ್‌ಫಿಡೆನ್ಸ್ ಇಲ್ಲ. ಫೈನಾನ್ಸ್ ಅವರ ಕಡೆ ಇರಬೇಕು, ಪವರ್ ಅವರ ಕಡೆ ಇರಬೇಕು, ಎಕ್ಸೈಸ್ ಅವರ ಕಡೆ ಇರಬೇಕು. ಎಲ್ಲಾ ಇಲಾಖೆಗಳು ಅವರ ಕಡೆ ಇರಬೇಕು. ಅವರದೇ ವೈಭವೀಕರಣ ಆಗಬೇಕು. ಇದೆಲ್ಲಾ ಆದಮೇಲೆ ಬಜೆಟ್‌ನಲ್ಲಿ ಏನೆಂದರೆ ರೈತರಿಗೆ ಪಂಗನಾಮ. ಅವರು ರೈತರ ಕೇಂದ್ರ ಬಿಂದು. ಮಾನ್ಯ ಧರ್ಮ್‌ಸಿಂಗ್‌ರವರೇ ತಾವು ಆ ಕಡೆ ಗಮನಕೊಟ್ಟು ಮಾಡಿಸಿ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಒಂದು ಆಯೋಗ ರಚನೆ ಮಾಡಿದ್ದೀರಿ. ನಾವು ಅದನ್ನು ಒಪ್ಪುತ್ತೇವೆ. ಅದಕ್ಕೆ ಒಬ್ಬ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಾಧೀಶರನ್ನು ಅಥವಾ ಹೈಕೋರ್ಟ್ ನ್ಯಾಯಾಧೀಶರನ್ನು ನೇಮಕ ಮಾಡಿ. ಕರ್ನಾಟಕದಲ್ಲಿ ಶೆಡ್ಯೂಲ್ಡ್ ಕ್ಯಾಸ್ಟ್‌ನ 102-103 ಕಮ್ಯುನಿಟಿಗಳಿವೆ. 10 ಮೇಜರ್ ಕಮ್ಯುನಿಟಿಗಳಿವೆ. ಅದರಲ್ಲಿ 10 ಜನರಿಗೆ ಬೇರೆ ಬೇರೆ ಸಬ್ ಕ್ಯಾಸ್ಟ್ ಮೆಂಜರ್ ಮಾಡಿ. ಇತ್ತೀಚೆಗೆ ವರ್ಗೀಕರಣದ ಬಗ್ಗೆ ಒಂದು ಪ್ರಶ್ನೆ ಎದ್ದಿದೆ. ಶೆಡ್ಯೂಲ್ಡ್ ಕ್ಯಾಸ್ಟ್‌ನಲ್ಲಿ ವರ್ಗೀಕರಣ ಆಗಬೇಕೆಂದು ದಲಿತ ಸಂಘರ್ಷ ಸಮಿತಿಯವರು ಒಂದು ಹೋರಾಟವನ್ನು ಕರ್ನಾಟಕದಲ್ಲಿ ಪ್ರಾರಂಭ ಮಾಡಿದ್ದಾರೆ. ಈ ಹೋರಾಟ ಆಂಧ್ರ

ಪ್ರದೇಶದಲ್ಲಿ ಯಾವ ಬಣ್ಣ ತೆಗೆದುಕೊಂಡಿತು ಎಂದು ತಮಗೆ ಗೊತ್ತಿದೆ. ಆ ರೀತಿಯ ಹೋರಾಟ ಇಲ್ಲಿ ಆಗಬಾರದು ಎಂದು ನಿಮ್ಮ ಮತ್ತು ನಮ್ಮ ಬಯಕೆ. ನಾನು ನಿಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಇವತ್ತು ಈ ಒಂದು ಆಯೋಗವನ್ನು ತಾವು ಏನು ರಚನೆ ಮಾಡಿದ್ದೀರಿ, ಈ ಆಯೋಗಕ್ಕೆ ದಲಿತ ಸಂಘರ್ಷ ಸಮಿತಿಯವರ ಬೇಡಿಕೆ ಏನಿದೆ ಅದನ್ನು ರೆಫರ್ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ವರ್ಗೀಕರಣದ ದೃಷ್ಟಿಯಿಂದ ಯಾವ ಯಾವ ವರ್ಗಕ್ಕೆ ಏನೇನು ಸಿಕ್ಕಿದೆ ಎನ್ನತಕ್ಕಂಥದ್ದು ಗೊತ್ತಾಗಬೇಕೆನ್ನುವ ದೃಷ್ಟಿಯಿಂದ ಹೇಳಿ, ತಾವು ಕಳೆದ ಸಾರಿ ನಿಮ್ಮ ಮ್ಯಾನಿಫೆಸ್ಟೋದಲ್ಲಿ ಎಸ್‌ಸಿ/ಎಸ್‌ಟಿಯವರ ಬಗ್ಗೆ ಏನು ಹೇಳಿದ್ದೀರಿ ಗೊತ್ತಾ? ಎಸ್‌ಸಿ/ಎಸ್‌ಟಿ ನಡೆಸತಕ್ಕಂತಹ ಎಲ್ಲಾ ಸಂಘ ಸಂಸ್ಥೆಗಳಿಗೆ ಅನುದಾನ ಕೊಡುತ್ತೇವೆಂದು ಹೇಳಿದ್ದೀರಿ. ಕಳೆದ ವರ್ಷ ಕೊಡುವುದಕ್ಕಾಗಲಿಲ್ಲ, ಈ ವರ್ಷ ಕೊಟ್ಟಿಲ್ಲ. ಇನ್ನು ಯಾವಾಗ ಕೊಡುತ್ತೀರಿ? ಮುಂದಿನ ವರ್ಷ ಕೊಡುತ್ತೀರಾ? ಎಲ್ಲಿ ಹೇಳಿದ್ದೀರಿ, ಏನೂ ಹೇಳಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ನಮ್ಮ ಸರ್ಕಾರದ ಪ್ರಣಾಳಿಕೆ ಇರತಕ್ಕಂಥದ್ದು ಒಂದು ಸರ್ಕಾರ ರಚನೆಯಾದರೆ ಅದರ ಐದು ವರ್ಷದ ಅವಧಿಯಲ್ಲಿ ಮಾಡುವಂತಹ ಮಾರ್ಗ ಸೂಚಿ.

ಶ್ರೀ ಎಸ್.ಎಸ್. ಪಾಟೀಲ್: ನೀವು ಒಂದು ಆದೇಶ ಹೊರಡಿಸಿದ್ದೀರಿ. ಈಗ ಇದ್ದ ಮ್ಯಾನೇಜ್‌ಮೆಂಟ್‌ನಲ್ಲಿ ಯಾರ್‍ಯಾರು ಏಡೆಡ್ ಸಂಬಳ ತೆಗೆದುಕೊಳ್ಳುವ ನೌಕರರ ಇದ್ದಾರೆ, ಅವರು ರಿಟೈರ್ಡ್ ಆದರೆ ಅದನ್ನು ಮತ್ತೆ ತುಂಬಿಸಿದರೆ ಅದನ್ನು ಶಾಶ್ವತ ಅನುದಾನ ರಹಿತ ಎಂದು ಆದೇಶ ಹೊರಡಿಸಿದ್ದೀರಿ. ಇದು ಎಸ್‌ಸಿ/ಎಸ್‌ಟಿ ಮತ್ತು ಎಲ್ಲಾ ಮ್ಯಾನೇಜ್ ಮೆಂಟ್‌ಗಳಿಗೂ ಅನ್ವಯಿಸುತ್ತವೆ. ಇದ್ದದ್ದು ಕಡಿಮೆ ಮಾಡುವುದಕ್ಕೆ ಹೊರಟಿದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಈ ಆಯವ್ಯಯ ಏನಿದೆ, ಈ ಆಯವ್ಯಯವನ್ನು ನಾನು ಸಂಪೂರ್ಣವಾಗಿ ತಿರಸ್ಕಾರ ಮಾಡುವುದಕ್ಕೆ ಹೋಗುವುದಿಲ್ಲವೆಂದು ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ. ಕೆಲವು ಕಾಸ್ಮೆಟಿಕ್ಸ್ ಛೇಂಜಸ್ ಮಾಡಿದ್ದೀರಿ. ಚೆನ್ನಾಗಿ ಕಾಣಬೇಕೆನ್ನುವ ದೃಷ್ಟಿಯಿಂದ ಮಾಡಿ, ಮೂಲಭೂತವಾಗಿ ನಿಮ್ಮ ಹತ್ತಿರ ಬಂಡವಾಳ ಇಲ್ಲ. ಬಂಡವಾಳ ಇಲ್ಲದೆ ಇರತಕ್ಕಂತಹ ಬಡಾಯಿ ಶಬ್ದಗಳು. ಎಲ್ಲಾ ಶಬ್ದಗಳು ವೈಭವೀಕರಣವಾಗಿವೆ ಅಷ್ಟೆ.

ಶ್ರೀ ಕಾಗೋಡು ತಿಮ್ಮಪ್ಪ: ನೀವು ಆಗ ಬೀಗ ಹಾಕಿಕೊಂಡು ಬಜೆಟ್ ಮಂಡಿಸುತ್ತಿದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಪಿಯರ್‌ಲೆಸ್ ಕಂಪನಿಯಿಂದ ಸಾಲ ತೆಗೆದುಕೊಂಡು ಬಂದಾಗ ಸರ್ಕಾರ ಬಿದ್ದು ಹೋಗಿರಲಿಲ್ಲವಾ? ಒಂದೂವರೆ ಲಕ್ಷ ಉಪಾಧ್ಯಾಯರನ್ನು ನಾವು ಒಂದು ವರ್ಷದಲ್ಲಿ ಅಪಾಯಿಂಟ್ ಮಾಡಿಕೊಂಡಿದ್ದೇವೆ. 1995-96, 96-97, 97-98 ರಲ್ಲಿ ರೆವಿನ್ಯೂ ಡೆಫಿಸಿಟ್ ಇರಲಿಲ್ಲ. ಮಾನ್ಯ ಕೃಷ್ಣರವರಿಗೆ ನಾನು ಮೆಚ್ಚುತ್ತಿದ್ದೆ. ಯಾವಾಗ ಎಂದರೆ, ಅವರ 38 ವರ್ಷದ ಅನುಭವ, ಅವರಿಗೆ ಇರತಕ್ಕಂತಹ ಇನ್‌ಫರ್ಮೇಷನ್ ಟೆಕ್ನಾಲಜಿ ಓಪನ್ ಮಾಡಿರತಕ್ಕಂತಹ ಇನ್‌ಫರ್ಮೇಷನ್ ಮತ್ತು ನಿಮ್ಮಂತಹ ಅತಿರಥ ಮಹಾರಥರು ಇರುವ ಈ ಸಚಿವ ಸಂಪುಟದಲ್ಲಿ ಯಾವ್ಯಾವುದಕ್ಕೆ ಎಷ್ಟು ಭಾಗ ಖರ್ಚು ಮಾಡಿದ್ದೀರಿ, ಇದರಲ್ಲಿ ರೈತರ

ಪರವಾಗಿ ಹಿಂದುಳಿದ ವರ್ಗದ ಪರವಾಗಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರ ಪರವಾಗಿ ನೀವು ಏನಾದರೂ ಕಳೆದ ನಾಲ್ಕು ವರ್ಷಗಳಿಂದ ಪರ್ಸೆಂಟೇಜ್‌ನಲ್ಲಿ ಏನಾದರೂ ಜಾಸ್ತಿ ಮಾಡಿದ್ದರೆ, ನಾವು ಇದನ್ನು ಸ್ವಾಗತ ಮಾಡಿ ನಮ್ಮ ಭಾಷಣ ಬೇಡ ನೀವು ಪಾಸ್ ಮಾಡಿಕೊಳ್ಳಿ ಎಂದು ಹೇಳುತ್ತಿದ್ದೆವು. ಇದರಿಂದಾಗಿ ಈ ಸರ್ಕಾರದಲ್ಲಿ ಬಂಡವಾಳ ಇಲ್ಲ, ಬಡ ರೈತರಿಗೆ ಹಿಂದುಳಿದ ವರ್ಗದವರಿಗೆ ಬಹಳ ದೊಡ್ಡ ಮೋಸವಾಗಿದೆ. ಬ್ಯಾಕ್‌ವರ್ಡ್ ಕ್ಲಾಸ್‌ಗೆ ಏನೂ ಆಗಿಲ್ಲ. ಹಾಸ್ಟೆಲ್‌ಗಳು ಇಲ್ಲ, ಮೊರಾರ್ಜಿ ದೇಸಾಯಿ ಬಿಲ್ಡಿಂಗ್ ಕಟ್ಟುವುದಕ್ಕೆ ಕ್ರಮ ತೆಗೆದುಕೊಂಡಿದ್ದೀರಿ. ಅದು ಬಿಟ್ಟರೆ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ರೆಕಮಂಡೇಷನ್ ಅದನ್ನು ಪ್ರಸ್ತಾಪ ಮಾಡಿಲ್ಲ. ಹಿಂದುಳಿದ ವರ್ಗದ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಹಿಂದುಳಿದ ವರ್ಗದ ಜನ ನಿಮಗೆ ಓಟು ಕೊಟ್ಟ ಜನ ಏನು ಅಂದುಕೊಂಡಾರು? ಎರಡನೇ ಬಜೆಟ್‌ನಲ್ಲಿಯೂ ಹಿಂದುಳಿದ ವರ್ಗದವರಿಗೆ ದುಡ್ಡು ಕೊಟ್ಟಿಲ್ಲವೆಂದರೆ ಏನು ಹೇಳಬೇಕು? ಮಾತೆತ್ತಿದರೆ ದೇವರಾಜ ಅರಸ್‌ರವರ ಹೆಸರು ತೆಗೆದುಕೊಳ್ಳುತ್ತೀರಿ. ನಮಗೆ ಅನ್ಯಾಯವಾಗಿದೆ, ಆ ವರ್ಗದ ಜನಗಳಿಗೆ ಅನ್ಯಾಯವಾಗಿದೆ, ಈ ಆಯವ್ಯಯದಿಂದ ಯಾವುದೇ ರೀತಿಯ ನ್ಯಾಯ ಸಿಕ್ಕಿಲ್ಲ ಎನ್ನತಕ್ಕಂತಹ ಮಾತು ಹೇಳಿ, ಇದು ನಮ್ಮಗಳ ಪಾಲಿಗೆ ಒಂದು ಮೋಸವೆಂದು ಹೇಳಿ, ಒಂದೆರಡು ಉದಾಹರಣೆಗಳನ್ನು ಮಾತ್ರ ಕೊಟ್ಟಿದ್ದೇನೆ. ಮೋಟಾರು ವಾಹನ ಇಲಾಖೆಯಲ್ಲಿ ಆಗತಕ್ಕಂತಹ ಅನ್ಯಾಯದ ಬಗ್ಗೆ ಇರಬಹುದು, ಜಿಲ್ಲಾ ಪಂಚಾಯಿತಿಯಲ್ಲಿ ಇದು ಬಹಳ ಮುಖ್ಯವಾದ ವಿಚಾರ. ನೀವು ನನಗೆ ಕೇಳಬಹುದು. ಕಾಗೋಡು ತಿಮ್ಮಪ್ಪನವರು, ಸಿಂಧ್ಯರವರೇ ನೀವು ಅನುಭವಸ್ಥರು ಬೇರೆಯವರ ಹಾಗೆ ನೀವು ಮಾತನಾಡಬಾರದು, ಗವರ್ನಮೆಂಟ್‌ಗೆ ಕನ್‌ಸ್ಟ್ರಕ್ಟೀವ್ ಆದ ಸಲಹೆಗಳನ್ನು ಕೊಡಿ ಎಂದು ಹೇಳಬಹುದು. ಕನ್‌ಸ್ಟ್ರಕ್ಟೀವ್ ಸಜೆಷನ್ ಕೊನೆಯಲ್ಲಿ ಕೊಡುತ್ತೇನೆ. ನಾವು 100 ರೂಪಾಯಿ ಪಿಡಬ್ಲ್ಯುಡಿ ಇರಿಗೇಷನ್, ಯಾವುದಕ್ಕೆ ಆಗಲಿ ಖರ್ಚು ಮಾಡುತ್ತೇವೆ. 35 ಪರ್ಸೆಂಟ್ ಬೇರೆ ಬೇರೆ ಲೆವಲ್‌ನಲ್ಲಿ ಕಟ್ ಆಗುತ್ತದೆ. ಯುಟಿಲೈಸೇಷನ್ ಸರಿಯಾದ ರೀತಿಯಲ್ಲಿ ಆಗುತ್ತಿಲ್ಲ. ಅದು ನೀರಾವರಿ ಇಲಾಖೆ ಇರಬಹುದು, ನಿನ್ನೆ ದಿನ ಒಬ್ಬ ಮಂತ್ರಿಗಳು ಅದನ್ನು ಅಲ್ಲಗಳೆದಿದ್ದಾರೆ. ಆದರೆ ಆ ಸ್ಥಿತಿಗೆ ಏಕೆ ಹೋಯಿತು, ಇವತ್ತು ಪ್ರಾಮಾಣಿಕವಾಗಿ ಮಾತನಾಡುವ ಈ ಸದನದಲ್ಲಿ ಭ್ರಷ್ಟಾಚಾರದ ಬಗ್ಗೆ ಧರ್ಮ ಯುದ್ಧ ಸಾರಿದ ಒಂದು ಉದಾಹರಣೆ ಇದ್ದರೆ ಕೊಡಿ. ಆರ್‌ಟಿಓ ಆಫೀಸ್‌ಗಳಲ್ಲಿ ಯಾವ ರೀತಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಹೇಳಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದರೆ ಅಂತಹವರಿಗೆ ನೀವು ಪುರಸ್ಕಾರ ಕೊಟ್ಟರೆ ನಿಮ್ಮ ಭ್ರಷ್ಟಾಚಾರದ ವಿರುದ್ಧ ಧರ್ಮ ಯುದ್ಧ ಎಲ್ಲಿ ಬರುತ್ತದೆ? ಈ ಇಲಾಖೆಯಲ್ಲಿ ಖರ್ಚಾಗತಕ್ಕಂತಹ ಹಣ 35 ಪರ್ಸೆಂಟ್ ವಿವಿಧ ಕಡೆಗಳಲ್ಲಿ ಕಟ್ ಆಗುತ್ತಿದೆ. ಅದನ್ನು ಕಡಿಮೆ ಮಾಡುವವರೆಗೆ ಇದು ಹಾಗೆಯೇ ನಡೆದುಕೊಂಡು ಹೋಗುತ್ತದೆ. ಅದಕ್ಕೆ ನಾವು ಸಹಕಾರ ಕೊಡುತ್ತೇವೆ. ಅಲ್ಲಿದ್ದಾಗ ನೀವು ಕೊಟ್ಟಿದ್ದೀರಿ. ನಾನು ಇಲ್ಲವೆಂದು ಹೇಳುವುದಿಲ್ಲ. ವಾಸ್ತವಾಂಶ ಮರೆತು ನಾವು ಜನಗಳಿಗೆ ಸುಳ್ಳು ಹೇಳುವುದನ್ನು ನಿಲ್ಲಿಸಬೇಕಾಗುತ್ತದೆ. ಎಲ್ಲೋ ಒಂದು ಕಡೆ ನಾವೆಲ್ಲಾ ಕುಳಿತು ಕಾನ್‌ಸೆನ್‌ಸಸ್‌ಗೆ ಬರಬೇಕಾಗುತ್ತದೆ. ಇದನ್ನು ನಿಲ್ಲಿಸಲೇ ಬೇಕಾಗುತ್ತದೆ. ಅದಕ್ಕೆ ನಮ್ಮ ಪಕ್ಷ ತಯಾರಿದೆ ಎಂದು ಹೇಳುತ್ತೇನೆ. ನಾವು ಡಿಬೇಟ್ ಮಾಡುವುದಕ್ಕೆ ತಯಾರಿದ್ದೇವೆ. 26ನೇ

ತಾರೀಖು ಬಜೆಟ್ ತೆಗೆದುಕೊಂಡು ಬರುತ್ತೀರಿ, 30ನೇ ತಾರೀಖಿನ ಮಧ್ಯಾಹ್ನದ ಒಳಗಡೆ ಪಾಸ್ ಮಾಡಿಕೊಡಬೇಕೆಂದು ಹೇಳುತ್ತೀರಿ. ರಾಜ್ಯಪಾಲರ ಭಾಷಣ ಬಜೆಟ್, ಯಾವುದನ್ನು ತೆಗೆದುಕೊಳ್ಳುವುದು, ಯಾವುದನ್ನು ಬಿಡುವುದು ಎಷ್ಟು ಕಡತಗಳಿವೆ, ಎಲ್ಲರಿಗೂ ಮಾತನಾಡಬೇಕೆಂದು ಆಸೆ ಇದೆ, ಸಮಯ ಇಲ್ಲ. ಅಧ್ಯಕ್ಷರೇ, ಆದರೂ ತಾವು ಅವಕಾಶ ಮಾಡಿ ಕೊಟ್ಟಿದ್ದೀರಿ, ನಾವು ಕೊಟ್ಟ ವಿಚಾರಗಳ ಬಗ್ಗೆ ಸರ್ಕಾರ ಪ್ರತಿಕ್ರಿಯೆಯನ್ನು ಉತ್ತರದಲ್ಲಿ ನಿರೀಕ್ಷೆ ಮಾಡುತ್ತೇನೆ. ಇದು ಒಂದು ಭ್ರಷ್ಟಾಚಾರದಿಂದ ಹೊರತಾಗಿರತಕ್ಕಂತಹ ಸರ್ಕಾರ ಅಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

1.30 ಪಿ.ಎಂ.

+ ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೆ, 2001-02ನೇ ಸಾಲಿನ ಆಯವ್ಯಯದ ಮೇಲೆ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದಕ್ಕಾಗಿ ಮೊದಲನೆಯದಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇಂದು Economics is an art of satisfying the infinits wants with the limited resources ಎನ್ನುವುದು ಗೊತ್ತಿದೆ. ಇಂದು ಆರ್ಥಿಕ ಸಂಪನ್ಮೂಲ ಲಿಮಿಟ್‌ನಲ್ಲಿದೆ ಆದರೆ ಅವಶ್ಯಕತೆಗಳು ಆ ರೀತಿ ಇಲ್ಲ. ಇದನ್ನು ಸರಿಯಾದ ವ್ಯವಸ್ಥೆಯಲ್ಲಿಡಲು ಪ್ರಯತ್ನ ಮಾಡಬೇಕಾಗಿದೆ. ಇಂದು ರಾಜ್ಯದ ಬಜೆಟ್‌ನಲ್ಲಿ 2,600 ಕೋಟಿ ರೂಪಾಯಿಗಳ ಡಿಫಿಸಿಟ್ ಇದೆ. ಇದನ್ನು ತಗ್ಗಿಸಲು ಅಡಿಶನಲ್ ರಿಸೋರ್ಸಸ್ ಮೊಬಿಲೈಸ್ ಮಾಡುವ ಬಗ್ಗೆ ಸರಿಯಾದ ಪ್ರಯತ್ನಗಳನ್ನು ಸರ್ಕಾರ ಮಾಡಿಲ್ಲ. ಇಂದು ಅಭಿವೃದ್ಧಿ ಕಾರ್ಯಗಳನ್ನು ಸಾಲವನ್ನು ತೆಗೆದುಕೊಂಡು ಮಾಡುವ ಹಂತಕ್ಕೆ ಹೋಗಿದೆ. ಇನ್ನು ನೌಕರರ ಸಂಬಳವನ್ನು ಕೊಡುವುದಕ್ಕೆ ಮತ್ತು ಬೇರೆ ಬೇರೆ ಸಣ್ಣ ಪುಟ್ಟ ಕೆಲಸಗಳನ್ನು ಮಾಡುವ ಸಲುವಾಗಿ ನಮ್ಮ ರಾಜ್ಯದ ಜನತೆ ಮೇಲೆ ಕರವನ್ನು ಹೇರುವ ಕೆಲಸವನ್ನು ಸರ್ಕಾರ ಮಾಡಿದೆ. ನನ್ನ ಅಭಿಪ್ರಾಯದಲ್ಲಿ ಅಡಿಶನಲ್ ರಿಸೋರ್ಸ್‌ಸ್ ಮೊಬಿಲೈಸ್ ಮಾಡುವುದಕ್ಕೆ ಇನ್ನು ಬೇರೆ ಬೇರೆ ಕ್ಷೇತ್ರಗಳನ್ನು ತೆಗೆದುಕೊಳ್ಳಬಹುದಾಗಿತ್ತು. ಇದರ ಜೊತೆಗೆ ಈಗೇನು ಕೆಲವೊಂದಕ್ಕೆ ತೆರಿಗೆಯನ್ನು ಹಾಕಿದ್ದಾರೆ ಅವುಗಳಲ್ಲಿ ಎಕ್ಸೈಸ್ ಮೇಲೆ ಇನ್ನೂ ಹೆಚ್ಚು ತೆರಿಗೆಯನ್ನು ಸರ್ಕಾರ ಹಾಕಬಹುದಾಗಿತ್ತು. ಇಂದು ಎಕ್ಸೈಸ್‌ನವರು ಬಡ್ಡಿಯನ್ನು ಮನ್ನಾ ಮಾಡುವ ಕಾರ್ಯಕ್ರಮವನ್ನು ಮಾಡಿದರು. ಆದರೂ ಇವೊತ್ತಿನವರೆಗೆ ಅವರು ದುಡ್ಡನ್ನು ಕಟ್ಟಲಿಲ್ಲ. ನಾನು ಹೇಳುವುದೇನೆಂದರೆ ಅಬ್ಕಾರಿ ಗುತ್ತಿಗೆದಾರರುಗಳಿಗೆ ಬಡ್ಡಿ ಮನ್ನಾ ಮಾಡುವ ಬದಲು ಅವರಿಂದ ಪೂರ್ಣವಾಗಿ ಬರಬೇಕಾದ ಬಾಕಿಯನ್ನೆಲ್ಲಾ ವಸೂಲಿ ಮಾಡಬೇಕು. ಒಬ್ಬ ಬಡವ ಸಾಲವನ್ನು ಕಟ್ಟಲು ಸಾಧ್ಯವಾಗದಿದ್ದರೆ ಅವನ ಮನೆಯನ್ನು ಜಪ್ತಿ ಮಾಡಲಾಗುತ್ತಿದೆ. ಈ ಮೂಲಕ ರೆವಿನ್ಯೂ ರೆಕವರಿ ಮಾಡುವುದಕ್ಕೆ ಸರ್ಕಾರಕ್ಕೆ ಶಕ್ತಿ ಇದೆ. ಆದರೆ ಅದೇ ಒಬ್ಬ ಅಬ್ಕಾರಿ ಗುತ್ತಿಗೆದಾರರಿಂದ ಬಾಕಿ ವಸೂಲಿ ಮಾಡುವುದಕ್ಕೆ ಸರ್ಕಾರಕ್ಕೆ ಶಕ್ತಿ ಇಲ್ಲದಂತಾಗಿದೆ. ಮಂಗಳೂರಿನಲ್ಲಿ ಜಿಲ್ಲಾಧಿಕಾರಿಗಳು ಇಂಥ ಅಬ್ಕಾರಿ ಗುತ್ತಿಗೆದಾರರಿಂದ ರೆವಿನ್ಯೂ ರೆಕವರಿ ಮಾಡಲು ಹೋದಾಗ ಅವರನ್ನೇ ಬೇರೆ ಕಡೆಗೆ ವರ್ಗಾವಣೆ ಮಾಡಿಬಿಟ್ಟರು. ಇನ್ನು ಸೆಕೆಂಡ್ಸ್ ಬಗ್ಗೆ ಹೇಳಬೇಕೆಂದರೆ ಮಾನ್ಯ ವೀರಪ್ಪಮೊಯ್ಲಿಯವರು ಇಂದು ರಾಜ್ಯದಲ್ಲಿ 1,450 ಕೋಟಿ ರೂಪಾಯಿಗಳ ವರಮಾನ ಸೆಕೆಂಡ್ಸ್‌ನಿಂದಾಗಿ ಸೋರಿಹೋಗುತ್ತಿದೆಯೆಂದು ಹೇಳಿದ್ದಾರೆ. ಇದನ್ನು

ನಾನು ಒಪ್ಪುತ್ತೇನೆ. ಇದನ್ನು ನಿಲ್ಲಿಸಲು ಆಗದಿರುವುದಕ್ಕೆ ಜನಸಾಮಾನ್ಯರೇ ಮಾತನಾಡಿಕೊಳ್ಳುತ್ತಿರುವ ಹಾಗೆ ಸರ್ಕಾರಗಳು ಅವರ ಕೈಯಲ್ಲಿಯೇ ಸಿಕ್ಕಿಬಿದ್ದೆ ಎನ್ನುವ ಅಭಿಪ್ರಾಯವನ್ನು ಕೊಡುತ್ತಿದ್ದೇವೆ. ಒಬ್ಬ ಅಧಿಕಾರಿ ಡಿಸ್ಟಿಲರಿಯಲ್ಲಿದ್ದು ಸೆಕೆಂಡ್ಸ್ ಹಿಡಿಯುತ್ತಾನೆ. ಆ ಸೆಕೆಂಡ್ಸ್ ಯಾವ ಡಿಸ್ಟಿಲರಿಯಿಂದ ಬಂತೋ ಅದನ್ನು ತಿಳಿದು you keep that officer under suspension ಮತ್ತು ಆ ಡಿಸ್ಟಿಲರಿ ಲೈಸೆನ್ಸ್‌ನ್ನು ರದ್ದುಗೊಳಿಸುವ ಕೆಲಸವಾಗಬೇಕು. ಇದರಿಂದಾಗಿ ಸರ್ಕಾರದ ಆದಾಯ ಎರಡುಮೂರು ಪಟ್ಟು ಜಾಸ್ತಿಯಾಗುತ್ತದೆ. ಇನ್ನು ಇದಲ್ಲದೆ ಇಂದು ಯಾವ ಕೆಮಿಕಲ್ ಯೂನಿಟ್‌ಗೆ ಎಷ್ಟು ಸ್ಪಿರಿಟ್ ಸಪ್ಲೈ ಮಾಡಿದ್ದಾರೆ, ಇದರಲ್ಲಿ ಎಷ್ಟು ಉಪಯೋಗವಾಗಿದೆ, ಇದನ್ನು ಬಳಸಿ ಬೇರೆ ಕೆಮಿಕಲ್ ಎಷ್ಟು ಉತ್ಪಾದನೆ ಮಾಡಿದ್ದಾರೆ, ಆ ಕೆಮಿಕಲ್ ಯೂನಿಟ್ ಎಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದನೆಗಾಗಿ ಬಳಸಿಕೊಂಡಿದೆ ಎಂಬ ಬಗ್ಗೆ ತನಿಖೆಯನ್ನು ಮಾಡಿದರೆ ಸತ್ಯಾಂಶ ಹೊರಬರುತ್ತದೆ. ನಾನಂತೂ ಖಂಡಿತವಾಗಿ ಹೇಳುವುದೇನೆಂದರೆ ಇಂದು ಯಾವ ಸ್ಪಿರಿಟ್ ಕೂಡ ಕೆಮಿಕಲ್ ಯೂನಿಟ್‌ಗಳಿಗೆ ಹೋಗುತ್ತಿಲ್ಲ. ಶರಾಬು ಉತ್ಪಾದನೆಗೆ ಹೋಗುತ್ತಿದೆ. ಇದೇ ರೀತಿಯಾದರೆ ಕೇರಳದಲ್ಲಿ ಆದದ್ದು ಇಲ್ಲಿಯೂ ರಿಪೀಟ್ ಆಗುತ್ತದೆ. ಆದುದರಿಂದ ಇದನ್ನು ತಪ್ಪಿಸಲು ಸರ್ಕಾರ ಗಮನಹರಿಸಬೇಕಾಗಿದೆ. ಇದೇ ರೀತಿಯಲ್ಲಿ ಸಕ್ಕರೆ ಕಾರ್ಖಾನೆಗಳಿಂದ ಮೊಲ್ಯಾಸಿಸ್ ಎಷ್ಟು ಹೊರಗೆ ಬಂದಿದೆ ಮತ್ತು ಎಕ್ಸ್‌ಪೋರ್ಟ್ ಎಷ್ಟು ಆಗಿದೆ ಮತ್ತು ಕ್ಯಾಟಲ್ ಫೀಡ್ ಯೂನಿಟ್‌ಗಳಲ್ಲಿ ಎಷ್ಟು ಮೊಲ್ಯಾಸಿಸ್ ಉಪಯೋಗವಾಗಿದೆ ಎಂಬ ಬಗ್ಗೆ ಕೂಡ ತನಿಖೆಯನ್ನು ಮಾಡಿದರೆ ಇಂದು ಬರುತ್ತಿರುವ ಸೆಕೆಂಡ್ಸ್ ವ್ಯಾಪಾರ ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆ. ಇವುಗಳನ್ನು ನಿಲ್ಲಿಸುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳದಿದ್ದರೆ ಸರ್ಕಾರಕ್ಕೆ ಬರಬಹುದಾದ ಆದಾಯವನ್ನು ಹೆಚ್ಚಿಸಲು ಸಾಧ್ಯವಾಗುವುದಿಲ್ಲ. ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡರೆ ರೆವಿನ್ಯೂ ಡಿಫಿಸಿಟ್‌ನ್ನು ಕೂಡ ಸ್ವಲ್ಪಮಟ್ಟಿಗೆ ಕಡಿಮೆ ಮಾಡಲು ಸಾಧ್ಯವಾಗುತ್ತದೆ. ಆದರೆ, ಇದರ ಬಗ್ಗೆ ಕಟ್ಟುನಿಟ್ಟಿನ ಕ್ರಮವನ್ನು ಯಾವ ಸರ್ಕಾರಗಳೂ ಕೂಡ ತೆಗೆದುಕೊಳ್ಳುತ್ತಿಲ್ಲ. ಇಂದು ಬಿಯರ್ ಕಿರಾಣಿ ಅಂಗಡಿಗಳಲ್ಲಿಯೂ ಮಾರಲು ಅನುಕೂಲವಾಗುವ ಹಾಗೆ ಮಾಡುತ್ತಿದ್ದಾರೆ. ಇದರ ಬಗ್ಗೆ ಜನ ಸಾಮಾನ್ಯರ ಪ್ರತಿಕ್ರಿಯೆ ಮತ್ತು ಶಾಸಕರುಗಳ ಪ್ರತಿಕ್ರಿಯೆಯನ್ನು ಕೇಳಿದ ಮೇಲಾದರೂ ಸರ್ಕಾರ ಇದನ್ನು ಕೈಬಿಡಬೇಕೆಂದು ನಾನು ಆಗ್ರಹಪಡಿಸುತ್ತೇನೆ. ಮುಖ್ಯಮಂತ್ರಿಗಳು ಬೆಂಗಳೂರನ್ನು ಸಿಂಗಾಪುರವನ್ನಾಗಿ ಮಾಡಲು ಹೊರಟಿದ್ದಾರೆ, ಆದರೆ ಇನ್ನೂ ಬೆಂಗಳೂರು ಸಿಂಗಪುರವಾಗಿಲ್ಲ. ಬೆಂಗಳೂರು ಸಿಂಗಪುರವಾದ ಮೇಲೆ ಬೇಕಾದರೆ ಇದರ ಬಗ್ಗೆ ಆಲೋಚನೆ ಮಾಡಲಿ. ದಯವಿಟ್ಟು ಇಂದಿನ ದಿನಗಳಲ್ಲಿ ಮಾತ್ರ ಕಿರಾಣಿ ಅಂಗಡಿಗಳಲ್ಲಿ ಬಿಯರ್ ಸಿಗದ ಹಾಗೆ ವ್ಯವಸ್ಥೆ ಮಾಡಬೇಕು. ಮಾನ್ಯ ಅಧ್ಯಕ್ಷರೆ, ಹಿಂದಿನ ಸರ್ಕಾರದಲ್ಲಿ ಪ್ರತಿಯೊಬ್ಬ ಮಂತ್ರಿಯೂ ಕೂಡ ಅವರವರ ಇಲಾಖೆಗೆ ಸಂಬಂಧಪಟ್ಟಂತೆ ರಾಜ್ಯಪಾಲರ ಭಾಷಣದ ಮೇಲೆ ಮತ್ತು ಆಯವ್ಯಯದ ಮೇಲೆ ಸದಸ್ಯರುಗಳು ಮಾತನಾಡಿರುವುದಕ್ಕೆ ಉತ್ತರ ಕೊಡುತ್ತಿದ್ದರು. ಆದರೆ ಇಂದು ರಾಜ್ಯಪಾಲರ ಭಾಷಣದ ಮೇಲಾಗಲಿ ಆಯವ್ಯಯದ ಮೇಲಾಗಲಿ ಸದಸ್ಯರುಗಳು ಮಾತನಾಡಿರುವುದಕ್ಕೆ ಕೇವಲ ಮುಖ್ಯಮಂತ್ರಿಗಳು ಮಾತ್ರ ಉತ್ತರವನ್ನು ಕೊಡುತ್ತಿದ್ದಾರೆ. ಹಿಂದಿನ ಸರ್ಕಾರದಲ್ಲಿ ಪ್ರತಿಯೊಬ್ಬ ಮಂತ್ರಿಯೂ ಅವರವರ ಇಲಾಖೆಗೆ ಸಂಬಂಧಪಟ್ಟಂತೆ ಉತ್ತರ ಕೊಡಲು ಬಹಳ

ಉತ್ಸುಕರಾಗಿರುತ್ತಿದ್ದರು. ಆದರೆ, ಇತ್ತೀಚೆಗೆ ಆ ಪರಿಸ್ಥಿತಿ ಇಲ್ಲದೇ ಕೇವಲ ಪ್ರಶ್ನೋತ್ತರಗಳಿಗೆ ಉತ್ತರಗಳನ್ನು ಕೊಡುವುದೊಂದನ್ನು ಬಿಟ್ಟರೆ ಉಳಿದಂತೆ ನಡೆಯುವ ಎಲ್ಲಾ ಚರ್ಚೆಗಳಿಗೆ ಮುಖ್ಯಮಂತ್ರಿಗಳೇ ಉತ್ತರ ಕೊಡುತ್ತಿದ್ದಾರೆ. ಮುಂದಿನ ವರ್ಷಗಳಿಂದಲಾದರೂ ಮಂತ್ರಿಗಳೇ ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಡುವ ವ್ಯವಸ್ಥೆಯಾಗಬೇಕು. ಪಿ.ಜಿ.ಆರ್. ಸಿಂಧ್ಯಾರವರು ಮಾತನಾಡುವಾಗ ಈ ಸರ್ಕಾರದ ಟಾಸ್ಕ್‌ಫೋರ್ಸ್ ಬಗ್ಗೆ ಹೇಳಿದರು. ನಾನು ಹಿಂದಿನ ವರ್ಷ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಈ ಟಾಸ್ಕ್‌ಫೋರ್ಸ್ ಎನ್ನುವುದು ಒಂದು ರೀತಿಯಲ್ಲಿ ಇ.ಎಲ್.ಆರ್.ಟಿ.ಎಸ್. ಇದ್ದಹಾಗೆ ಎಂದು ಹೇಳಿದ್ದೆ. ಇದು ನ್ಯಾರೋಗೇಜ್ ರೈಲ್ವೆ ಲೈನ್ ಇದ್ದ ಹಾಗೆ ಆಗಿದೆ. ಏಕೆಂದರೆ ಇಂದು ಯಾವ ಮಂತ್ರಿಗಳಿಗೂ ಜವಾಬ್ದಾರಿಯಿಲ್ಲ. ಎಲ್ಲವನ್ನೂ ಮುಖ್ಯಮಂತ್ರಿಗಳೇ ತೆಗೆದುಕೊಂಡಿದ್ದಾರೆ. ಟಾಸ್ಕ್‌ಫೋರ್ಸ್ ಮೂಲಕ ಕೆಲಸವನ್ನು ಮಾಡಿಸಿ ಅವರ ಅಭಿಪ್ರಾಯವನ್ನು ಪಡೆದು ಅದೇ ರೀತಿ ಅಧಿಕಾರಿಗಳ ಮೂಲಕ ಕೆಲಸವನ್ನು ಮುಖ್ಯಮಂತ್ರಿಗಳು ಮಾಡಿಸುತ್ತಿದ್ದಾರೆ. ಇದರಿಂದಾಗಿ ಮಂತ್ರಿಗಳು ಕೇವಲ ನಾಮಕಾವಸ್ಥೆಗೆ ಮಾತ್ರ ಮಂತ್ರಿಗಳಾಗಿದ್ದಾರೆ ಎನ್ನುವ ನನ್ನ ಅಭಿಪ್ರಾಯವನ್ನು ಸದನದಲ್ಲಿ ಹೇಳುತ್ತಿದ್ದೇನೆ. ನಾನು ಕರಾವಳಿ ಪ್ರದೇಶದಿಂದ ಬಂದವನಾಗಿರುವುದರಿಂದ ನಾನು ಮೀನುಗಾರಿಕೆ ಬಗ್ಗೆ ಕೆಲವೊಂದು ವಿಚಾರಗಳನ್ನು ಮಾತನಾಡಬಯಸುತ್ತೇನೆ. ರಾಜ್ಯ ಸರ್ಕಾರ ಸೀಬರ್ಡ್ ಬಗ್ಗೆ ಹೇಳಿಕೊಂಡಿದೆ. ಆದರೆ ಸೀಬರ್ಡ್ ಪ್ರಾಜೆಕ್ಟ್‌ನ್ನು ಕೇಂದ್ರ ಸರ್ಕಾರದಿಂದ ನೇವಿಯವರು ಇಂಪ್ಲಿಮೆಂಟ್ ಮಾಡುವುದಕ್ಕೆ ಹೋಗಿದ್ದಾರೆ. ಅದರಲ್ಲಿ ಹಣವನ್ನು ಒದಗಿಸಿದ್ದಾರೆ, ಇದನ್ನು ಆಮದಳ್ಳಿ ಮೀನುಗಾರಿಕೆ ಬಂದರಿಗೆ ಕೊಟ್ಟಿದ್ದಾರೆ. ಅದು ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ಬರುವ ಅವಶ್ಯಕತೆ ಇಲ್ಲ. ರಾಜ್ಯ ಸರ್ಕಾರದ ಕೈ ಇದರಲ್ಲಿ ಏನೂ ಇಲ್ಲ. ಆದರೆ ಆ ಬಗ್ಗೆ ಬಜೆಟ್‌ನಲ್ಲಿ ಹೇಳಿದ್ದಾರೆ. ಇನ್ನು ಮೀನುಗಾರಿಕೆ ನಿರ್ದೇಶನಾಲಯವನ್ನು ಮಂಗಳೂರಿಗೆ ಮತ್ತು ಸಕ್ಕರೆ ನಿರ್ದೇಶನಾಲಯವನ್ನು ಬೆಳಗಾಂಗೆ ಸ್ಥಳಾಂತರಿಸುವ ಬಗ್ಗೆ ಹೇಳಿದ್ದಾರೆ. ಯಾವ ಇಲಾಖೆಯಲ್ಲಿಯೂ ಕೂಡ ಇಂದು ನಿರ್ದೇಶಕರುಗಳಿಗೆ ಸಂಪೂರ್ಣ ಅಧಿಕಾರವಿಲ್ಲವಾಗಿದೆ. ಕಾರ್ಯದರ್ಶಿಗಳನ್ನು ಮತ್ತು ಸಂಬಂಧಪಟ್ಟ ಮಂತ್ರಿಗಳನ್ನೂ ಕೂಡ ನಿರ್ದೇಶನಾಲಯವನ್ನು ಸ್ಥಳಾಂತರಿಸುವ ಕಡೆ ಕಳುಹಿಸಿದರೆ ನಾನು ಇವರ ಕ್ರಮವನ್ನು ಒಪ್ಪುತ್ತೇನೆ. ಈ ರೀತಿ ಮಾಡದಿದ್ದರೆ ಮೀನುಗಾರಿಕೆ ನಿರ್ದೇಶಕರು ಮಂಗಳೂರಿನಲ್ಲಿದ್ದರೂ ಕೂಡ ಸದನ ನಡೆಯುವಾಗ, ಸಭೆ ನಡೆಯುವಾಗ ಅವರು ಬೆಂಗಳೂರಿನಲ್ಲಿದ್ದು ಕಡೆಗೆ ಇವರನ್ನು ನಾವು ಬೆಂಗಳೂರಿನಲ್ಲಾಗಲೀ ಅಥವಾ ಮಂಗಳೂರಿನಲ್ಲಾಗಲಿ ಹುಡುಕಿದರೂ ಸಿಗದ ಪರಿಸ್ಥಿತಿಯೇ ಹೆಚ್ಚಾಗುತ್ತದೆ. ಇದೊಂದೇ ಅಲ್ಲದೇ ಎಲ್ಲಾ ಕಡತಗಳೂ ಕೂಡ ನಿರ್ದೇಶಕರಿಂದ ಕಾರ್ಯದರ್ಶಿಗಳಿಗೆ, ಕಾರ್ಯದರ್ಶಿಗಳಿಂದ ಮಂತ್ರಿಗಳಿಗೆ ಬರಬೇಕಾಗುತ್ತದೆ. ರಾಯಚೂರಿನಲ್ಲಿ ಒಳನಾಡು ಮೀನುಗಾರಿಕೆ ಕಡತ ಮೊದಲು ಮಂಗಳೂರಿಗೆ ಹೋಗಬೇಕಾಗುತ್ತದೆ. ತದನಂತರ ಆ ಕಡತ ಮಂಗಳೂರಿನಿಂದ ಬೆಂಗಳೂರಿಗೆ ಬರಬೇಕಾಗುತ್ತದೆ. ಈ ಕಡತ ಅಂತಿಮ ನಿರ್ಧಾರದ ನಂತರ ಪುನಃ ಮೊದಲು ಮಂಗಳೂರಿಗೆ ಹೋಗಿ ತದನಂತರ ಅಲ್ಲಿಂದ ರಾಯಚೂರಿಗೆ ಹೋಗಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರ ಆಲೋಚನೆಯನ್ನೇ ಮಾಡಲಿಲ್ಲವೆಂದು ಕಾಣುತ್ತದೆ. ಈ ರೀತಿ ಪುನಃ ತೊಂದರೆಗೆ ಒಳಗಾಗುತ್ತಾರೆ ಹೊರತು ಬರೀ ನಿರ್ದೇಶನಾಲಯವನ್ನು ಮಂಗಳೂರಿಗೆ ಕಳುಹಿಸಿದರೆ ಕರಾವಳಿ ಮೀನುಗಾರರ

ಸಮಸ್ಯೆ ಪರಿಹಾರವಾಗಲಿಲ್ಲ. ಇನ್ನು ನಾವು ಕೊಡುತ್ತಿದ್ದ, ಡೀಸೆಲ್ ಮೇಲಿನ ಸೇಲ್ಸ್ ಟ್ಯಾಕ್ಸ್ ಎಕ್ಸ್‌ಂಪ್ಷನ್ ನಿಲ್ಲಿಸಿದ್ದೀರಿ. ಹೊಸ ಕಾರ್ಯಕ್ರಮ ಏನೂ ಹಾಕಲಿಲ್ಲ. ಮ ಸಚಿವರು ಅವರು ಮಾತನಾಡುವಾಗ ಏನು ಹೊಸ ಕಾರ್ಯಕ್ರಮ ಮಾಡಿದ್ದಾರೆ ಎಂಬು ಹೇಳಲಿ.

ಶ್ರೀ ಬಿ. ರಮನಾಥ್ ರೈ: ತೆರಿಗೆ ನಿಲ್ಲಿಸಿದ್ದಾರೆ ಎಂದು ಯಾರು ಹೇಳಿದರು?

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ನಿಲ್ಲಿಸಿದರು ಎಂದು ಯಾರೋ ಹೇಳಿದರು. ಇಲಾಖೆಯಲ್ಲಿ ಕೇಳಿ ಹೇಳಿದ್ದು. ಮಾನ್ಯ ಸಭಾಪತಿಯವರು ಹೇಳಿಕೆಯನ್ನು ಕೊಟ್ಟಿದ್ದಾರೆ.

ಶ್ರೀ ಬಿ. ರಮಾನಾಥ್ ರೈ: ಇದರ ಬಗ್ಗೆ ಹೆಚ್ಚು ಚರ್ಚೆಯನ್ನು ಮಾಡಿದರೆ ನಾನು ಕಡತವನ್ನು ತರುತ್ತೇನೆ. ಈಗ ಮಾಹಿತಿ ಇಲ್ಲ. ಮಾನ್ಯ ಸಚಿವರು ಸದನವನ್ನು ತಪ್ಪು ದಾರಿಗೆ ಎಳೆಯಬಾರದು. ಕಳೆದ ವರ್ಷ ಕೊಟ್ಟಿದ್ದು ಒಂದು ವರ್ಷಕ್ಕೋಸ್ಕರ. ಪುನಃ ಈ ವರ್ಷ ನಿಮ್ಮ ಬಜೆಟ್‌ನಲ್ಲಿ ಇಲ್ಲ. ಮೀನುಗಾರರಿಗೆ ಕೊಡುತ್ತಿರುವ ಡೀಸೆಲ್ ಸಬ್ಸಿಡಿಯ ಕರವನ್ನು ತೆಗೆದಿದ್ದರೆ ತಮಗೆ ಪ್ರಾಯಶಃ ಸಚಿವರಾಗಿ ಗೊತ್ತಿರಲಿಕ್ಕಿಲ್ಲ. ತಾವು ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಹೋಗಿ, ನೋಡಿ, ಕೇಳಿ ಬನ್ನಿ.

ಶ್ರೀ ಬಿ. ರಮಾನಾಥ್ ರೈ: ಮುಂದಿನ ವೇಳೆಗೆ ತೆರಿಗೆ ಬರುತ್ತದೋ ಇಲ್ಲವೋ ಆಗ ಈ ವಿಚಾರ ನೋಡೋಣ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಅವತ್ತು ಮಾನ್ಯ ಸಭಾಪತಿಯವರು ಹೇಳಿಕೆಯನ್ನು ಮಾಡಿದ್ದರು. ಅದಕ್ಕಿಂತ ಜಾಸ್ತಿ ನಮಗೆ ಏನು ಬೇಕಾಗಿದೆ. ಪತ್ರಿಕೆಯಲ್ಲಿ ಬಂದಿದೆ. ನಿಮ್ಮ ಶಾಸಕರು ಹೇಳಿದ್ದಾರೆ, ನಿಮ್ಮ ಹತ್ತಿರ ಕೇಳಿ ಹೇಳಿಕೆಯನ್ನು ಕೊಟ್ಟಿರತಕ್ಕಂಥಾದ್ದು. ಹೊಸ ಕಾರ್ಯಕ್ರಮ ಏನೂ ಇಲ್ಲ. ಕೆ.ಎಫ್.ಡಿ.ಸಿ. ಯ ನೌಕರರಿಗೆ ಇನ್ನು ಸಂಬಳ ಕೊಟ್ಟಿಲ್ಲ. ಅದು ಯಾವತ್ತು ಕೊಡುತ್ತೀರೋ ಗೊತ್ತಿಲ್ಲ. ಕೆ.ಸಿ.ಎಫ್.ಎಫ್. ಮೈಸೂರಿನಲ್ಲಿ ಇದೆ. ಇವತ್ತು ಮೀನು ಮರಿ ಉತ್ಪಾದನೆ ಕಡಿಮೆಯಾಗಿದೆ. ಹೊರರಾಜ್ಯದಿಂದ ತಂದು ಇಲ್ಲಿ ಮೀನಿನ ಮರಿಯನ್ನು ಬಿಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇದನ್ನು ಏಕೆ ಮಾಡುತ್ತಿಲ್ಲ. ಹೊಸ ಕಾರ್ಯಕ್ರಮವಾದ ಮಲ್ಪೆ 2ನೇ ಹಂತದ ಕಾರ್ಯಕ್ರಮ ಅದರ ಪ್ರಗತಿ ಕುಂಠಿತಗೊಂಡಿದೆ. ಏಕೆ ನಿಲ್ಲಿಸುತ್ತಿದ್ದಾರೆ ಗೊತ್ತಿಲ್ಲ. ಮೊನ್ನೆ ಒಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಅವರು ಉತ್ತರವನ್ನು ಕೊಟ್ಟಿದ್ದಾರೆ. ಹಿಂದೆ ನಾವು ಯಾವ ಕಾರ್ಯಕ್ರಮಗಳು ಹಾಕಿಕೊಂಡಿದ್ದೇವೆ, ಮಂಗಳೂರು 2ನೇ ಹಂತ, ಕಾರವಾರದ 2ನೇ ಹಂತ ಹಾಗೂ ಗಂಗೊಳ್ಳಿ, ಇದೆಲ್ಲಾ ಬಿಟ್ಟರೆ ಹೊಸ ಕಾರ್ಯಕ್ರಮ ಇವರು ಯಾವುದೂ ಹಾಕಿಕೊಂಡಿಲ್ಲ. ಹಳೆಯ ಕಾರ್ಯಕ್ರಮಗಳನ್ನೇ ಪುನಃ ರಿಪೀಟ್ ಮಾಡಿದ್ದಾರೆ. ಹೊಸ ಕಾರ್ಯಕ್ರಮಗಳನ್ನು ಏನೇನು ಮಾಡುತ್ತಿದ್ದೀರಿ ಎಂದು ದಯವಿಟ್ಟು ನಿಮಗೆ ಉತ್ತರವನ್ನು ಯಾವಾಗ ಕೊಡುವುದಕ್ಕೆ ಅವಕಾಶವಾಗುತ್ತದೆ ಆಗ ಕೊಡಿ. ಇನ್ನು ನೀವು ರಸ್ತೆಗಳ ದುರಸ್ತಿಗಾಗಿ ಹಣವನ್ನು ಕೊಟ್ಟಿಲ್ಲ. ಈಗ ಮಾಡಿರುವಂತಹ ರಸ್ತೆಗಳ ದುರಸ್ತಿಗಾಗಿಯೇ ಹಣವನ್ನು ಕೊಡುವಂತಹ ಪ್ರಯತ್ನವನ್ನು ಮಾಡಬೇಕು. ಇದರಲ್ಲಿ ಏನು ರಾಜಕಾರಣ? ನಿಮಗೆ ಆ ಇಲಾಖೆಯಲ್ಲಿ ಏನಾದರೂ ಸಹಕಾರ ಬೇಕಾದರೆ ನಾನು ಕೊಡುವುದಕ್ಕೆ

ತಯಾರಿದ್ದೇನೆ. ಅದರಲ್ಲಿ ರಾಜಕಾರಣವನ್ನು ಮಾಡುವುದಿಲ್ಲವೆಂದು ಹೇಳುತ್ತಾ ಸ್ವಲ್ಪ ಉತ್ತರವನ್ನು ಕೊಡಬೇಕಾಗುತ್ತದೆ. ಇನ್ನು ಭಾರೀ ನೀರಾವರಿಯಲ್ಲಿ ನಮ್ಮ ಭಾಗ ಒಂದೇ ಒಂದು ಕಾರ್ಯಕ್ರಮ ಇರುವುದು. ವರಾಹಿ ಯೋಜನೆ ಬರುತ್ತದೆ ಎಂದು ನಾವು ಕಾದು ಕಾದು ಸಾಕಾಯಿತು. ಕಳೆದ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಏಳು ಕೋಟಿ 60 ಲಕ್ಷ ರೂಪಾಯಿಗಳ ಒಂದು ಅನುದಾನ ಇಟ್ಟರು. ಆದರೆ ಅವರು ಕರೆದಂತಹ ಟೆಂಡರ್ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಆದ್ದರಿಂದ ಎಲ್ಲಾದರೂ ಈ ಬಾರಿ ನೀರಾವರಿಯಲ್ಲಿ ಎಷ್ಟು ಇಟ್ಟಿದ್ದಾರೆ ನನಗೆ ಬೇಕಾಗಿಲ್ಲ. ಕೇವಲ ಪತ್ರಿಕೆಯಲ್ಲಿ ಬರುವುದಕ್ಕೋಸ್ಕರ ಅಲೋಕೇಷನ್ ಇಟ್ಟರೆ ಸಾಕಾಗುವುದಿಲ್ಲ. ಕೆಲಸ ಇನ್ನೂ ಪ್ರಾರಂಭವಾಗಿಲ್ಲ, ಆದರೆ ನಮ್ಮ ಕಡೆಯಲ್ಲಿ ಕೆಲಸ ಪ್ರಾರಂಭ ಡಿಸೆಂಬರ್ ತಿಂಗಳಲ್ಲಿ ಆಗುತ್ತದೆಂದು ಭಾಷಣ ಮಾಡಿದ್ದರು. ಆದರೆ ಇವತ್ತಿಗೂ ಕೆಲಸ ಪ್ರಾರಂಭವಾಗಿಲ್ಲ. ಇನ್ನು ಮಾನ್ಯ ಸಿಂಧ್ಯರವರು ಜಲ ಸಂವರ್ಧನೆ ಬಗ್ಗೆ ಹೇಳಿದರು. ಅದು ಕಳೆದ ಬಜೆಟ್‌ನಲ್ಲಿ ಇತ್ತು. ಇನ್ನು ಸಣ್ಣ ನೀರಾವರಿಯಲ್ಲಿ ಒಂದು ಕಾರ್ಯಕ್ರಮ ಹಾಕಿಕೊಂಡರು. 'ಪಶ್ಚಿಮ ವಾಹಿನಿ' ಅದು ಬಹಳ ಒಳ್ಳೆಯ ಕಾರ್ಯಕ್ರಮ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಅದರ ಬಗ್ಗೆ ಒಂದು ಶಬ್ದ ಸಹ ಈ ಬಜೆಟ್‌ನಲ್ಲಿ ಇಲ್ಲ. ಅದಕ್ಕೆ ಹಣವನ್ನು ಇಟ್ಟಿದ್ದರೆ ಈಗ ಏನು ಹೊಸ ಕಾರ್ಯಕ್ರಮ ನೇತ್ರಾವತಿ ನೀರನ್ನು ಈ ಭಾಗಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಾರೆ ಅದೇ ರೀತಿ ಎಲ್ಲಾ ನದಿಗಳಿಗೆ ಉಪ್ಪು ನೀರಿನ ಅಣೆಕಟ್ಟನ್ನು ಕಟ್ಟಿ ಸಣ್ಣಸಣ್ಣ ಚೆಕ್ ಡ್ಯಾಮ್ಸ್ ಅನ್ನು ಮಾಡಿದರೆ ಆ ಭಾಗದ ಜನರಿಗೆ ಸಹಾಯವಾಗುತ್ತಿತ್ತು. ಈ ಭಾಗಕ್ಕೂ ಡೈವರ್ಟ್ ಮಾಡುವುದಕ್ಕೆ ಸಾಧ್ಯವಾಗುತ್ತಿತ್ತು. ಕೇವಲ ಒಂದೇ ಕಡೆಯಿಂದ ನೀರನ್ನು ತಂದು ಬಿಟ್ಟರೆ ತೊಂದರೆಯಾಗುತ್ತದೆಂದು ನನ್ನ ಅಭಿಪ್ರಾಯ. ಇನ್ನು ಸಣ್ಣ ನೀರಾವರಿಗೆ ಹೆಚ್ಚು ಅನುದಾನ ಕೊಡಿ. ನಮ್ಮ ಭಾಗದ ಜನರಿಗೆ ಬಹಳ ಉಪಕಾರವಾಗುತ್ತದೆ ಎಂದು ಇಚ್ಛೆಯನ್ನು ವ್ಯಕ್ತಮಾಡುತ್ತಾ, ಶಿಕ್ಷಣ ಇಲಾಖೆ ಬಗ್ಗೆ ಹೇಳುವುದಾದರೆ ಏಡೆಡ್ ಕಾಲೇಜಿಗೆ ಅನುದಾನವನ್ನು ಕಟ್ ಮಾಡಿದರು. ಅದನ್ನು ರಿವೋಕ್ ಮಾಡಿ ರಿಕ್ರೂಟ್‌ಮೆಂಟ್ ಫ್ರಿಜ್ ಮಾಡಿದರು. ನಾನು ಮೊನ್ನೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಕೇಳಿದೆ. ಸರ್ಕಾರಿ ಕಚೇರಿಗಳಲ್ಲಿ ಫ್ರೀಜ್ ಮಾಡಿದ್ದನ್ನು ಕೇಳಲಿಲ್ಲ ನಾನು. ಏಡೆಡೆ ಕಾಲೇಜುಗಳಿಗೆ ಫ್ರೀಜ್ ಮಾಡಿದ್ದನ್ನು ಕೇಳಿದೆ. ಒಬ್ಬ ಸೈನ್ಸ್ ಟೀಚರ್ ಪೋಸ್ಟ್ ವೇಕೆಂಟ್ ಇದ್ದು, ಅಲ್ಲಿ ಆರ್ಟ್ಸ್ ಟೀಚರ್ ಒಂದು ಸೈನ್ಸ್ ಹುದ್ದೆಯನ್ನು ಟೀಚ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆರ್ಟ್ಸ್ ಟೀಚರ್ ಕಾಮರ್ಸ್ ಹುದ್ದೆಯನ್ನು ಚೀಟ್ ಮಾಡುವುದಕ್ಕಾಗುವುದಿಲಲ. It will have a very bad effect on the career of the students. ಇನ್ನು ಫಸ್ಟ್ ಗ್ರೇಡ್ ಕಾಲೇಜಿನಲ್ಲಿ ಸೈಂಟಿಸ್ಟ್‌ಗಳನ್ನು ತಯಾರು ಮಾಡುವಂಥಾದ್ದು. ಬಿ.ಎಸ್ಸಿ, ಎಂ.ಎಸ್ಸಿ ವಿದ್ಯಾರ್ಥಿಗಳನ್ನು ತಯಾರು ಮಾಡುವಂಥಾದ್ದು. ನೇರವಾಗಿ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಅವರಿಗೆ ಟೀಚಿಂಗ್ ಮಾಡಬೇಕಾದರೆ ಇದೇ ಟೀಚರ್ ಬೇಕಾಗುತ್ತದೆ. ಅವರು ಏನು ಹೋರಾಟ ಮಾಡುತ್ತಾರೆ, ಅದು ನಿಜವಾಗಿ ಶ್ಲಾಘನೀಯವಾದುದು. ಅದರ ಬಗ್ಗೆ ಸ್ವಲ್ಪ ಪ್ರಯತ್ನ ಬೇಕು. ಇನ್ನು ಸಮುದಾಯದ ಶಾಲೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅದು ಹಳೇ ಕಾರ್ಯಕ್ರಮ. ರಾತ್ರಿ ಹೊತ್ತು ಅಗತ್ಯ ಬೀಳುವುದಿಲ್ಲ. ಹಗಲು ಹೊತ್ತು ಒಂದು ಸಭೆಯನ್ನು ಮಾಡಿ ಬಿಟ್ಟರೆ ಸಾಕಾಗುತ್ತದೆ.

ರಾತ್ರಿ ಹೊತ್ತು ಮಾಡಿ ಅದು ಪತ್ರಿಕೆಯಲ್ಲಿ ಬಂದಿತ್ತು. ಶಿಕ್ಷಣ ಇಲಾಖೆ ಅಧಿಕಾರಿಗಳು ಕುಡಿದು ದಾಂಧಲೆ ಮಾಡಿದರು ಎಂದು ಬಂದಿದೆ. ಆದುದರಿಂದ ಇವರು ಏನಾದರೂ ಪೇರೆಂಟ್ಸ್ ಟೀಚರ್ಸ್ ಮೀಟಿಂಗ್ ಮಾಡಬೇಕಾದರೆ ಹಗಲು ಹೊತ್ತು ಮಾಡಿಬಿಟ್ಟರೆ ಒಳ್ಳೆಯದು. ಇನ್ನು ವರ್ಗಾವಣೆ ವಿಚಾರ, ಇವತ್ತು ಚೆನ್ನಾಗಿ ಕನ್ನಡ ಮಾಧ್ಯಮ ಶಾಲೆಗೆ ಹೋಗುವುದಕ್ಕೆ ಯಾರೂ ತಯಾರಿಲ್ಲ. ಆಂಗ್ಲ ಮಾಧ್ಯಮ ಶಾಲೆಗೆ ಕಳುಹಿಸಬೇಕೆಂದು ಎಲ್ಲರೂ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಕನ್ನಡ ಮಾಧ್ಯಮ ಪ್ರೈವೇಟ್ ಸ್ಕೂಲ್ ನಮ್ಮ ಭಾಗದಲ್ಲೆ ಚೆನ್ನಾಗಿ ಇದೆ. ಎಲ್ಲೋ ಒಂದು ಕಡೆಯಲ್ಲಿ ತೊಂದರೆಯಾಗಿದೆ ಎಂದು ನಮ್ಮ ಜಿಲ್ಲೆಯಲ್ಲಿ ಕೂಡ ಸಮಸ್ಯೆಯನ್ನು ಉದ್ಭವ ಮಾಡಿದ್ದಾರೆ. ಹೆಚ್ಚುವರಿ ಶಿಕ್ಷಕರ ವರ್ಗಾವಣೆ ಎಂದು ಮಾಡುತ್ತಿದ್ದಾರೆ. ಈಗ ಶಾಲೆಯಲ್ಲಿ ಒಳ್ಳೆಯ ಶಿಕ್ಷಕರು ಇದ್ದಾರೆ. ಆ ಶಾಲೆಗೆ ಮಕ್ಕಳನ್ನು ಹಾಕಿದರೆ ಅಲ್ಲಿಂದ ವರ್ಗಾವಣೆ ಮಾಡಿದಿರಿ. ಆ ಮಕ್ಕಳ ಪರಿಸ್ಥಿತಿ ಏನಾಗಬೇಕು? ಅದನ್ನು ಸ್ವಲ್ಪ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ನಾನು ಕಳೆದ ಬಾರಿ ಒಂದು ಪ್ರಶ್ನೆ ಕೇಳಿದ್ದೆ. ವರ್ಗಾವಣೆ ಕೌನ್ಸಿಲಿಂಗ್ ಮಾಡುವಾಗ ಒಂದು ಪ್ರಶ್ನೆಯನ್ನು ಕೇಳಿದ್ದೆ, ಒಂದು ವೇಳೆ ಯಾರ್ಯಾರು ಹೋಗಿ ರಿಪೋರ್ಟ್ ಮಾಡಿಕೊಳ್ಳುವುದಿಲ್ಲ ಅವರಿಗೆ ಮರು ಕೌನ್ಸಿಲಿಂಗ್ ಮಾಡುತ್ತೀರಾ ಎಂದು. ಅದಕ್ಕೆ ಇಲ್ಲವೆಂದು ಉತ್ತರ ಕೊಟ್ಟರು. ನಂತರ ಅಧಿಕಾರಿ ವರ್ಗದವರು ಉಲ್ಲಂಘನೆ ಮಾಡುವುದಕ್ಕೆ ಅವಕಾಶ ಇರುತ್ತದಾ? ಇಲ್ಲವಾದಲ್ಲಿ ಹೀಗೆ ಅಕ್ರಮ ರೀತಿಯಲ್ಲೆ ಮರು ಕೌನ್ಸಿಲಿಂಗ್ ಮಾಡಿದವರ ಮೇಲೆ ಯಾವ ಕ್ರಮವನ್ನು ಸರ್ಕಾರದವರು ಜರುಗಿಸುತ್ತೀರಿ ಎಂದು ಕೇಳಿದ್ದಕ್ಕೆ ಇವರು, ಉಡುಪಿ ಜಿಲ್ಲೆಯ ಸಾಮಾನ್ಯ ವರ್ಗಾವಣೆ ಸಂದರ್ಭದಲ್ಲಿ ಹೆಚ್ಚುವರಿ ಶಿಕ್ಷಕರಿಗೆ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿ ಮಾಡಿದ ನಂತರ ವರ್ಗಾವಣೆ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗದೇ ಇರುವುದರಿಂದ 20 ಜನ ಶಿಕ್ಷಕರಿಗೆ ಉಡುಪಿ ಜಿಲ್ಲೆಯ ಉಪನಿರ್ದೇಶಕರು ಮರು ಕೌನ್ಸಿಲಿಂಗ್ ಮಾಡಿ ಇದಕ್ಕೆ ಇಲಾಖೆಯ ಅನುಮೋದನೆ ಕೊಟ್ಟಿದ್ದೆಯೆಂದು ಹೇಳಿದ್ದಾರೆ. ಹಾಗಾದರೆ ಇವರು ಮಾಡಿದ ನಿಯಮವನ್ನು ಇವರು ಬ್ರೇಕ್ ಮಾಡುವುದಾದರೆ ಯಾರಾದರೂ ಶಿಕ್ಷಕರು ವರ್ಗಾವಣೆ ಮಾಡಿದಾಗ ಅಲ್ಲಿ ಹೋಗಿ ಸೇರುತ್ತಾರಾ? ಅವರು ಬೆಂಗಳೂರಿನಲ್ಲೆ ಎಲ್ಲಿಯಾದರೂ ದುಡ್ಡು ಖರ್ಚು ಮಾಡಿದರೆ ಪುನಃ ಕೌನ್ಸಿಲ್ ಮಾಡಬಹುದು ಎಂದು ಪ್ರಯತ್ನ ಮಾಡುತ್ತಾರೆ. ಈಗಾಗಲೇ ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳಿದರು. ಶಿಕ್ಷಣ ಇಲಾಖೆಯಲ್ಲಿ ಅದೇ ರೀತಿ ಪ್ರಾರಂಭವಾಗುತ್ತದೆ. ಕೆಲವು ಜನ ಬೆಳಿಗ್ಗೆ ಇವತ್ತು ನನ್ನ ಹತ್ತಿರ ಬಂದಿದ್ದರು. ಒಂದು ನೋಟನ್ನು ಹಾಕಿ ಒಂದು ಟೇಬಲ್‌ನಿಂದ ಇನ್ನೊಂದು ಟೇಬಲ್‌ಗೆ ಯಾವ ರೀತಿ ಹೋಗುವಂತಹ ಪರಿಸ್ಥಿತಿಯಾಗಿದೆ ಎಂದು ಹೇಳಿದ್ದಾರೆ. ಇನ್ನೊಂದು ಲಿಸ್ಟ್ ಅನ್ನು ಉಡುಪಿಯಿಂದ ಬೆಂಗಳೂರಿಗೆ ಕಳುಹಿಸಿದ್ದಾರೆ. ಅದರಲ್ಲಿ ಇಲ್ಲಿಂದ ವಾಪಸ್ಸು ಹೋಗುವಾಗ ಪುನಃ 103 ಇದ್ದದ್ದು 60 ಜನರಿಗೆ ಇಳಿದಿದೆ. 40 ಜನ ಇನ್‌ಫ್ಲೂಯೆನ್ಸ್ ಮಾಡಿ ಅವರ ಹೆಸರನ್ನು ತೆಗೆದು ಹಾಕಿದ್ದಾಯಿತು. ಇದನ್ನೆಲ್ಲಾ ಬಿಟ್ಟರೆ ಸರ್ಕಾರದಲ್ಲಿ ಬೇರೆ ಬೇರೆ ಆಪಾದನೆಗಳು ಬರುತ್ತವೆ ಅದನ್ನು ಕೇಳುವುದಕ್ಕೆ ಸರ್ಕಾರ ತಯಾರಾಗಿರಬೇಕು ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಾನು ಪವರ್ ಪ್ರಾಜೆಕ್ಟ್ ಬಗ್ಗೆ ಎರಡು ಮೂರು ವಿಷಯಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸೆಲೆಕ್ಷನ್ ಆಫ್ ಎ.ಬಿ.ಬಿ. ಬಿಡದಿ ಪ್ರಾಜೆಕ್ಟ್‌ನಲ್ಲಿ ಟೆಂಡರ್ ಕರೆದಾಗ ಎ.ಬಿ.ಬಿ. ಅವರು ಟೆಂಡರ್‌ನಲ್ಲಿ ಜಾಸ್ತಿ ಪ್ರೈಸ್

ಕೋಟ್ ಮಾಡಿದ್ದರು. ಎಲ್ ಅಂಡ್ ಟಿ ಯವರು ಕಡಿಮೆ ಮಾಡಿದ್ದರು. ಆದರೆ ಸರ್ಕಾರ ಹಾಗೂ ಕೆ.ಪಿ.ಟಿ.ಸಿ.ಎಲ್. ತೀರ್ಮಾನ ಎ.ಬಿ.ಬಿ. ಯವರಿಗೆ ಕೊಡಬೇಕೆಂದು ಮಾಡಿದರು. ಎಲ್ ಅಂಡ್ ಟಿ ಗೆ ಕೊಡಲಿಲ್ಲ. ಇವರ ಕ್ವಾಲಿಟಿ ಸರಿಯಿಲ್ಲ ಎಂದು ಒಂದು ಆಪಾದನೆ ಹಾಕಿದರು. ಎ.ಬಿ.ಬಿ. ಯವರಿಗೆ ಮತ್ತು ಬಿ.ಹೆಚ್.ಇ.ಎಲ್. ನವರಿಗೆ ಫ್ರೆಸ್ ಬಿಡ್ ಹಾಕುವುದಕ್ಕೆ ಕೊಟ್ಟಿದ್ದಾರೆ. ಆದರೆ ಎಲ್ ಅಂಡ್ ಟಿ ಯವರಿಗೆ ಕೊಟ್ಟಿಲ್ಲ. ಎಲ್ ಅಂಡ್ ಟಿ ಯವರು ಪತ್ರ ಬರೆದು ನಮಗೆ ಇನ್ನೊಂದು ಅವಕಾಶವನ್ನು ಕೊಡಿ ನಾವು ಈಗಾಗಲೇ ಕೋಟ್ ಮಾಡಿದಂತಹ ಪ್ರೈಸ್‌ಗೆ ಗ್ಯಾಸ್ ಟರ್ಬೈನ್ ಪ್ರೊವೈಡ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದಕ್ಕೆ ಇವರು ಕೊಟ್ಟಿಲ್ಲ. ಆದುದರಿಂದ ಅದರ ತನಿಖೆಯಾಗಬೇಕಾಗುತ್ತದೆ. ಇದು ಕೆಇಆರ್‌ಸಿ ಯಲ್ಲೂ ಕೂಡ ಮಂಜೂರಾತಿಯಾಗಬೇಕಾಗುತ್ತದೆ. ಆದಕ್ಕೆ ಅನುಮೋದನೆ ಕೊಡದೆ ಯಾವುದನ್ನು ತೆಗೆದುಕೊಳ್ಳುವಂತಿಲ್ಲ, ಅದನ್ನು ಕೇವಲ ನಾಮಕಾವಸ್ತೆಯಾಗಿ ಇಟ್ಟುಕೊಂಡಿದ್ದಾರೆ. ಮಂಗಳೂರಿನಲ್ಲಿ ಬಾರ್ಜ್ ಲಿಕ್ವಿಡ್ ಫ್ಯೂಯಲ್ ಬೇಸ್ಡ್ ಮೌಂಟೆಡ್ ಪವರ ಸ್ಟೇಷನ್ ಅನ್ನು ಕೊಟ್ಟಿದ್ದರು, ಅದನ್ನು ಕೋಲ್ ಬೇಸ್ಡ್‌ಗೆ ಕನ್ವರ್ಟ್ ಮಾಡಿ ಮಂಡ್ಯಕ್ಕೆ ವರ್ಗಾವಣೆ ಮಾಡುತ್ತಿದ್ದಾರೆ. ಲಿಕ್ವಿಡ್ ಫ್ಯೂಯಲ್ ಬೇಸ್ಡ್ ಆಗಿದ್ದರೆ ಯೂರೊ ಇಂಡಿಯಾದವರಿಗೆ ಮುಂದುವರೆಸಿ ನೀವು ಕೋಲ್ ಬೇಸ್ಡ್ ಮಾಡುವುದಕ್ಕೆ ಪ್ರಯತ್ನ ಮಾಡುವಾಗ ಹೊಸ ಟೆಂಡರ್ ಕರೆಯಬೇಕಾಗುತ್ತದೆ. ಹೊಸ ಯೋಜನೆಗೆ ಮಂಜೂರಾತಿಯನ್ನು ಕೊಡುವಾಗ ಕೇಂದ್ರ ಸರ್ಕಾರದ ನೋಟಿಫಿಕೇಷನ್ ಪ್ರಕಾರ 400 ಕೋಟಿ ರೂಪಾಯಿಗಳಿಗೆ ಮೀರಿದ್ದನ್ನು ಟೆಂಡರ್ ಕರೆಯದೆ ಕೊಡುವುದಕ್ಕೆ ಬರುವುದಿಲ್ಲ. ಅದೇ ರೀತಿ ಜಿಂದಾಲ್ ಟ್ರಾಕ್ಟೇಬಲ್‌ನವರಿಗೆ ಗ್ಲೋಬಲ್ ಇನ್ವೆಸ್ಟರ್‌ನಲ್ಲಿ ಕೊಡಲಾಗಿದೆ, ಅದು 400 ಕೋಟಿ ರೂಪಾಯಿಗೆ ಮೇಲ್ಪಟ್ಟ ಯೋಜನೆಯಾಗಿದ್ದು, ಟೆಂಡರ್ ಕರೆದಿಲ್ಲ. ನನಗೆ ಇನ್ ಪ್ರಿನ್ಸಿಪಲ್ ಕೊಡುತ್ತೇವೆಂದು ಸರ್ಕಾರ ಉತ್ತರವನ್ನು ಕೊಟ್ಟಿದೆ, ಯಾರದ್ದಾದರೂ ಅಭ್ಯಂತರವಿದ್ದರೆ ಹಾಕಬಹುದೆಂದು ಜಿಂದಾಲ್‌ನವರು ಪತ್ರಿಕೆಯಲ್ಲಿ ಕೊಟ್ಟಿದ್ದಾರೆ. ಸೆಕ್ಷನ್ 18ಎ ಪ್ರಕಾರ ಪರವಾನಿಗೆಯನ್ನು ಕೊಟ್ಟರೆ ಅದು ಅಂತಿಮ, ಈ ಬಗ್ಗೆ ತನಿಖೆಯಾಗಬೇಕು. ಪತ್ರಿಕೆಯಲ್ಲಿ ನಾವೆಲ್ಲಾ ಓದಿರುವಂತೆ ದೇಹಲಿ ಬೇಸ್ಡ್ ಒಂದು ಮೀಟರ್ ತಯಾರಿಸುವ ಕಂಪನಿಗೆ ಆರ್ಡರ್ ಕೊಟ್ಟಾಗ, ಆತ ಕೆಪಿಟಿಸಿಎಲ್ ಒಬ್ಬ ಅಧಿಕಾರಿಗೆ ಚಿನ್ನದ ನಾಣ್ಯ ಕೊಡಲು ಬಂದನೆಂದು ಬಂದಿದೆ. ಆತನನ್ನು ಬ್ಲಾಕ್ ಲಿಸ್ಟ್‌ನಲ್ಲಿ ಹಾಕಿದ್ದು ಪುನಃ ವಾಪಸ್ ಪಡೆದು ಆತನಿಗೆ ಆರ್ಡರ್ ಕೊಡಲು ಪ್ರಯತ್ನಿಸಿದರೆಂಬುದು ಗೊತ್ತಿಲ್ಲ, ಈ ಬಗ್ಗೆ ಚಿನ್ನದ ನಾಣ್ಯಕ್ಕಿಂತ ತೂಕದ್ದು ಬೇರೆ ಏನಾದರೂ ಬಂದಿದೆಯಾ ಗೊತ್ತಿಲ್ಲ. ಈ ಎಲ್ಲದರ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದಿದ್ದೇನೆ, ಇದುವರೆವಿಗೂ ನನಗೆ ಒಂದಕ್ಕೂ ಉತ್ತರ ಬಂದಿಲ್ಲ. ಜಿಂದಾಲ್ ಟ್ರಾಕ್ಟೇಬಲ್ ಹತ್ತಿರ ಕ್ಯಾಪ್ಟೀವ್ ಪವರ್ ಅನ್ನು ಸರ್ಕಾರ ಖರೀದಿಸುತ್ತಿದೆ. ಕ್ರೈಸಿಲ್ ಎನ್ನುವ ಒಂದು ಏಜೆನ್ಸಿಯನ್ನು ಸರ್ಕಾರ ನೇಮಕ ಮಾಡಿ ಯಾವ ದರದಲ್ಲಿ ಖರೀದಿ ಮಾಡಬಹುದೆಂದು ಕೇಳಿದೆ. ಅವರ ವರದಿಯ ಪ್ರಕಾರ ಕೆಪಿಟಿಸಿಎಲ್ ಬೋರ್ಡ್‌ನ ನೋಟ್‌ನಲ್ಲಿ ಎರಡು ರೂಪಾಯಿ 9 ಪೈಸೆಯಲ್ಲಿ ಖರೀದಿ ಮಾಡಬಹುದೆಂದು ಕೊಟ್ಟಿದ್ದಾರೆ. ಹಿಂದಿನ ಸರ್ಕಾರದವರು ಎರಡು ರೂಪಾಯಿ 60 ಪೈಸೆಯಲ್ಲಿ ಖರೀದಿ ಮಾಡಿದ್ದಾರೆಂದು ಅವರೇ ನೇಮಕ ಮಾಡಿದ್ದ ಏಜೆನ್ಸಿಯವರು ಕೊಟ್ಟ ವರದಿಯನ್ನು ಬಿಟ್ಟು ಎರಡು ರೂಪಾಯಿ ಅರವತ್ತು ಪೈಸೆಗೆ ಖರೀದಿ

ಮಾಡುತ್ತಾರೆ. ಇದರಿಂದ 5 ವರ್ಷಕ್ಕೆ ಪ್ರತಿವರ್ಷಕ್ಕೆ ಶೇಕಡ 5 ರಷ್ಟು ಎಸ್ಕಲೈಷನ್ ಸೇರಿ ಮೊದಲನೆ ವರ್ಷಕ್ಕೆ 35 ಕೋಟಿ ರೂಪಾಯಿ ಜಾಸ್ತಿಯಾಗುತ್ತದೆ, ಒಟ್ಟು 5 ವರ್ಷಕ್ಕೆ 200 ಕೋಟಿ ರೂಪಾಯಿಗಳಷ್ಟು ಸರ್ಕಾರಕ್ಕೆ ನಷ್ಟವಾಗುತ್ತದೆ. ಈ ಹೊರೆ ಬಳಕೆದಾರನ ಮೇಲೆ ಬೀಳುತ್ತದೆ. ಇದನ್ನು ನಿಲ್ಲಿಸುವ ಪ್ರಯತ್ನವಾಗಬೇಕು. ಇದೆಲ್ಲದರ ಬಗ್ಗೆ ತನಿಖೆಯಾಗಬೇಕು. ಹಿಂದಿನ ಸರ್ಕಾರ ತೀರ್ಮಾನ ತೆಗೆದುಕೊಂಡಿದ್ದರ ಬಗ್ಗೆ ಪುನಃ ಲಿಟಿಗೇಷನ್ ಬೇಡವೆಂದು ಹೇಳುತ್ತಾರೆ. ಹೈಕೋರ್ಟ್‌ಗೆ ತಣ್ಣೀರ್‌ಬಾವಿಯವರು ಹೋಗಿ ಆದೇಶವನ್ನು ತರಲಿಲ್ಲವೆ? ಇದರಲ್ಲಿ ಲಿಟಿಗೇಷನ್ ಅಲ್ಲ, ಬೇರೆ ಕಾರಣವಿದೆ, ಅನುಮಾನಕ್ಕೆ ಅಸ್ಪದ ಕೊಡಬಾರದು.

ಇನ್ನು ಮಾಹಿತಿ ಹಾಗು ತಂತ್ರಜ್ಞಾನದಲ್ಲಿ ನಮ್ಮ ರಾಜ್ಯ ಪ್ರಥಮ ಸ್ಥಾನದಲ್ಲಿದೆ ಎಂದು ಹೇಳಲಾಗುತ್ತಿದೆ, ಆದರೆ ಅದರಲ್ಲೂ ಕೂಡ ನಮ್ಮ ರಾಜ್ಯ 4 ಅಥವಾ 5ನೇ ಸ್ಥಾನದಲ್ಲಿದೆ ಎಂದು ಪತ್ರಿಕೆಯಲ್ಲಿ ಬಂದಿರುವುದನ್ನು ಓದಿದ್ದೇವೆ, ಮಾಹಿತಿ ಹಾಗೂ ತಂತ್ರಜ್ಞಾನದಲ್ಲೂ ಕೂಡ ಡೌನ್‌ವರ್ಡ್ ಟ್ರೆಂಡ್ ಇದೆ. ಮೊದಲಿನಂತೆ ಅದು ಬಹಳಷ್ಟು ಆಕರ್ಷಕವಲ್ಲ. ಅಮೇರಿಕಾದಿಂದ ನಮ್ಮ ಐಟಿ ಇಂಜನಿಯರ್ಸ್ ಎಲ್ಲಾ ವಾಪಸ್ ಕಳುಹಿಸುತ್ತಿದ್ದಾರೆ, ಅದರ ಬಗ್ಗೆ ಗಮನಹರಿಸಬೇಕು. ಕೃಷಿಕರ ಬಗ್ಗೆ ಸ್ವಲ್ಪ ಸೌಲಭ್ಯ ಕೊಟ್ಟಿರುವುದನ್ನು ಸ್ವಾಗತ ಮಾಡುತ್ತೇನೆ, ಅದನ್ನು ಇನ್ನು ಹೆಚ್ಚು ಮಾಡಬೇಕೆಂದು ಹೇಳುತ್ತೇನೆ. ನಾನು ಸಕ್ಕರೆ ಕಾರ್ಖಾನೆಯ ಅಧ್ಯಕ್ಷನಾಗಿರುವುದರಿಂದ ಹೇಳುವುದೇನೆಂದರೆ, ಮಹಾರಾಷ್ಟ್ರದಲ್ಲಿರುವಂತೆ ಕಬ್ಬಿನ ಮೇಲಿನ ತೆರಿಗೆಯನ್ನು 60 ರೂಪಾಯಿಗಳಿಂದ 25 ರೂಪಾಯಿಗಳಿಗೆ ಇಳಿಸಬೇಕು. ಏಕೆಂದರೆ ಸಕ್ಕರೆ ಉತ್ಪಾದನೆ ಮಾಡುವುದು ಇವತ್ತು ಸೆಕೆಂಡರಿಯಾಗಿದೆ. ಕಬ್ಬು ಜಾಸ್ತಿ ಬೆಳೆದಾಗ ಮಾತ್ರ ಕೋಜನರೇಷನ್ ಅನ್ನು ಪ್ರಾರಂಭ ಮಾಡಿದರೆ ಸಕ್ಕರೆ ಕಾರ್ಖಾನೆಗಳು ಉಳಿದುಕೊಳ್ಳಲು ಸಾಧ್ಯವಾಗುತ್ತದೆ. ಸಕ್ಕರೆ ನಿರ್ದೇಶನಾಲಯವನ್ನು ಬೆಳಗಾಂಗೆ ವರ್ಗಾವಣೆ ಮಾಡಿದ ಬಗ್ಗೆ ಈ ಎಲ್ಲಾ ಶಾಸಕರ ಸಭೆಯನ್ನು ಕರೆದರೆ ಅವರು ತಮ್ಮ ಅಭಿಪ್ರಾಯವನ್ನು ಹೇಳಲು ಸಾಧ್ಯವಾಗುತ್ತದೆ. ರೈತರ ಹೊಲಗಳಿಗೆ ಹೋಗುವ ರಸ್ತೆಗಳಿಗೆ ಶೇಕಡ 40 ರಷ್ಟು ಸರ್ಕಾರ ಕೊಡುತ್ತದೆ, ರೈತರ ಶೇ. 60 ರಷ್ಟು ಭರಿಸಬೇಕಾಗಿದೆ, ಅವನಿಗೆ ಸಾಲವನ್ನೇ ಕಟ್ಟುವುದಕ್ಕೆ ಸಾಧ್ಯವಿಲ್ಲದಂತಾಗಿದೆ. ನಮ್ಮಲ್ಲಿ ಫ್ರಾಗ್ಮೆಂಟೆಡ್ ಲಾಡ್ಸ್ ಇವೆ, ಖಂಡಿತಾ ಸಾಧ್ಯವಾಗುವುದಿಲ್ಲ. ಆಯವ್ಯಯ ಪುಸ್ತಕ ಪುಟ 35 ರಲ್ಲಿ ನೋಡಿದರೆ ವಿಶ್ವಬ್ಯಾಂಕ್ ಯೋಜನೆ, ಹುಡ್ಕೋ ಯೋಜನೆ, ನಬಾರ್ಡ್ ಯೋಜನೆಗಳಿವೆ, ಈ ಸಾಲವನ್ನು ತೆಗೆದುಕೊಂಡು ನಾವು ಕೆಲಸಗಳನ್ನು ಮಾಡಿಸುತ್ತಿದ್ದೇವೆ, ರೆವಿನ್ಯೂ ಸಂಗ್ರಹಣೆಯಿಂದ ಯಾವುದೇ ಕೆಲಸವಾಗುತ್ತಿಲ್ಲ. ಮೂಲಭೂತ ಸೌಲಭ್ಯ ಒದಗಿಸುವಲ್ಲಿ ಇತರೆ ರೈಲ್ವೆ ಲೈನ್‌ಗಳಿಗೆ ಸಂಬಂಧಿಸಿದಂತೆ ಕೇಂದ್ರ ಯೋಜನೆಯೊಡನೆ ರಾಜ್ಯ ಸರ್ಕಾರ ಸೇರಿ ಮಾಡುವಂತಹದ್ದು ನಿಜವಾಗಿಯೂ ಸ್ವಾಗತಾರ್ಹವಾದುದು. ನನ್ನ ಅಭಿಪ್ರಾಯದಲ್ಲಿ ಹಾಸನ-ಮೈಸೂರು ರೈಲ್ವೆ ಮಾರ್ಗದ ಮುಂಚೆ ಹಾಸನ-ಮಂಗಳೂರು ರೈಲ್ವೆ ಮಾರ್ಗ ಮೊದಲು ಮಾಡಿದ್ದರೆ ಆ ಭಾಗದ ಅಭಿವೃದ್ಧಿ ಇನ್ನೂ ಜಾಸ್ತಿಯಾಗುತ್ತಿತ್ತು. ಯಾವ ಕಾರಣಕ್ಕಾಗಿ ಆ ರೀತಿಯಾಯಿತೋ ಗೊತ್ತಿಲ್ಲ, ಆದರೂ ಇದನ್ನು ಅತಿ ಶೀಘ್ರದಲ್ಲಿ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಸದರಿ ಯೋಜನೆಯನ್ನು ಹಿಂದಿನ ಸರ್ಕಾರವೇ ಹಮ್ಮಿಕೊಂಡಿತ್ತು, ಈಗಾಗಲೇ ವರ್ಕ್ ಆರ್ಡರ್ ಕೊಟ್ಟಾಗಿದೆ, ಅದು ಈ ಆಯವ್ಯಯದಲ್ಲಿ ಕಾಣಿಸುವ ಅಗತ್ಯವಿಲ್ಲ ಎಷ್ಟನ್

ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಸಾಲವನ್ನು ತೆಗೆದುಕೊಂಡು ಕರಾವಳಿ ಅಭಿವೃದ್ಧಿಯನ್ನು ಮಾಡುತ್ತೇವೆಂದು ಹೇಳಲಾಗಿದೆ. ಕಾರ್ಯಕ್ರಮವನ್ನು ಲಾಂಚ್ ಮಾಡಿ ಆಗಿದೆ, ಮುಖ್ಯಮಂತ್ರಿಗಳು ಸ್ವತಃ ಮಂಗಳೂರಿಗೆ ಹೋಗಿದ್ದಾರೆ. ಹೊಸ ತಾಲ್ಲೂಕುಗಳನ್ನು ಮಾಡುವ ಬಗ್ಗೆ ಹೇಳುವುದಾದರೆ ಒಂದು ಕ್ಷೇತ್ರಕ್ಕೆ ಒಂದು ತಾಲ್ಲೂಕು ಇದ್ದರೆ ತುಂಬಾ ಒಳ್ಳೆಯದು, ಒಬ್ಬ ತಹಸೀಲ್ದಾರ್‌ಗೆ ಒಂದು ತಾಲ್ಲೂಕು ಮ್ಯಾನೇಜ್ ಮಾಡುವುದು ಕಷ್ಟವಲ್ಲ, ಒಂದು ತಾಲ್ಲೂಕಿನಲ್ಲಿರುವ ಮೂರ್‍ನಾಲ್ಕು ಶಾಸಕರನ್ನು ಮ್ಯಾನೇಜ್ ಮಾಡುವುದು ಕಷ್ಟವಾಗುತ್ತದೆ, ಇದರಿಂದ ಅಭಿವೃದ್ಧಿಗೆ ಕೊಡುವ ಹಣ ಕಡಿಮೆಯಾಗುತ್ತದೆ. ಶಾಸಕರ ಪ್ರದೇಶಾಭಿವೃದ್ಧಿ ನಿಧಿ ಮಾಡಿ ಪ್ರತಿ ಕ್ಷೇತ್ರಕ್ಕೆ 25 ಲಕ್ಷ ರೂ. ಕೊಡುವುದೆಂದು ನಿಗದಿ ಮಾಡಲಾಗಿದೆ. ಆದರೆ ವಿತ್ತೀಯ ಕೊರತೆಯನ್ನು ಯಶಸ್ವಿಯಾಗಿ ತಗ್ಗಿಸಿದರೆ ಮಾತ್ರ ಈ ಮೊತ್ತವನ್ನು ಹಂಚಿಕೆ ಮಾಡಲು ಸಾಧ್ಯ ಎಂದು ಹೇಳಲಾಗಿದೆ, ಅದನ್ನು ಯಾರು ಮಾಡಬೇಕು ಸ್ವಾಮಿ? ವಿರೋಧ ಪಕ್ಷದಲ್ಲಿ ಕುಳಿತು ನಾವು ಮಾಡಲು ಸಾಧ್ಯವೆ? ಆಡಳಿತ ಸುಧಾರಣೆಯಲ್ಲಿ, ಸಚಿವಾಲಯದ್ದನ್ನು ಮುಖ್ಯವಾಗಿ ತೆಗೆದುಕೊಳ್ಳಬೇಕಾಗಿತ್ತು, ಡಿವಿಷನಲ್ ಕಮೀಷನರ್ ಆದಮೇಲೆ ಲೆವೆಲ್ ಜಂಪಿಂಗ್ ಆಗಬೇಕಾಗಿತ್ತು, ಇಲ್ಲದಿದ್ದರೆ, ನಿರ್ವಾಹಕನಿಂದ ಕಾರ್ಯದರ್ಶಿಯವರೆಗೆ ಆ ಕಡತ ಸುಮಾರು ಆರು ಜನರ ಹತ್ತಿರ ಹೋಗಬೇಕಾಗುತ್ತದೆ.

2.00 ಪಿ.ಎಂ.

ಒಬ್ಬ ಡಿವಿಷನಲ್ ಕಮೀಷನರ್‌ರಿಂದ ಬಂದಂಥ ಫೈಲಿಗೆ ಒಬ್ಬ ಕೇಸ್ ವರ್ಕರ್ ಅದನ್ನು ಓದಿ ಅಬ್ಜಕ್ಷನ್ ಹಾಕುವಂಥಾದ್ದು ನೋವಿನ ಸಂಗತಿ. ಫೈಲನ್ನು ಮೊದಲು ಸೆಕ್ರೆಟರಿಯವರು ನೋಡಬೇಕಾಗುತ್ತದೆ ಎಂದು ನಾನು ಹೇಳುತ್ತೇನೆ. ಅವರ ನೋಟನ್ನು ಕೆಳಗಿನವರಿಗೆ ಹೋಗಲು ಬಿಡಬಾರದು. ಒಬ್ಬ ಡಿವಿಷನಲ್ ಕಮೀಷನರ್ ಅಥವಾ ಡೆಪ್ಯುಟಿ ಕಮೀಷನರ್‌ರವರಿಂದ ಬಂದ ಫೈಲನ್ನು ಒಬ್ಬ ಕೇಸ್ ವರ್ಕರ್ ನೋಡುವುದನ್ನು ಅಥವಾ ಡೆಪ್ಯುಟಿ ಕಮೀಷನರ್‌ರವರಿಂದ ಬಂದ ಫೈಲನ್ನು ಒಬ್ಬ ಕೇಸ್ ವರ್ಕರ್ ನೋಡುವುದನ್ನು ನಿಲ್ಲಿಸಬೇಕಾಗುತ್ತದೆ. ಇದು ಇವತ್ತಿನಿಂದ ನಡೆದುಕೊಂಡು ಬಂದದ್ದಲ್ಲ. ಇನ್ನು ವಾಹನಗಳ ಖರೀದಿ ನಿಲ್ಲಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ಬಹಳ ಒಳ್ಳೆಯದು. ಇನ್ನು ಕಡತ ವಿಲೇವಾರಿ ಬಗ್ಗೆ ಹೇಳುವುದಾದರೆ, 15 ದಿವಸ ಅಥವಾ ಒಂದು ತಿಂಗಳಿಗಿಂತ ಜಾಸ್ತಿ ಕಾಲ ಕಡತ ಒಂದು ಕಡೆ ಕುಳಿತಾಗ "ಡೀಮ್ಡ್ ಅಪ್ರೂವಲ್" ಎಂದು ತೆಗೆದುಕೊಳ್ಳಬೇಕಾಗುತ್ತದೆ ಎಂದು ಮಾತನಾಡುವಾಗ ಹೇಳಿದರು. ಆಗ ಇವರು ವರ್ಷಗಟ್ಟಲೆ ಕಡತವನ್ನು ಇಟ್ಟುಕೊಂಡು ಕುಳಿತುಕೊಳ್ಳಲು ಸಾಧ್ಯವಾಗುವುದಿಲ್ಲ. ಯಾವ ಯಾವ ಮಂತ್ರಿಗಳ ಕಛೇರಿಯಲ್ಲಿ ಅಥವಾ ಯಾವ ಯಾವ ಸೆಕ್ರೆಟರಿಗಳ ಕಛೇರಿಯಲ್ಲಿ ಎಷ್ಟು ಕಡತ ಕುಳಿತಿದೆ, ಯಾವ ತಿಂಗಳಿಂದ ಕುಳಿತಿದೆ ಎನ್ನುವುದನ್ನು ನೋಡಬೇಕಾಗುತ್ತದೆ. ಅವುಗಳನ್ನೂ ಸಹ "ಡೀಮ್ಡ್ ಅಪ್ರೂವಲ್" ಎಂದು ತೆಗೆದುಕೊಂಡಾಗ ಮಾತ್ರ ಇವರು ಬೇಗ ಬೇಗ ಕಡತಗಳನ್ನು ವಿಲೇವಾರಿ ಮಾಡಲು ಮನಸ್ಸು ಮಾಡುತ್ತಾರೆ, ಇಲ್ಲದಿದ್ದರೆ ಮಾಡುವುದಿಲ್ಲ ಎಂದು ಹೇಳಲು ಇಚ್ಛಿಸುತ್ತೇನೆ. ಇನ್ನು ಪ್ರಾದೇಶಿಕ ಅಭಿವೃದ್ಧಿಯ ಬಗ್ಗೆ ಹೇಳುವುದಾದರೆ, ಯಾವ ಯಾವ ಪ್ರದೇಶಕ್ಕೆ ಎಷ್ಟೆಷ್ಟು ಹಣ ಹಂಚಿಕೆಯಾಗಿದೆ ಎಂದು ನೋಡಬೇಕು. ಏಕೆಂದರೆ ಉತ್ತರ

ಕರ್ನಾಟಕದಲ್ಲಿ ಅಭಿವೃದ್ಧಿ ಆಗಿಲ್ಲ ಎಂದು ಬಹಳ ಕೂಗು ಕೇಳಿಬರುತ್ತಿದೆ. ಹಾಗೇನೂ ಇಲ್ಲವೆಂದು ನನಗನ್ನಿಸುತ್ತದೆ. ಅಲ್ಲಿಗೆ ಕೊಡುವಂಥ ಅಲೋಕೇಷನ್ ಏನಾದರೂ ಕಡಿಮೆಯಾಗಿದೆಯೇ ಎಂದು ನೋಡಬೇಕಾಗುತ್ತದೆ. ಮುಖ್ಯಮಂತ್ರಿಗಳಾಗಿದ್ದಂಥ ಅನೇಕರು ಆ ಭಾಗದಿಂದ ಬಂದವರಾಗಿದ್ದಾರೆ. ದೊಡ್ಡ ದೊಡ್ಡ ಮಂತ್ರಿಗಳು ಇವತ್ತೂ ಇದ್ದಾರೆ, ಹಿಂದೆಯೂ ಇದ್ದರು. ಏಕೆ ಅಲ್ಲಿ ಅಭಿವೃದ್ಧಿಯಾಗಲಿಲ್ಲ? ಇವರು ಅಲ್ಲಿಗೆ ಸರ್ಕಾರದಿಂದ ತೆಗೆದುಕೊಂಡು ಹೋದ ಹಣ ಕಡಿಮೆಯೇ ಅಥವಾ ತೆಗೆದುಕೊಂಡುಹೋದ ಹಣ ಖರ್ಚಾದದ್ದು ಕಡಿಮೆಯೇ ಎನ್ನುವುದರ ಬಗ್ಗೆ ತನಿಖೆಯಾಗಬೇಕಾಗುತ್ತದೆ. ಏಕೆಂದರೆ, ಪ್ರತಿಯೊಂದು ಬಾರಿಯೂ ಉತ್ತರ ಕರ್ನಾಟಕವನ್ನು ನಿರ್ಲಕ್ಷಿಸಿದ್ದಾರೆ ಎನ್ನುವ ಮಾತು ಕೇಳಿಬರುತ್ತಿದೆ. ಅದು ಏಕೆ ಆ ರೀತಿಯಾಯಿತು ಎನ್ನುವ ಬಗ್ಗೆ ವಿಮರ್ಶೆಯನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನು ಕೃಷಿ ವಲಯದ ಬಗ್ಗೆ ಹೇಳಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ, ಶೇ. 2 ರಷ್ಟನ್ನು ಸಹಕಾರಿ ಸಂಘಗಳ ಮೇಲೆ ವರ್ಗಾಯಿಸಲು ಸಾಧ್ಯವಾಗುವುದಿಲ್ಲ. ನಾನು ಸಹಕಾರ ಸಂಘದ ಅಧ್ಯಕ್ಷರೊಬ್ಬರ ಜೊತೆ ಚರ್ಚೆಯನ್ನು ಮಾಡಿದೆ. ಹಿಂದೆ ಅವರಿಗೆ ಶೇ. 65 ಸಿಗುತ್ತಿದ್ದುದು, ನಾಬಾರ್ಡ್‌ನವರು ಒಂದೂವರೆ ಶೇಕಡದಷ್ಟು ಜಾಸ್ತಿ ಮಾಡಿದ್ದರಿಂದ ಈಗ ಅವರಿಗೆ ಕೇವಲ ಶೇ. 4 ರಷ್ಟು ಸಿಗುವಂಥಾದ್ದಾಗಿಗೆ. ಆದ್ದರಿಂದ ಸರ್ಕಾರದವರು ಹೇಳಿರುವಂತೆ ಶೇ. 2 ರಷ್ಟನ್ನು ವರ್ಗಾವಣೆ ಮಾಡುತ್ತೇವೆ ಎನ್ನುವುದು ನೂರಕ್ಕೆ ನೂರರಷ್ಟು ಸರಿಯಲ್ಲ. ಸರ್ಕಾರ 100-120 ಕೋಟಿ ರೂಪಾಯಿಗಳ ಬಜೆಟರಿ ಪ್ರಾವಿಷನ್ ಮಾಡಿದಾಗ ಮಾತ್ರ ಇದನ್ನು ಮಾಡಲು ಸಾಧ್ಯವಿದೆ. ಈ ಕಾರ್ಯಕ್ರಮದಿಂದ ಸರ್ಕಾರಕ್ಕೆ ಬಹಳಷ್ಟು ಕೆಟ್ಟ ಹೆಸರು ಬರಲು ಸಾಧ್ಯವಿದೆ. ಏಕೆಂದರೆ, ಸಾಧ್ಯವಿಲ್ಲದೇ ಇದ್ದುದನ್ನು ಮಾಡಿದ್ದಾರೆ. ಇದನ್ನು ಸ್ವಲ್ಪ ಬದಲಾವಣೆ ಮಾಡಬೇಕು ಎಂದು ಹೇಳುತ್ತೇನೆ. ಇನ್ನು, ನೋಂದಣಿ ಮತ್ತು ಮುದ್ರಾಂಕದ ಬಗ್ಗೆ ಹೇಳುವುದಾದರೆ, ಹಿಂದೆ ನಮ್ಮ ಸರ್ಕಾರ ಮಾಡಿದ್ದನ್ನು ತೆಗೆದಿದ್ದರು, ಈಗ ಅದನ್ನು ಪುನಃ ತಂದಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಮೊದಲು ಏಕೆ ತೆಗೆದರು ಎನ್ನುವುದು ಗೊತ್ತಿಲ್ಲ, ಈಗ ಪುನಃ ತಂದಿದ್ದಾರೆ. ಬಿಸ್ಕತ್ತು, ಐಸ್‌ಕ್ರೀಂಗಳ ಮೇಲೆ ಕರವನ್ನು ಹಾಕಿದ್ದಾರೆ. ಇದರಿಂದ ಐಸ್‌ಕ್ರೀ ಕೋಲ್ಡ್ ಆಗುವ ಬದಲು ಹಾಟ್ ಆಗುತ್ತಿದೆ. ಮಕ್ಕಳು ತಿನ್ನುವಂಥ ಬಿಸ್ಕತ್ತು, ಐಸ್‌ಕ್ರೀಂ ಇವುಗಳ ಮೇಲೆ ಹಾಕಿರುವ ಕರದ ಬಗ್ಗೆ ದಯವಿಟ್ಟು ಸ್ವಲ್ಪ ವಿಮರ್ಶೆ ಮಾಡಬೇಕಾಗುತ್ತದೆ. ಏಕೆಂದರೆ ಎಲ್ಲರ ಮನೆಯಲ್ಲೂ ಮಕ್ಕಳು, ಮೊಮ್ಮಕ್ಕಳು ಇರುತ್ತಾರೆ. ಇನ್ನು ಡಿಫಿಸಿಟ್ ಅನ್ನು ಯಾವ ರೀತಿ ಭರ್ತಿ ಮಾಡಿಕೊಳ್ಳಬೇಕು ಎನ್ನುವ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ಹೆಚ್ಚು ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕಿಂತ, ಕಾರ್ಯಕ್ರಮಗಳನ್ನು ಕಡಿಮೆ ಮಾಡಿ ಅವುಗಳನ್ನು ಒಳ್ಳೆಯ ರೀತಿಯಲ್ಲಿ ಇಂಪ್ಲಿಮೆಂಟ್ ಮಾಡಲು ಪ್ರಯತ್ನವನ್ನು ಮಾಡಬೇಕು ಎಂದು ಹೇಳುತ್ತೇನೆ. ಅಮೆರಿಕನ್ ಪ್ರೆಸಿಡೆಂಟ್ ಒಬ್ಬರು ಅಧಿಕಾರವನ್ನು ಇನ್ನೊಬ್ಬರಿಗೆ ಬಿಟ್ಟು ಕೊಡುವಾಗ ಹೊಸ ಅಧ್ಯಕ್ಷರಿಗೆ ಎರಡು ಕವರ್‌ಗಳನ್ನು ಕೊಟ್ಟು, ನೀವು ಸಮಸ್ಯೆಗೆ ಬಿದ್ದಾಗ ಮೊದಲ ಕವರ್ ಅನ್ನು ಓಪನ್ ಮಾಡಿ ನೋಡಿ ಎಂದು ಹೇಳಿದರಂತೆ. ಅದರಂತೆ ಹೊಸ ಅಧ್ಯಕ್ಷರು ಸಮಸ್ಯೆಗೆ ಬಿದ್ದಾಗ ಮೊದಲನೇ ಕವರ್ ಅನ್ನು ಓಪನ್ ಮಾಡಿದಾಗ ಅದರಲ್ಲಿ 'ಏನೇ ಸಮಸ್ಯೆ ಬಂದರೂ ಅದನ್ನು ಹಿಂದಿನ ಸರ್ಕಾರದ ಮೇಲೆ ಹಾಕಿಬಿಡು' ಎಂದು ಇತ್ತಂತೆ. ನೀವು ಆ ರೀತಿ ಮಾಡುವ

ಕಾಲ ಹೋಯಿತು. ನೀವು ಬಂದು ಈಗ ಸುಮಾರು ಎರಡು ವರ್ಷಗಳಾಯಿತು. ಹಿಂದಿನ ಸರ್ಕಾರದ ಮೇಲೆ ಹಾಕಲು ಆಗುವುದಿಲ್ಲ. ನಂತರ, ಪುನಃ ಅವರು ಸಮಸ್ಯೆಗೆ ಬಿದ್ದಾಗ, ಎರಡನೇ ಕವರ್ ಅನ್ನು ಓಪನ್ ಮಾಡಿದಾಗ ಅದರಲ್ಲಿ 'ವಿರೋಧ ಪಕ್ಷದವರು ಬಿಡುವುದಿಲ್ಲ ಎಂದು ಹೇಳಿ' ಎಂದು ಇತ್ತಂತೆ. ಆದರೆ ಇಲ್ಲಿ ಆ ರೀತಿ ಆಗಲೂ ಸಾಧ್ಯವಿಲ್ಲ. ಏಕೆಂದರೆ ಆಡಳಿತ ಪಕ್ಷದ್ದೇ ಮೆಜಾರಿಟಿ ಇದೆ. ಸಿಂಧ್ಯಾರವರು ಹೇಳಿದಂತೆ, ಇವರು ಎಲ್ಲದಕ್ಕೂ ಸರ್ವಪಕ್ಷಗಳ ಸಭೆಯನ್ನು ಕರೆಯುವುದು, ನಂತರ ತಾವು ಏನು ಮಾಡಬೇಕೋ ಅದನ್ನು ಮಾಡಿಯೇ ಮಾಡುತ್ತಾರೆ. ಮುಖ್ಯಮಂತ್ರಿಗಳು ಅಮೇರಿಕಾದಲ್ಲಿ ಓದಿ ಬಂದಿರುವುದರಿಂದ ಅವರು ಇದನ್ನೆಲ್ಲಾ ಅಲ್ಲಿ ಕಲಿತಿರಬೇಕು. ಬಹುಶಃ ಅವರು ಎಕಾನಮಿಸ್ಟ್ ಹತ್ತಿರ ಹೆಚ್ಚು ಚರ್ಚೆ ಮಾಡುತ್ತಾರೆಂದು ಕಾಣುತ್ತದೆ. An economist thinks that the poor need to be told that they are poor. When an economist is an expert he will know tomorrow why the things he predicted yesterday did not happen to-day ಇಂಥವರು ಬಡವರು ಎಂದು ಹೇಳಲೂ ಎಕಾನಮಿಸ್ಟ್ ಬೇಕು. ಆದರೆ ಪ್ರತಿಯೊಂದು ಸಲ ಆಲೋಚನೆ ಮಾಡುವಂಥಾದ್ದು ಆಗಬೇಕು. ಎಕಾನಮಿಸ್ಟ್‌ಗಳ ಹತ್ತಿರ ಚರ್ಚೆ ಮಾಡಲಿ, ಬೇಡ ಎಂದು ನಾವು ಹೇಳುವುದಿಲ್ಲ. ಅದೂ ಸ್ವಲ್ಪ ಬೇಕಾಗುತ್ತದೆ. ಆದರೆ ರೈತರ ಹತ್ತಿರ ಮತ್ತು ಸಫರ್ ಆಗುತ್ತಿರುವ ಸ್ಮಾಲ್ ಸ್ಕೇಲ್ ಇಂಡಸ್ಟ್ರಿಗಳವರೊಂದಿಗೆ ಚರ್ಚೆಯನ್ನು ಮಾಡಿ ಈ ಸಮಸ್ಯೆಯನ್ನು ಪರಿಹಾರ ಮಾಡಲು ಪ್ರಯತ್ನ ಮಾಡಬೇಕು ಎಂದು ಹೇಳಿ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಈ ಆಯವ್ಯಯದಲ್ಲಿ ಕೆಲವು ಸ್ವಾಗತಾರ್ಹವಾದ ಅಂಶಗಳಿದ್ದರೂ, ಹೆಚ್ಚಿನ ಅಂಶಗಳು ಸಮಸ್ಯೆಗಳನ್ನು ಉದ್ಭವ ಮಾಡುವಂಥಾದ್ದೇ ಇರುವುದರಿಂದ ಇದನ್ನು ವಿರೋಧ ಮಾಡುತ್ತಾ, ಇದರ ಮೇಲೆ ಚರ್ಚೆ ಮಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್: ಈಗ ಸಭೆಯನ್ನು ಮುಂದೂಡಲಾಗಿದ್ದು, ಪುನಃ 3.00 ಗಂಟೆಗೆ ಸಭೆ ಸಮಾವೇಶಗೊಳ್ಳುವುದು.

(ಸದನವು ಮಧ್ಯಾಹ್ನ 2.06ಕ್ಕೆ ಮುಕ್ತಾಯಗೊಂಡು ಪುನಃ 3.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

(ಸದನವು ಮಧ್ಯಾಹ್ನ 3.20 ಗಂಟೆಗೆ ಪ್ರಾರಂಭವಾಯಿತು ಮತ್ತು ಸಭಾಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪನವರು) ಪೀಠವನ್ನಲಂಕರಿಸಿದ್ದರು)

ಅಧ್ಯಕ್ಷರು: ಸಭೆಯನ್ನು ಪ್ರಾರಂಭಿಸುವ ಮೊದಲು ಹೇಳುವುದೇನೆಂದರೆ, ಈಗ ಸಮಯ 3.20, ನಾವು ರಾತ್ರಿ 9 ರವರೆಗೂ ಕುಳಿತುಕೊಳ್ಳೋಣ. ಯಾರ್ಯಾರು ಮಾತನಾಡಬೇಕೆಂಬ ಬಗ್ಗೆ ತಮ್ಮ ತಮ್ಮ ಪಕ್ಷದವರೇ ಹಂಚಿಕೊಳ್ಳಿ. ಸಮಯ ಬಹಳ ಕಡಿಮೆ ಇರುವುದರಿಂದ, ನಾನು ತಮ್ಮಲ್ಲಿ ವಿನಂತಿಸುತ್ತೇನೆ.

+ ಶ್ರೀ ಆರಗಜ್ಞಾನೇಂದ್ರ (ತೀರ್ಥಹಳ್ಳಿ): ಹೊಸ ಸರ್ಕಾರ ಅಧಿಕಾರ ವಹಿಸಿಕೊಂಡ ಎರಡನೇ ವರ್ಷದಲ್ಲಿ ಇದು ಈ ಸರ್ಕಾರ ಮಂಡಿಸಿರುವ ಎರಡನೆಯ ಆಯವ್ಯಯವಾಗಿದೆ.

ನಾವು ಹಾಗೂ ರಾಜ್ಯದ ಜನರು ಇದರ ಬಗ್ಗೆ ಬಹಳ ದೊಡ್ಡ ನಿರೀಕ್ಷೆ ಇಟ್ಟುಕೊಂಡಿದ್ದೆವು. ಏಕೆಂದರೆ, ನಮ್ಮ ಮುಖ್ಯಮಂತ್ರಿಗಳು ಬಹಳ ಅನುಭವಶಾಲಿಗಳು, ಖಾತೆಯ ಬೇರೆ ಬೇರೆ ಮಜಲುಗಳನ್ನು ಕಂಡಿರುವವರು, ಬೇರೆ ಬೇರೆ ಅಧಿಕಾರಸ್ಥಾನ ಹಿಡಿದು, ರಾಜ್ಯ, ರಾಷ್ಟ್ರದ ಅನೇಕ ಸಂಗತಿಗಳಲ್ಲಿ ಅನುಭವವಿರುವವರು. ಅವರ ಕೈಯಗೆ ಈ ಸರ್ಕಾರದ ಅಧಿಕಾರ ಸಿಕ್ಕಿದ್ದು, ಆರ್ಥಿಕ ಇಲಾಖೆಯೂ ಅವರ ಕೈಯಲ್ಲಿದೆ. ಅವರ ಜೊತೆ ಸಹಕಾರಿಗಳಾದ ದಿಗ್ಗಜರು, ಹುಟ್ಟು ಹೋರಾಟಗಾರರಾದ ಕಾಗೋಡು ತಿಮ್ಮಪ್ಪನವರು, ಬಹು ಜನ ದ್ರೋಣಾಚಾರ್ಯ, ಭೀಷ್ಮಾಚಾರ್ಯರುಗಳಂತ, ಮುತ್ಸದ್ಧಿಗಳು, ಹಾಗೂ ಹಿರಿಯರಿರುವುದರಿಂದ, ಎಲ್ಲರೂ ಇದ್ದಾಗ, ಅವರೆಲ್ಲರ ಒಟ್ಟಾರೆ ಅನುಭವದ ಮೂಸೆಯಿಂದ ಬರುವ ಬಡ್ಜೆಟ್ ಭಾಷಣ, ಬಡ್ಜೆಟ್ ಮಂಡನೆ ಈ ರಾಜ್ಯದ ಅಭ್ಯುದಯದ ದೃಷ್ಟಿಯಿಂದ ಬಹಳ ಒಳ್ಳೆಯದಾಗಿರುತ್ತದೆಂಬ ದೊಡ್ಡ ನಿರೀಕ್ಷೆ ಇತ್ತು. ಬಡ್ಜೆಟ್ ಮಂಡನೆ ನಂತರ, ಆ ನಿರೀಕ್ಷೆ ಹುಸಿಯಾಗಿದೆ. ನಾನು ಅತ್ಯಂತ ದುಃಖದಿಂದ ಇದನ್ನು ವಿರೋಧಿಸಬೇಕಾಗಿದೆ. ಬಡ್ಜೆಟ್ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಕಾರಣ, ಇವತ್ತು ನಾವೆಲ್ಲಾ ರಾಜಕೀಯ ಪಕ್ಷ, ಪಂಗಡದಲ್ಲಿದ್ದೇವೆ. ವಿರೋಧಿಸುವುದೆಂದರೆ, ನಾವೊಂದು ವಿರೋಧ ಪಕ್ಷವಾಗಿ ವಿರೋಧಿಸುವುದು ಸಂಪ್ರದಾಯವಾಗುವುದಿಲ್ಲ. ಈ ರಾಜ್ಯದ ಹಿತದೃಷ್ಟಿಯಿಂದ ಏನಾಗಬೇಕು, ಯಾವ ದಿಕ್ಕಿನಲ್ಲಿ ಹೋಗಬೇಕು, ಅದಕ್ಕೆ ತದ್ವಿರುದ್ಧವಾದ ದಿಕ್ಕಿನಲ್ಲಿ ಹೋದಾಗ, ಅದನ್ನು ನಾವು ಎತ್ತಿ ತೋರಿಸುವ ಅವಶ್ಯಕತೆ ಇದ್ದು, ಆ ನಿಟ್ಟಿನಲ್ಲಿ ವಿಶೇಷವಾಗಿ ನಾನು ಪ್ರಸ್ತಾಪಿಸುತ್ತಿದ್ದೇನೆ. ನಬಾರ್ಡ್, ವಿಶ್ವಬ್ಯಾಂಕ್, ಹುಡ್ಕೋ ಈ ಸಂಸ್ಥೆಗಳಿಲ್ಲದಿದ್ದರೆ, ಆಗುವುದಿಲ್ಲವೇ? "ಸಾಲ ಮಾಡಿ ತುಪ್ಪ ತಿನ್ನುವ" ಸಿದ್ಧಾಂತವೇನಿದೆ ಅದನ್ನು ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆಯೇ? ಒಟ್ಟಾರೆ ಇದನ್ನು ಓದುವಾಗ ನನಗೆ ಹಾಗೆಯೇ ಅನ್ನಿಸುತ್ತದೆ. ನಬಾರ್ಡ್‌ನಿಂದ, ವಿಶ್ವಬ್ಯಾಂಕ್‌ನಿಂದ ಹಾಗೂ ಹುಡ್ಕೋದಿಂದ ಎಷ್ಟು ಸಾವಿರ ಕೋಟಿ ರೂಪಾಯಿಗಳ ಸಾಲ ತರುತ್ತಾರೆ? ಎಲ್ಲಾ ಯೋಜನೆಗಳಿಗೂ ಹೀಗೆಯೇ? ಹಾಗಾದರೆ, ನಮ್ಮ ಬಂಡವಾಳ ನಮ್ಮ ಸಂಪನ್ಮೂಲಗಳ ಕ್ರೋಢೀಕರಣ ಮತ್ತು ಅದರ ವಿನಿಯೋಗ ಹೇಗೆ? ಈಗಾಗಲೇ ಮಾಡಿರುವ ಸಾಲದ ಹೊರೆಯೇ ಸಾಕಷ್ಟು ದೊಡ್ಡದಿದೆ. 3 ಸಾವಿರದ 40.65 ಕೋಟಿ ರೂಪಾಯಿಗಳ ಸಾಲವಿದೆ. ಸರ್ಕಾರ ಗ್ಯಾರಂಟಿ ಕೊಟ್ಟಿದ್ದು ಇಂದು 1,599 ಕೋಟಿ ರೂಪಾಯಿಗಳು. ಆ ಗ್ಯಾರಂಟಿಗೆ ಬೇರೆ ಬೇರೆ ಸಂಸ್ಥೆಗಳು ಡಿಫಾಲ್ಟರ್ ಆಗಿದ್ದು, ನಮ್ಮ ಸರ್ಕಾರವೇ ಕೊಟ್ಟಿದ್ದು 43.55 ಕೋಟಿ, 2 ಸಾವಿರದ 39 ಕೋಟಿ ರೂಪಾಯಿಗಳ ಬಡ್ಡಿ, ಈ ರೀತಿಯಾಗುತ್ತಿದೆ. ಈ ಸಾರಿ 12 ಸಾವಿರ ಕೋಟಿಗಳನ್ನು ವರ್ಲ್ಡ್ ಬ್ಯಾಂಕ್‌ನಿಂದ ಸಾಲ ತೆಗೆದುಕೊಳ್ಳುತ್ತೇವೆಂಬುದನ್ನು ಉಲ್ಲೇಖಿಸಿದ್ದೀರಿ. 14 ಪೈಸೆ ಸಾಲ ತೀರಿಸುವುದಕ್ಕೆ, 60 ಪೈಸೆ ಸಂಬಳಕ್ಕೆ, ಒಟ್ಟು 74 ಪೈಸೆಯಾಗುತ್ತದೆ. ಇನ್ನೂ 12 ಸಾವಿರ ಕೋಟಿ ರೂಪಾಯಿಗಳ ಸಾಲ ತಂದರೆ, ಹುಡ್ಕೋದಿಂದಲೂ ಸಾಲ ತಂದರೆ ನಬಾರ್ಡ್‌ನಿಂದ ಸಾಲ ತಂದಾಗ, ಅದರ ಬಡ್ಡಿಯನ್ನು ಹೇಗೆ ತೀರಿಸುವುದು? ಅದು ಎಷ್ಟು ಪೈಸೆಯಾಗುತ್ತದೆ? ಮುಂದಿನ ಸರ್ಕಾರಕ್ಕೆ ಬೇರೇನೂ ಕೆಲಸವಿಲ್ಲ. ಸಂಗ್ರಹಿಸುವುದು, ಸಾಲ ಕೊಟ್ಟುಕೊಂಡು ಕೈಕಟ್ಟಿ ಕೂರುವದಷ್ಟೇ. ಈ ರೀತಿಯ ಯೋಜನೆಯನ್ನು ಮಾಡಿದರೆ ಭವಿಷ್ಯದಲ್ಲಿ ನಮ್ಮ ಜನಾಂಗವನ್ನು ಸಾಲಕ್ಕೆ, ಬಡ್ಡಿಗೆ ತಳ್ಳುವ ಕೆಲಸ ಇದಾಗುತ್ತದೆ. ಅದಕ್ಕಾಗಿ, ಈ ಸಾಲ ಮಾಡಿ ತುಪ್ಪ ತಿನ್ನಿ ಎನ್ನುವ ಕೆಲಸ ಬಿಟ್ಟು,

ನೈಜ ಬಡ್ಜೆಟ್ ಮಂಡಿಸುತ್ತಾರೆಂದು ಭಾವಿಸಿದ್ದೆವು. ಆದಾಗಲಿಲ್ಲ. ಕಳೆದ ವರ್ಷದ ಬಡ್ಜೆಟ್ ಮಂಡನೆಯಲ್ಲಿ ಈಗೇನು ಹೇಳಿದ್ದೀರಿ, ಅದನ್ನು ಮತ್ತೆ ತೋರಿಸಬೇಕಾಗುತ್ತದೆ. ಹಣಕಾಸಿನ ಕೊರತೆ ಇಲ್ಲ. ಅನೇಕ ವಿಚಾರಗಳನ್ನು ವಿಶ್ವೇಶ್ವರ ಹೆಗಡೆಯವರು ನಿನ್ನೆ ಉಲ್ಲೇಖಿಸಿದ್ದು, ಅವರು ಹೇಳಿದ್ದು ಬಿಟ್ಟು ಬೇರೆ ವಿಚಾರಗಳನ್ನು ತಿಳಿಸುತ್ತೇನೆ. ಈ ವರ್ಷದ ಅಂತ್ಯದೊಳಗೆ ಎರಡು ಲಕ್ಷ ಹೆಕ್ಟೇರ್ ಹೆಚ್ಚುವರಿ ಪ್ರದೇಶವನ್ನು ನೀರಾವರಿಗೆ ಒಳಪಡಿಸುತ್ತೇವೆಂದು ಹೇಳಿದ್ದರು. ಮೊನ್ನೆ ತಾನೇ ಅನುಪಾಲನಾ ವರದಿಯಲ್ಲಿ, ಮಾರ್ಚ್ ಕೊನೆಗೆ 1.2 ಲಕ್ಷ ಹೆಕ್ಟೇರ್ ಪ್ರದೇಶ ನೀರಾವರಿಗೆ ಒಳಪಡಲಿದೆ ಎಂದು ಹೇಳಲಾಗಿದೆ. ಜಿ.ಓ. ಮಾಡಲು ಒಂದು ವರ್ಷ ತೆಗೆದುಕೊಳ್ಳುತ್ತದೆ. ಉದಾಹರಣೆಗೆ ಕರ್ನಾಟಕ ಶ್ರಮಜೀವಿಗಳ ಮಸೂದೆ ತರುತ್ತೇವೆಂದು ಹೇಳಿದರು. ಅದರ ಕರಡು ತಯಾರಿದೆ ಎಂದರು. ಒಂದೊಂದು ವರ್ಷ ಸಣ್ಣಪುಟ್ಟ ಕೆಲಸಗಳಾಗಲು ಸಮಯಬೇಕೆ? ಒಂದು ಕಾರ್ಯಕ್ರಮವನ್ನು ಜಾರಿಗೆ ತರಲು 7-8 ತಿಂಗಳು ಸಮಯ ಬೇಕೇ? ನಮ್ಮ ಮುಖ್ಯಮಂತ್ರಿಗಳು ಬೇರೆ ಬೇರೆ ಹೈ-ಟೆಕ್, ಚುರುಕು, ಅದನ್ನು ಜಾರಿಗೆ ತರಲು ಬಹಳ ದೊಡ್ಡ ಕನಸು ಹೊಂದಿರುವವರು. ಮಿಷನರಿಯನ್ನು ಚುರುಕುಗೊಳಿಸಲು ಏಕೆ ಸಾಧ್ಯವಾಗಲಿಲ್ಲ? ಸರ್ಕಾರದ ಆದೇಶಗಳನ್ನು ತತ್‌ಕ್ಷಣವೇ ಜಾರಿಗೆ ತರಲು ಏಕೆ ಸಾಧ್ಯವಾಗಲಿಲ್ಲ. ಜಿಓ ಹೊರಡಿಸಲು 7-8 ತಿಂಗಳು ತೆಗೆದುಕೊಂಡರೆ, ಅದನ್ನು ಕಾರ್ಯಗತಗೊಳಿಸುವಷ್ಟರಲ್ಲಿ ಬಡ್ಜೆಟ್ ಇಯರ್ ಮುಗಿಯುತ್ತದೆ. 18 ಸಾವಿರ ಹ್ಯಾಮ್ಲೆಟ್‌ಗಳಿಗೆ 5 ವರ್ಷಗಳಲ್ಲಿ ವಿದ್ಯುತ್ ಸಂಪರ್ಕ ಕೊಡುತ್ತೇವೆಂದರು. ಹೊಸನಗರ, ತೀರ್ಥಹಳ್ಳಿ ಮುಂತಾದ ಹಳ್ಳಿಗಳನ್ನೇ ತೆಗೆದುಕೊಂಡರೆ 3 ವರ್ಷಗಳಿಂದ ಒಬ್ಬ ಕಂಟ್ರಾಕ್ಟ್‌ದಾರನಿಗೆ ಗುತ್ತಿಗೆ ಕೊಟ್ಟಿದ್ದರು. ಅದು 6-8 ತಿಂಗಳ ಕೆಲಸ. ಅದು ಇವತ್ತಿಗೂ ಆಗಲಿಲ್ಲ. 773 ಹ್ಯಾಮ್ಲೆಟ್‌ಗಳಿಗೆ ಟರ್ನ್-ಕೀ ಆಧಾರದ ಮೇಲೆ ಗುತ್ತಿಗೆ ಕರೆದಿದ್ದು, ಅದರಲ್ಲಿ 203 ಹ್ಯಾಮ್ಲೆಟ್‌ಗಳಿಗೆ ಈಗಾಗಲೇ ಸಂಪರ್ಕ ಕಲ್ಪಿಸಲಾಗಿದೆ ಅದೂ ಒಂದು ವರ್ಷದಲ್ಲಿ. ಹಾಗಾದರೆ, 18 ಸಾವಿರ ಹಳ್ಳಿಗಳನ್ನು 5 ವರ್ಷಗಳಲ್ಲಿ ತಲುಪಲು ಸಾಧ್ಯವೆ? ಎಲ್ಲಿ ನ್ಯೂನತೆ ಇದೆ ಎಂಬುದನ್ನು ನೋಡಬೇಡವೆ? ಅದಕ್ಕೆ ಸಂಬಂಧಪಟ್ಟ ಇಲಾಖೆಯ ವರಿಷ್ಠರನ್ನು ಎಚ್ಚರಿಸಬೇಕಲ್ಲವೆ? ಅದನ್ನೆಲ್ಲಿ ಮಾಡಿದ್ದೀರಿ? ನಿಮ್ಮ ಆ ಕಾಲದಲ್ಲಿ ಕೊಟ್ಟ ಆಶ್ವಾಸನೆಗಳು ಈಡೇರುತ್ತವೆಯೇ? ಆರ್‌ಇಸಿ ಸ್ಕೀಂನಲ್ಲಿ ಹಣದ ಕೊರತೆ ಇಲ್ಲ. ನೀವು ಖರ್ಚು ಮಾಡಿದರೆ ಕೇಂದ್ರದಿಂದ ರೀ-ಇಂಬರ್ಸ್‌ಮೆಂಟ್ ಆಗುತ್ತದೆ. ಸೆಪರೇಟ್ ವಿಂಗ್ ಮಾಡಿದರೂ ಕೆಲಸವಾಗುತ್ತಿಲ್ಲ. ಟೆಂಡರ್ ಕರೆಯುವುದಿಲ್ಲ, ಎಸ್ಟಿಮೇಟ್ ಫೈನಲ್ ಮಾಡುವುದಿಲ್ಲ, ಸಾಕಷ್ಟು ರೀತಿಯ ವಿಳಂಬಗಳಿಂದ, ರಾಜ್ಯದ ಅನೇಕ ಯೋಜನೆಗಳನ್ನು ಮಾಡಲಿಕ್ಕೆ ಸಾಧ್ಯವಿಲ್ಲ. 18 ಸಾವಿರ ಹಳ್ಳಿಗಳಿಗೂ ವಿದ್ಯುತ್ ಒದಗಿಸುತ್ತೇವೆ ಎನ್ನುವುದು ಬೋಗಸ್ ಭರವಸೆ ಆಗುತ್ತದೆ. ಈ ರೀತಿಯ ಘೋಷಣೆ ಮಾಡಿ ನೀವು ಕೆಲಸ ಮಾಡಿಕೊಡದೇ ಇದ್ದರೆ, ಪುಕ್ಕಟೆ ಘೋಷಣೆ ಮಾಡುವ ಅವಶ್ಯಕತೆ ಇಲ್ಲ. ಜಲಸಂವರ್ಧನೆ ಯೋಜನೆ ಬಗ್ಗೆ ಹೇಳುವುದಾದರೆ, ನಮ್ಮ ಹಳ್ಳಿಯಲ್ಲಿ ಸಹಕಾರ ಸಂಘಗಳನ್ನು ರಚಿಸಲಾಯಿತು. ಕೆಲವು ಕೋರ್ಟ್‌ಗೆ ಹೋಗಿವೆ. ಸಂಬಂಧಗಳು ಹಾಳಾಗಿವೆ. ಅದರಿಂದ ನೂರಾರು ಕೋಟಿ ರೂಪಾಯಿಗಳು ಬರುತ್ತದೆ, ಹಳ್ಳಿಯಲ್ಲಿ ಸಹಕಾರ ಸಂಘವಾಗುತ್ತದೆ, ಕೆರೆಗಳನ್ನೆಲ್ಲಾ ನಾವು ದುರಸ್ತಿ ಮಾಡಬಹುದೆಂದು ಕನಸು ಕಟ್ಟಿ ಓಡಾಡಿ, ಎಲೆಕ್ಷನ್‌ಗೆ ನಿಂತು, ಷೇರ್ ಹೋಲ್ಡರ್‌ಗಳನ್ನು

ಮಾಡದೆ, ಅವರವರೇ ಮಾಡಿಕೊಂಡರು. ಆದರೆ, ದುಡ್ಡಿಲ್ಲದ? ನಬಾರ್ಡ್ ಯೋಜನೆಯು, ವರ್ಲ್ಡ್‌ಬ್ಯಾಂಕ್ ಯೋಜನೆಯ ಸಾಲ ಸಿಕ್ಕಲಿಲ್ಲ. ಕೆರೆ ಒಣಗುತ್ತದೆ. ಇಂಥ ಹಲವಾರು ಯೋಜನೆಗಳಿವೆ. ನೀವು ಘೋಷಿಸಿರುವ ಯೋಜನೆಗಳು ಹಾಗೆಯೇ ಇವೆ. ಕೇಂದ್ರದಿಂದ ಬರುವ ಅನುದಾನವನ್ನೂ, ಅದರಿಂದ ನಮಗೇನೇನು ಲಾಭವಾಗುತ್ತದೆಂಬುದು ತಿಳಿದು, ಏನೇನೂ ಮಾಡಲಿಲ್ಲ. ಅನ್ನಪೂರ್ಣ ಯೋಜನೆ ಎಂದರೆ ಕೇಂದ್ರ ಸರ್ಕಾರ 60 ವರ್ಷ ಮೇಲ್ಪಟ್ಟ ವಯಸ್ಕರಿಗೆ ಎರಡು ರೂಪಾಯಿ ದರದಲ್ಲಿ ಅಕ್ಕಿ ಕೊಡುತ್ತೇವೆಂದು ಹೇಳಿದರೆ, ನಮ್ಮಲ್ಲಿ ಫಲಾನುಭವಿಗಳಿಲ್ಲ, ಯಾರೂ ಇಲ್ಲವೆಂದು ಉತ್ತರ ಕಳುಹಿಸಿದ್ದಾರೆ. ನಮ್ಮದೇ ರಾಜ್ಯದ ಒಬ್ಬ ಪಾರ್ಲಿಮೆಂಟ್ ಸದಸ್ಯರು ಕೇಳಿದ ಪ್ರಶ್ನೆಗೆ, ಕೊಟ್ಟ ಉತ್ತರ ಇದು 60 ವರ್ಷ ಮೇಲ್ಪಟ್ಟ ಸಾವಿರಾರು ಜನರು ಇದ್ದರೂ ಸಹ ಅವರಿಗೆ 6-7 ರೂಪಾಯಿಗಳ ದರದಲ್ಲಿಯೂ ಅಕ್ಕಿ ಕೊಡಲು ಆಗದಿರುವಾಗ, ನಮ್ಮ ರಾಜ್ಯಕ್ಕೆ ಬರುವ ಸೌಲಭ್ಯವನ್ನು ಏಕೆ ಉಪಯೋಗಿಸಿಕೊಳ್ಳಬಾರದು? 4-5 ಕೋಟಿ ರೂಪಾಯಿಗಳನ್ನು ಅದಕ್ಕೆಂದೇ ಕೊಡುತ್ತಿದ್ದಾರೆ. ಆದರೆ, ನಾವು ತೆಗೆದುಕೊಳ್ಳುತ್ತಿಲ್ಲ. ಆ ವಯಸ್ಕರಿಗೆ ನಾವು ಅಕ್ಕಿ ಕೊಟ್ಟರೆ ರಾಜಕೀಯವಾಗಿ ಅವರೆಲ್ಲಾ ಬಿಜೆಪಿಯವರಾಗಿರುತ್ತಾರೆಂಬ ಹೆದರಿಕೆ ಇದೆಯೋ, ಹೇಗೆ? ಆ ರೀತಿ ಇದ್ದರೆ ಹೇಳಿ. ಫಲಾನುಭವಿಗಳಿಲ್ಲವೆಂದು ಉತ್ತರವನ್ನು ಕಳುಹಿಸಿದ್ದು ಏಕೆ? ಗ್ರಾಮೀಣಾಭಿವೃದ್ಧಿ ಯೋಜನೆಗಳಿಗೆ, ಹಿಂದಿನ ವರ್ಷ ನಾವು 413 ಕೋಟಿ ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದೆವು. ಆದರೆ, ಕಳೆದ ಸಾಲಿನಲ್ಲಿ 303 ಕೋಟಿ ರೂಪಾಯಿಗಳ ಪ್ರಾವಿಜನ್‌ಗೆ ಕಳುಹಿಸುತ್ತಾರೆ. ಇದು ವರ್ಷ ವರ್ಷ ಜಾಸ್ತಿಯಾಗಬೇಕು. ಗ್ರಾಮೀಣಾಭಿವೃದ್ಧಿಗೆ ಬೇಕಾದಷ್ಟು ಹಣ ಬರುತ್ತಿದೆ. ಆದರೆ, ಇವರು ದರ ಇಳಿಸಿ ಕಳುಹಿಸಿದ್ದಾರೆ. ಇದು ನಮ್ಮ ಅಧಿಕಾರಿಗಳು ಮಾಡಿರುವ ಬೇಜವಾಬ್ದಾರಿತನ. ಈ ಅಧಿಕಾರಿಗಳಿಗೆ ಸರಿಯಾಗಿ ಕೆಲಸ ಮಾಡಲು ಹೇಳಿ.

ಶ್ರೀ ಸಿ.ಆರ್. ಸಗೀರ್ ಅಹಮದ್: ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇದೆ. ಅವರು ಹಣವನ್ನು ಬಿಡುಗಡೆ ಮಾಡುವುದು ಯಾವ ಆಧಾರದ ಮೇಲೆ? 1991 ರ ಜನಗಣತಿಯ ಆಧಾರದ ಮೇಲೆ ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆಂದು ಅವರು ಹಣ ಬಿಡುಗಡೆ ಮಾಡುತ್ತಾರೆ. ತೆಗೆದುಕೊಂಡಿಲ್ಲವೆಂದರೆ, ಯಾವ ಆಧಾರದ ಮೇಲೆ ತೆಗೆದುಕೊಳ್ಳಬೇಕು?

ಶ್ರೀ ಆರಗಜ್ಞಾನೇಂದ್ರ: ಜೆಆರ್‌ವೈ ಯೋಜನೆಯಲ್ಲಿ ಮಾಡಿರುವ ಪ್ರಾಜೆಕ್ಟ್ ಇದು. ನೀವು ಎಷ್ಟು ಹಣಕ್ಕೆ ಬೇಡಿಕೆ ಸಲ್ಲಿಸಿದ್ದೀರಿ? ನನಗೆ ಸಿಕ್ಕ ಲೆಕ್ಕಪತ್ರಗಳ ಪ್ರಕಾರ, 413 ಕೋಟಿ ರೂಪಾಯಿಗಳನ್ನು ಒಂದು ವರ್ಷಕ್ಕೆಂದು ಖರ್ಚು ಮಾಡಿದರೆ, ಕಳೆದ ವರ್ಷ 303 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಮಾಡಿ ಕಳುಹಿಸಿದ್ದೀರಿ. ಅದನ್ನು ಉಪಯೋಗ ಮಾಡಿಕೊಂಡಿಲ್ಲ. ಗ್ರಾಮೀಣಾಭಿವೃದ್ಧಿ ಇಲಾಖಾಧಿಕಾರಿಗಳು ಮತ್ತು ಇದನ್ನು ಯಾರು ನೋಡುತ್ತಿದ್ದಾರೆ, ಅವರ ಮೇಲೆ ಇದರ ಬಗ್ಗೆ ನೇರ ಕ್ರಮ ಕೈಗೊಳ್ಳದಿದ್ದರೆ ಅವರನ್ನು ಅಂಕೆಯಲ್ಲಿಟ್ಟುಕೊಳ್ಳದಿದ್ದರೆ ಅದು ರಾಜ್ಯಕ್ಕೆ ಅದು ಆಗುವ ನಷ್ಟವಾಗುತ್ತದೆ. ಸ್ವರ್ಣ ಜಯಂತಿ, ಶಹರಿ ರೋಜ್‌ಗಾರ್ ಯೋಜನೆಯ ವಿಚಾರದಲ್ಲಿ 2000-01ನೇ ಸಾಲಿನಲ್ಲಿ 48 ಕೋಟಿ ರೂಪಾಯಿಗಳನ್ನು ಇನ್ನೂ ಖರ್ಚು ಮಾಡಲಿಲ್ಲ.

ಅದಕ್ಕಾಗಿ ಕೇಂದ್ರದಿಂದ ಈ ಸಾರಿ ಹಣ ಬಿಡುಗಡೆ ಮಾಡುವುದಿಲ್ಲ ಎಂದು ತಿಳಿಸಲಾಗಿದೆ. ಅವರಿಗೇನಾಗಿದೆ? ಜಿಲ್ಲೆಗೊಬ್ಬೊಬ್ಬ ಅಧಿಕಾರಿಗಳನ್ನಿಟ್ಟಿದ್ದೀರಿ, ವಾಹನವಿದೆ, ಅವರು ಕೆಲಸ ಮಾಡಲಿಕ್ಕಾಗಲಿಲ್ಲ? ಇದು ಅತ್ಯಂತ ಒಳ್ಳೆಯ ಪ್ರಾಜೆಕ್ಟ್ ಇದ್ದು, ಹಣವನ್ನು ತೆಗೆದುಕೊಳ್ಳಲಿಲ್ಲವೆಂದರೆ, ನಿಮ್ಮ ಅಧಿಕಾರಿ ಯಂತ್ರವನ್ನು ಚುರುಕುಗೊಳಿಸಲೂ ಸಾಧ್ಯವಾಗಲಿಲ್ಲವೆಂದಾಗುತ್ತದೆ. ವಾಣಿಜ್ಯ ತೆರಿಗೆ ನಂತರ ಬರುವ ಎರಡನೆಯ ಅತಿ ದೊಡ್ಡ ರೆವಿನ್ಯೂ ಎಂದರೆ ಅಬಕಾರಿ. 2,086 ಕೋಟಿ ರೂಪಾಯಿಗಳನ್ನು ಈ ಸಾಲಿಗಾಗಿ ಇಯರ್‌ಮಾರ್ಕ್ ಮಾಡಲಾಗಿದೆ. ಎಲ್ಲಿ ಸೋರಿ ಹೋಗುತ್ತಿದೆ, ಅದನ್ನು ತಡೆಗಟ್ಟಲು ಪ್ರಾಮಾಣಿಕವಾಗಿ ಯೋಚಿಸುವ ಪ್ರಯತ್ನವನ್ನೂ ಮಾಡಲಿಲ್ಲ. ನಾನು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷನಾಗಿ ಒಂದೂವರೆ ವರ್ಷಗಳಾಯಿತು. ಆಗಿನಿಂದ, ಸಿಎಜಿ ವರದಿಯಾಧಾರದ ಮೇಲೆ ಅಬಕಾರಿ ಇಲಾಖೆಯನ್ನು ರಿವ್ಯೂ ಮಾಡುತ್ತಿದ್ದೇವೆ. ನಾವು ಕೇಳಿದ ಅಂಕಿಅಂಶಗಳನ್ನು ನಿಮ್ಮ ಅಧಿಕಾರಿಗಳು ಕೊಡುತ್ತಿಲ್ಲ. ಒಂದೊಂದು ವಿವರಣೆ ಕೇಳಿದಾಗಲೂ ಒಂದರಿಂದ ಮೂರು ತಿಂಗಳ ಸಮಯ ತೆಗೆದುಕೊಳ್ಳುತ್ತದೆ. 1993ರಲ್ಲಾಗಿರುವ ಸ್ಪಿರಿಟ್ ಹಗರಣದ ಬಗ್ಗೆ ಹೇಳುತ್ತೇನೆ. ನಾವು ವಿವರಣೆ ಕೇಳಿ ಸಂಬಂಧಪಟ್ಟ ಕಡತಗಳನ್ನು ಕೊಡಿ ಎಂದರೆ, ನಿಮಗೆ ಕೊಡಬೇಕೋ, ಬೇಡವೋ ಎಂಬುದಕ್ಕೆ ಮುಖ್ಯಮಂತ್ರಿಗಳಿಗೆ ಕಳುಹಿಸಿದ್ದೇವೆಂದು ಹೇಳುತ್ತಾರೆ. 3-4 ತಿಂಗಳ ನಂತರ, ಸಾರ್ವಜನಕ ಲೆಕ್ಕಪತ್ರಗಳ ಸಮಿತಿಗೆ ಈ ಕಡತವನ್ನು ಕೊಡುವುದಕ್ಕೆ ಬರುವುದಿಲ್ಲವೆಂದು ಕಳುಹಿಸಿದ್ದಾರೆ. ನಾನು ಬಹಳ ದುಃಖದಿಂದ ಹೇಳುತ್ತೇನೆ, ಲೆಕ್ಕಪತ್ರ ಸಮಿತಿಯು ಎಲ್ಲಿಯೋ ಪ್ರಿಜುಡೀಸ್‌ನಿಂದ ಕೆಲಸ ಮಾಡಲು ಹೋಗುವುದಿಲ್ಲ. ಅಲ್ಲಿ ಕಾಂಗ್ರೆಸ್, ಜನತಾದಳ ಮತ್ತು ಪಕ್ಷೇತರ ಮತ್ತು ನಾವೂ ಸದಸ್ಯರಾಗಿದ್ದೇವೆ. ಸಮಿತಿಯಲ್ಲಿ ಕುಳಿತು ಚರ್ಚಿಸುವಾಗ, ಪ್ರಾಮಾಣಿಕವಾಗಿ, ಅಧಿಕಾರಿಗಳು ಎಲ್ಲಿ ತಪ್ಪು ಮಾಡಿದ್ದಾರೆ ಎಂಬುದನ್ನು ಕಂಡುಹಿಡಿಯುವ ಬಗ್ಗೆ ಯೋಚಿಸುತ್ತೇವೆ. ಅಲ್ಲಿ ರಾಜಕಾರಣ ಬರುವುದಿಲ್ಲ. ಕೆಲವು ಕಡತಗಳನ್ನು ಕೊಡಲಿಕ್ಕಾಗುವುದಿಲ್ಲವೆಂದರೆ ಏನರ್ಥ? ಇದು ಸರ್ಕಾರದ ಪಾರದರ್ಶಕ ನೀತಿಯೇ? ಇದರಿಂದ ಭೂಷಣ ತರುತ್ತದೆಯೇ? ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಸಂಬಂಧಪಟ್ಟ ಅಬಕಾರಿ ಫೈಲ್ ಅನ್ನು ಕೊಡಲಿಕ್ಕಾಗುವುದಿಲ್ಲವೆಂದು ನಿಮ್ಮ ಅಧಿಕಾರಿಗಳು ಹೇಳುತ್ತಾರೆ. ಇದನ್ನೆಲ್ಲ ಮುಚ್ಚಿಡುವ ಪ್ರಯತ್ನ ಮಾಡುತ್ತಿದ್ದಾರೆ. ಐಎಎಸ್ ಅಧಿಕಾರಿಗಳಿದ್ದಾರೆ, ಅವರುಗಳು ಇದನ್ನೆಲ್ಲ ಬಯಲಿಗೆ ತರಬೇಕಲ್ಲವೆ? ಸರ್ಕಾರಕ್ಕೆ ಬರುವ ಸಾವಿರಾರು ಕೋಟಿ ರೂಪಾಯಿಗಳ ರೆವಿನ್ಯೂವನ್ನು ಹಾಳು ಮಾಡುವ ಅಧಿಕಾರಿಗಳನ್ನು ಹೊರಗೆಳೆಯುವುದು ಅವಶ್ಯಕವಲ್ಲವೆ? ಅದನ್ನು ಬಹಿರಂಗಪಡಿಸಿ, ಅವರನ್ನು ಶಿಕ್ಷಿಸಬೇಕಲ್ಲವೆ? ಇದನ್ನು ಯಾವ ಕಾರಣಕ್ಕಾಗಿ ಮುಚ್ಚಿಡುತ್ತೀರಿ? ಮುಖ್ಯಮಂತ್ರಿಗಳು ಇದರ ಮೇಲೆ ಉತ್ತರಿಸುವಾಗ ಉಲ್ಲೇಖಿಸುತ್ತಾರೆಂದು ಭಾವಿಸುತ್ತೇನೆ. ಇದು ಗಂಭೀರವಾದ ವಿಚಾರವಿದೆ. ಆಡಳಿತ ಸುಧಾರಣೆ ಮಾಡಬೇಕೆಂದು ಯೋಚಿಸುವಾಗ, ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಕೆಪಿಎಸ್‌ನಿಂದ ಕಳೆದ ಎರಡು ವರ್ಷಗಳಲ್ಲಿ 250 ಜನರು ಇನ್ಸ್‌ಪೆಕ್ಟರ್‌ಗಳಾಗಿ ಆಯ್ಕೆಯಾದರು. ಆಯ್ಕೆಯಾದ ಲಿಸ್ಟ್ ಅನ್ನು ಇಲಾಖೆಗಳಿಗೆ ಕಳುಹಿಸುತ್ತಾರೆ. ಆ ಲಿಸ್ಟ್ ಬಂದ ತಕ್ಷಣವೇ ತರಾತುರಿಯಲ್ಲಿ ಇನ್‌ಸರ್ವೀಸ್‌ನಲ್ಲಿರುವ ಕೆಲವರನ್ನು ಇನ್ಸ್‌ಪೆಕ್ಟರ್‌ಗಳನ್ನಾಗಿ ಮೇಲ್ದರ್ಜೆಗೆ ಏರಿಸುತ್ತಾರೆ. 15 ಜನ ಎಸ್‌ಡಿಎಗಳನ್ನು ಎಫ್‌ಡಿಎಗಳನ್ನಾಗಿ

ಮಾಡದೆ ಏಕಾಏಕಿ ಇನ್‌ಪೆಕ್ಟರ್‌ಗಳನ್ನಾಗಿ ಮಾಡಿದ್ದಾರೆ. ಇದನ್ನು ಯಾರೂ ನೋಡಲಿಕ್ಕೆ ಹೋಗುವುದಿಲ್ಲ. ಹೊಸದಾಗಿ ಆಯ್ಕೆಯಾದವರಿಗೆ ಸಂಬಳ ಕೊಟ್ಟು ಎರಡು ವರ್ಷಗಳು ಟ್ರೈನಿಂಗ್ ಮಾಡಿಸಿದರು. ಟ್ರೈನಿಂಗ್ ಪೀರಿಯಡ್ ಜನವರಿಗೆ ಮುಗಿಯಿತು. ಈಗಲೂ ಕೂಡ ಪುಕ್ಕಟ್ಟೆ ಸಂಬಳ ಕೊಡುತ್ತಿದ್ದೀರಿ. ವಾಣಿಜ್ಯ ತೆರಿಗೆ ಇಲಾಖೆ ಇನ್‌ಪೆಕ್ಟರ್‌ಗಳಿಗೆ ಒಂದು ತಿಂಗಳಿಗೆ ಸಂಬಳ ಎಷ್ಟಾಗುತ್ತದೆ? ಸಾರ್ವಜನಿಕರ ಹಣವನ್ನು ಯಾವ ರೀತಿಯಾಗಿ ಪೋಲು ಮಾಡುತ್ತಿದ್ದಾರೆಂಬುದಕ್ಕೆ ಇದೊಂದು ಚಿಕ್ಕ ಉದಾಹರಣೆ. ಸಿಎಜಿ ವರದಿಯ ಪ್ರಕಾರ, 745 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವ ನಮ್ಮ ಸರ್ಕಾರ 36 ಇಲಾಖೆಗಳು, 346 ಕೋಟಿ ರೂಪಾಯಿಗಳಿಗೆ ಸಂಬಂಧಪಟ್ಟ ಅಕೌಂಟ್ಸ್ ಅನ್ನು ರೀ-ಕನ್‌ಸಿಲಿಯೇಷನ್ ಮಾಡಲಾಗಲಿಲ್ಲ. ಹಾಗಾದರೆ, ನೀವು ಭ್ರಷ್ಟಾಚಾರವನ್ನು ಹೇಗೆ ತಡೆಗಟ್ಟುತ್ತೀರಿ? ಪ್ರತಿವರ್ಷ ಪ್ರತಿಯೊಂದು ಇಲಾಖೆ ಕೂಡ ರೀ-ಕನ್‌ಸಿಲಿಯೇಷನ್ ಮಾಡಿಕೊಳ್ಳದಿದ್ದರೆ, ಹೇಗೆ?

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು): ಆ ವರದಿ ಯಾವ ವರ್ಷದ್ದು? ಮಾನ್ಯ ಅರಣ್ಯ ಸಚಿವರು ಇರಬೇಕಾಗಿತ್ತು, ಈಗ ಅವರು ಇಲ್ಲಿ ಇಲ್ಲ. 1995ನೇ ಸಾಲಿನಿಂದ ಮರು ಹೊಂದಾಣಿಕೆಯ ಬಗ್ಗೆ ನಮಗೆ ಗೊತ್ತಿಲ್ಲವೆಂದು ಅಲ್ಲಿಯ ಅಧಿಕಾರಿಗಳು ಹೇಳುತ್ತಾರೆ. ರಾಜ್ಯ ಎಸಿಎಫ್ ರವರ ಮೇಲೆ ಮೂರೂವರೆ ಕೋಟಿ ರೂಪಾಯಿಗಳ ಒಂದು ಹಗರಣ ಇದೆ, ಇದರಲ್ಲಿ ಯಾರ್ಯಾರು ಶ್ಯಾಮಿಲಾಗಿದ್ದಾರೋ ಗೊತ್ತಾಗುತ್ತಿಲ್ಲ. ಈ ರೀತಿಯಾಗಿ ನಮ್ಮ ಇಲಾಖೆಗಳು ಇಂದು ನಡೆಯುತ್ತಿವೆ. ಇಲಾಖೆಯ ಹಣ ಸರಿಯಾದ ರೀತಿಯಲ್ಲಿ ಖರ್ಚಾಗದೆ ಇರುವುದನ್ನು ಸಂಬಂಧಪಟ್ಟ ಇಲಾಖೆಯ ಮೇಲಾಧಿಕಾರಿಗಳು ನೋಡದೆ ಹೋದರೆ ಅವರು ಅದನ್ನು ಗಮನಿಸದೆ ಹೋದರೆ, ಸಾರ್ವಜನಿಕರ ಹಣವನ್ನು ಯಾರೋ ತಿಂದು ಆರಾಮವಾಗಿ ಇರಬಹುದು. ಅದಕ್ಕೆ ಹೇಳುವವರು ಕೇಳುವವರು ಯಾರೂ ಇಲ್ಲ. ಈ ರೀತಿಯಾದ ಅನೇಕ ಸಂಗತಿಗಳು ಈ ಸರ್ಕಾರದಲ್ಲಿ ಇವೆ. ಮೊನ್ನೆ ತಾನೆ ಸರ್ಕಾರ ಬಜೆಟ್ ಮಂಡನೆ ಮಾಡುವಾಗ ದೊಡ್ಡ ಪ್ರಚಾರ ಪಡೆದುಕೊಂಡಿತು. ಕೂಸು ಹುಟ್ಟುವುದರೊಳಗೆ ದೊಡ್ಡ ಪ್ರಚಾರ ಮಾಡಿಕೊಂಡಿತು. ರಾಜ್ಯ ಸರ್ಕಾರ ಬಜೆಟ್ ನೋಡಿದರೆ ದೆವ್ವದ ರೂಪದಲ್ಲಿ ಭೂಮಿಗೆ ಮಗು ಕಾಲಿಟ್ಟಂತಾಯಿತು. ಸರ್ಕಾರ ರೈತರ ಪರವಾಗಿದೆ ಎನ್ನುವ ರೀತಿಯಲ್ಲಿ ಉಲ್ಲೇಖ ಮಾಡಿದ್ದಾರೆ. ನಾವು ಕೂಡ ರೈತರ ಪರವಾಗಿ ಬಜೆಟ್ ಮಾಡುತ್ತಾರೆಂದು ಭಾವಿಸಿದ್ದೆವು. ಮಾನ್ಯ ಮುಖ್ಯ ಮಂತ್ರಿಗಳು ರೈತರ ಪರವಾಗಿ ಮಾಡಿದ್ದಾರೆಂದು ತಿಳಿದುಕೊಂಡಿದ್ದೆವು. ಮಾನ್ಯ ಮುಖ್ಯಮಂತ್ರಿಗಳು ರೈತರ ಪರವಾಗಿ ಬಜೆಟ್ ಮಾಡುತ್ತಾರೆಂದು ಭಾವಿಸಿದ್ದೆವು. ಏನೇ ಆಗಲಿ ಇಂದು ರೈತರ ಬೆಳೆ ಪೂರ್ತಿಯಾಗಿ ಹಾಳಾಗಿದೆ. ನಾವು ತಿಳಿದುಕೊಂಡಂತೆ ಬಜೆಟ್ ಇಲ್ಲ. ಮೊನ್ನೆ ಬಜೆಟ್‌ನಲ್ಲಿ ತಾವು ಅನೇಕ ವಿಚಾರಗಳನ್ನು ಹಾಗೂ ಸಂಗತಿಗಳನ್ನು ಉಲ್ಲೇಖ ಮಾಡಿರುತ್ತೀರಿ. ನಮ್ಮ ರೈತರ ಬಗ್ಗೆ ಅನೇಕ ಕೆಲಸಗಳನ್ನು ತೆಗೆದುಕೊಂಡಿರುತ್ತೀರಿ, ರೈತರ ಮೇಲಿನ ಎರಡು ಪರ್ಸೆಂಟ್ ಬಟ್ಟಿಯನ್ನು ಸೊಸೈಟಿಗಳವರೇ ಕಟ್ಟಿಕೊಳ್ಳಿ ಎಂದು ಹೇಳುತ್ತೀರಿ. ಇದು ಬಹಳ ಒಳ್ಳೆಯದು. ಆದರೆ ನಾನು ನಿಮ್ಮನ್ನು ಇಲ್ಲಿ ಕೇಳುತ್ತೇನೆ, ಕರಸಮಾಧಾನ ಯೋಜನೆ ಎಂದು ಮಾಡಿರುತ್ತೀರಿ. ದಿನಾಂಕ: 31-3-2000 ದರವೆಗಿನ ಸಾಲಗಳ ತೆರಿಗೆ ಬಾಕಿ ಸಂಬಂಧಪಟ್ಟಂತೆ, ಬಾಕಿ ಇರುವ ರೈತರು ದಿನಾಂಕ: 30-4-2001 ರೊಳಗೆ ಬಾಕಿ

ಇರುವ ತೆರಿಗೆಯ ಪೂರ್ಣ ಮೊತ್ತ ಹಾಗೂ ಅದರ ಮೇಲಿನ ಬಡ್ಡಿ ಮತ್ತು ದಂಡಗಳ ಶೇಕಡ 20 ರಷ್ಟರ ಮೊತ್ತವನ್ನು ಪಾವತಿ ಮಾಡಿದಲ್ಲಿ, ತೆರಿಗೆ ಬಾಕಿಯ ಮೇಲೆ ಪಾವತಿ ಮಾಡಬೇಕಾದ ಅಥವಾ ವಿಧಿಸಬಹುದಾದ ಉಳಿದ ಶೇಕಡ 80 ರಷ್ಟರ ಬಡ್ಡಿ ಮತ್ತು ದಂಡಗಳನ್ನು ಮನ್ನಾ ಮಾಡಲಾಗುವುದೆಂದು ಹೇಳಿದ್ದಾರೆ. ನಾನು ನಿಮ್ಮನ್ನು ಕೇಳುತ್ತೇನೆ, ಸರ್ಕಾರ ಯಾರ ಪರವಾಗಿಗೆ, ರೈತರಿಗೆ ಎರಡು ಪರ್ಸೆಂಟ್ ಬಡ್ಡಿಯನ್ನು ಸೊಸೈಟಿ ಲಾಭಾಂಶದಲ್ಲಿ ಕಟ್ಟಿಕೊಳ್ಳಿ ಎಂದು ಹೇಳುತ್ತೀರಿ. ನೂರಾರು ಕೋಟಿ ರೂಪಾಯಿಗಳ ವಾಣಿಜ್ಯ ತೆರಿಗೆ ಬಾಕಿ ಇದೆ. ರೈತರು ಬೆಳೆ ಬೆಳೆದು ಮಾರಾಟ ಮಾಡಬೇಕಾದರೆ ಕಷ್ಟವಾಗಿದೆ. ಸರ್ಕಾರ ಕೊಡಬೇಕಾಗಿತ್ತು, ಅದನ್ನು ಅವರು ಕೊಡಲಿಲ್ಲ. ರೈತರ ಬಡ್ಡಿ ಮನ್ನಾ ಮಾಡುವುದಕ್ಕೆ ನಿಮಗೆ ಏನು ತೊಂದರೆ ಇದೆ? ನೀವು ಅಬಕಾರಿ ಬಡ್ಡಿ ಮನ್ನಾ ಮಾಡುತ್ತೀರಿ, ನಾನು ರೈತರ ಬಡ್ಡಿಯನ್ನು ಮನ್ನಾ ಮಾಡುತ್ತೀರೆಂದು ಭಾವಿಸಿಕೊಂಡಿದ್ದೆವು, ನೀವು ಆ ರೀತಿ ಮಾಡಲಿಲ್ಲ. 'ಆಧುನಿಕ ಕೃಷ್ಣ ಯಾರ ಸಾರಥಿ'? ಬಜೆಟ್‌ನಲ್ಲಿ ನಮ್ಮ ರೈತರ ಸಾರಥಿಯಾಗುತ್ತಾರೆಂದು ತಿಳಿದುಕೊಂಡಿದ್ದೆವು, ಆದರೆ ನೀವು ಮತ್ತೆ ವಾಪಸ್ಸು ಹೋಗಿ ವ್ಯಾಪಾರಿಗಳ ಸಾರಥಿಯಾಗಿರುತ್ತೀರಿ. ಇದಕ್ಕೆ ಅನೇಕ ಯೋಜನೆಗಳನ್ನು ಹಾಗೂ ಕಾನೂನುಗಳನ್ನು ಮಾಡಿರುತ್ತೀರಿ, ನಾನು ಮೊನ್ನೆ ಹೇಳಿದೆ.

ಶ್ರೀ ಎಂ. ಮಹದೇವ್: ನೀವು ನಿಮ್ಮ ಆತ್ಮವನ್ನು ಮುಟ್ಟಿಕೊಂಡು, ಇದು ರೈತರ ಪರವಾಗಿ ಇದೆಯೋ ಇಲ್ಲವೋ ಎನ್ನುವುದನ್ನು ಹೇಳಿ.

ಶ್ರೀ ಅರಗ ಜ್ಞಾನೇಂದ್ರ: ನಿಮ್ಮ ಬಜೆಟ್ ಪ್ರಕಾರ ಹೇಳುತ್ತಿದ್ದೇನೆ, ನಿಮ್ಮ ಆತ್ಮದಂತೆ ಇದೆ. ನಿಮ್ಮ ಭಾವನೆ ಅರ್ಥವಾಗುತ್ತದೆ, ನಾನು ಈಲ್ಡ್ ಆಗುವುದಿಲ್ಲ. ಇನ್ನೊಂದು ವಸತಿ ಯೋಜನೆ, ಎರಡು ಲಕ್ಷ ಮನೆಗಳನ್ನು ಕಟ್ಟುತ್ತೇವೆಂದು ಹೇಳಿರುತ್ತೀರಿ, ಬಹಳ ಸಂತೋಷ. 1996 ರಿಂದ ನೀವು ಮನೆ ಕಟ್ಟಿಕೊಂಡಿರುವವರು ಬಾಕಿ ಹಣವನ್ನು ಕೊಡಿ ಎಂದು ತಾಲ್ಲೂಕು ಪಂಚಾಯಿತಿಗೆ ಅಲೆಯುತ್ತಿದ್ದಾರೆ ಅವರ ಪರಿಸ್ಥಿತಿ ಏನು?

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ: ನೋಡಿ, ನಾವು ಈ ವರ್ಷ ಕೊಟ್ಟಿರುವಂತಹ ಮನೆಗಳಿಗೆ ಹಣವನ್ನು ಕೊಟ್ಟಿದ್ದೇವೋ ಅಥವಾ ಇಲ್ಲವೋ ಎನ್ನುವುದನ್ನು ಅಷ್ಟು ಮಾತ್ರ ಹೇಳಿ.

ಶ್ರೀ ಅರಗ ಜ್ಞಾನೇಂದ್ರ: ಹಿಂದಿನ ಸರ್ಕಾರದ ಹಣ ಬಾಕಿ ಇದೆ, ಆ ಸರ್ಕಾರ ಕೊಟ್ಟಿರುವುದಕ್ಕೆ ನಮಗೆ ಸಂಬಂಧಪಟ್ಟಿಲ್ಲವೆಂದು ಹೇಳುತ್ತೀರಾ? ಅವರು ಮನೆ ಕಟ್ಟಿರುತ್ತಾರೋ ಇಲ್ಲವೋ ಅದಕ್ಕೆ ಹಣ ಕೊಡಲಿಲ್ಲ, ಅದಕ್ಕೆ ಹಣ ಈಗ ಯಾರು ಕೊಡಬೇಕು?

ಶ್ರೀ ಕಾಗೋಡು ತಿಮ್ಮಪ್ಪ: ಮನೆಯನ್ನು ಪೂರ್ತಿ ಮುಗಿಸಿದರೆ ಹಣ ಕೊಡಲಾಗಿದೆ. ಇನ್ನು ಕೆಲವು ಭಾಗ ಹಾಗೆ ಇದೆ, ಕೆಲವು ಭಾಗ ಕಟ್ಟಿದ್ದಾರೆ, ಅಂತಹ ಮನೆಗಳ ಹಣ ಬಾಕಿ ಇರಬಹುದು.

ಶ್ರೀ ಅರಗ ಜ್ಞಾನೇಂದ್ರ: ಮನೆಯನ್ನು ಪ್ರಾರಂಭ ಮಾಡಿ ಅದನ್ನು ಕಟ್ಟಿ ಮುಗಿಸಿ ಹಣ ಕೊಡಿ ಎಂದು ತಾಲ್ಲೂಕು ಪಂಚಾಯಿತಿಗೆ ಅಲೆಯುತ್ತಿದ್ದಾರೆ ಅವರಿಗೆ ನೀವು ಏನು ಹೇಳುತ್ತೀರಿ.

ಶ್ರೀ ಕಾಗೋಡು ತಿಮ್ಮಪ್ಪ: ನಮ್ಮ ಸರ್ಕಾರದಿಂದ ನೀಡಿರುವ ಎರಡು ಲಕ್ಷ ಮನೆಗಳ ವಿಚಾರದ ಬಗ್ಗೆ ತಾವು ಹೇಳಿ.

(ಗೊಂದಲ)

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ನಾವು ಸಂಬಂಧಪಟ್ಟ ಹಣವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ನೀಡಿರುತ್ತೇವೆ. ಹಣ ಬಿಡುಗಡೆ ಮಾಡಿರುವ ಬಗ್ಗೆ ಪ್ರತಿ ಮೂರು ತಿಂಗಳಿಗೊಮ್ಮೆ ನಡೆಯುವ ಕೆಡಿಪಿ ಸಭೆಯಲ್ಲಿ ಬೇಕಾದರೆ ಮಾಹಿತಿ ಸಿಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಸಮಾಜ ಕಲ್ಯಾಣ ಸಚಿವರು ನಮ್ಮ ಸರ್ಕಾರದಿಂದ ಬಿಡುಗಡೆಯಾದ ಮನೆಗಳಿಗೆ ಕೊಟ್ಟಿದ್ದೇವೋ ಇಲ್ಲವೋ ಅಷ್ಟನ್ನು ಹೇಳಿ ಎಂದು ಹೇಳುತ್ತಿದ್ದಾರೆ. ಬಾಕಿ ಹಣವನ್ನು ಬಿಡುಗಡೆ ಮಾಡುವುದಕ್ಕೆ ಮತ್ತೆ ಮೊದಲು ಇದ್ದ ಸರ್ಕಾರದವರೇ ಅಧಿಕಾರಕ್ಕೆ ಬರಬೇಕೇ? ಇದು ಬಹಳ ಪ್ರಮುಖವಾದ ವಿಷಯ, ಇದು ನಿಮ್ಮ ಕ್ಷೇತ್ರದಲ್ಲಿ ಕೂಡ ಸಮಸ್ಯೆ ಇದೆ. ಪ್ರತಿ ದಿವಸ ಸಾಲವನ್ನು ಮಾಡಿಕೊಂಡು ತಾಲ್ಲೂಕು ಪಂಚಾಯಿತಿಗೆ ಹೋಗಿ ಮನೆಯ ಬಾಕಿ ಹಣವನ್ನು ಕೊಡಿ ಎಂದು ಅಲೆಯುತ್ತಿದ್ದಾರೆ. ಇನ್ನು ನಿಮ್ಮ ಸರ್ಕಾರ ಬಡತನ ರೇಖೆಗಿಂತ ಕೆಳಗಿರುವಂತಹ 20 ಲಕ್ಷ ಜನರಿಗೆ ಆಹಾರಧಾನ್ಯ ಕಡಿಮೆ ದರದಲ್ಲಿ ಒದಗಿಸುತ್ತೇವೆಂದು ಹೇಳಿದ್ದೀರಿ, ಇನ್ನು 40 ಲಕ್ಷ ಜನ ಅವರು ಯಾರು? ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಕೂಡ ಇದರ ಬಗ್ಗೆ ಸಮಗ್ರವಾಗಿ ಹೇಳಿದ್ದಾರೆ. ನೀವು ಅಂಗನವಾಡಿಯವರನ್ನು ಹಾಕಿಕೊಂಡು ಸರ್ವೆ ಮಾಡಿಸಿರುತ್ತೀರಿ. ಅದು ಸರ್ವೆ ಸರಿಯಾಗಿಲ್ಲ, ಅದನ್ನು ಸಮಗ್ರವಾಗಿ ಸರ್ವೆ ಮಾಡಿಸಿ ಆಹಾರ ಇಲಾಖೆಯವರಿಗೆ ತೊಂದರೆಯಾಗುತ್ತದೆ, ಇದನ್ನು ರೆವಿನ್ಯೂ ಇಲಾಖೆಯವರಿಗೆ ಸರ್ವೆ ಮಾಡಲು ಕೊಟ್ಟಿರುತ್ತಾರೆ, ಇಲ್ಲಿ ಎರಡು-ಮೂರು ಇಲಾಖೆಯವರು ಕೂಡಿಕೊಂಡು ಕಚ್ಚಾಡುತ್ತಿದ್ದಾರೆ. ಸರ್ವೆ ಮಾಡುವುದಕ್ಕೆ ಕಂದಾಯ ಇಲಾಖೆಯ ಗ್ರಾಮ ಲೆಕ್ಕಾಧಿಕಾರಿ ಅವರು ಸಮಗ್ರವಾದ ಮಾಹಿತಿಯನ್ನು ಕೊಡುತ್ತಿಲ್ಲ. ನೀವು ಗ್ರಾಮ ಸಭೆಯನ್ನು ಮಾಡಬೇಕೆಂದು ಹೇಳುತ್ತೀರಿ, ಇಂತಹ ವಿಚಾರದಲ್ಲಿ ಎಷ್ಟು ಗ್ರಾಮ ಸಭೆಗಳು ಆಗಿವೆ, ಗ್ರಾಮ ಸಭೆಗೆ 10 ಜನ ಕೂಡ ಸೇರುವುದಿಲ್ಲ. ಅಲ್ಲಿರತಕ್ಕಂಥ ಪ್ರಮಾಣಿಕವಾದ ಬಡವರನ್ನು ಗುರುತಿಸಿ ಬಿಪಿಎಲ್ ಸರ್ವೆ ಪ್ರಾಮಾಣಿಕವಾಗಿ ಆಗಿಲ್ಲ. ಭಾಗ್ಯಜ್ಯೋತಿ ಮನೆಯಾಗಲಿ, ಕೇಂದ್ರ ಸರ್ಕಾರದ ಅನುಸೂಚಿತ ಲಿಸ್ಟ್ ನಿಮ್ಮಲ್ಲಿ ಎಲ್ಲಿ ಇದೆ? ಮೊನ್ನೆ ಸರ್ವೆ ಬಗ್ಗೆ ನಾನು ಕೇಳಿದರೆ, ಸರ್ವೆ ಕಂಪ್ಲೀಟ್ ಆಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಬಡತನ ರೇಖೆಗಿಂತ ಕೆಳಗಿರುವವರು ಎಂದು ನಿಮ್ಮ ಸರ್ಕಾರ ಯಾರನ್ನು ಗುರುತಿಸುವುದು. ಎರಡು ಇಲಾಖೆಯವರನ್ನು ಕೂಡಿಸಿ ನಿಮಗೆ ಸರ್ವೆ ಮಾಡಿಸುವುದಕ್ಕಾಗುತ್ತದೆಯೆ?

3.50 ಪಿ.ಎಂ.

ಬಡವರಿಗೆ ಮನೆಗಳನ್ನು ಕೊಡುವಾಗ ನಿರ್ಮಲ ಜ್ಯೋತಿ ಯೋಜನೆಯಡಿಯಲ್ಲಿ ಯಾವ ಮಾನದಂಡವನ್ನು ಇಟ್ಟುಕೊಂಡಿದ್ದೀರಿ? ಈ ಕಾರ್ಯಕ್ರಮಗಳನ್ನು ತಾವು ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರುತ್ತೀರಾ? ಕೆಪಿಟಿಸಿಎಲ್‌ನವರು ನಿಮಗೆ ಏನೋ ಹೇಳಿ ಕುಮ್ಮಕ್ಕು ಕೊಡುತ್ತಿದ್ದಾರೆ, 2000-2001ರ ಆಯವ್ಯಯದಲ್ಲಿ 144 ಕೋಟಿ ರೂಪಾಯಿಗಳ ಹೆಚ್ಚುವರಿ ಸಹಾಯಧನವನ್ನು ಒಳಪಡಿಸಿದ್ದೀರೆಂದು ಹೇಳಿದ್ದೀರಿ, ಇದನ್ನು ನಾನು ಸ್ವಾಗತ ಮಾಡುತ್ತೇನೆ. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ರೈತ ಪ್ರತಿನಿಧಿಯೊಬ್ಬರನ್ನು ಸದಸ್ಯರನ್ನಾಗಿ ನೇಮಿಸುವ ಬಗ್ಗೆ ದೂರದರ್ಶನದಲ್ಲಿ ಅಡ್ವರ್‌ಟೈಸ್‌ಮೆಂಟ್ ಬರುತ್ತಿದೆ. ಇದರ ಬಗ್ಗೆ ರೈತರುಗಳಿಗೆ ಮಾಹಿತಿಯನ್ನು ಕೊಡಿ, ರೈತರ ಪಂಪುಸೆಟ್ಟುಗಳ ಬಗ್ಗೆ ಇನ್ನಿತರ ವಿಷಯದ ಬಗ್ಗೆ ಅಗತ್ಯವಾದ ಮಾಹಿತಿಯನ್ನು ದೂರದರ್ಶನದಲ್ಲಿ ಪ್ರಸಾರ ಮಾಡುತ್ತಿದ್ದಾರೆ. ನೀವು ರೈತರನ್ನು ಯಾವ ರೀತಿಯಾಗಿ ನೋಡಿಕೊಳ್ಳುತ್ತಿದ್ದೀರೆಂದರೆ, ಮಲೆನಾಡು ಪ್ರದೇಶದಲ್ಲಿ ಒಂದೇ ಕಡೆ ಅವನ ಜಮೀನು ಇರದೆ ಬೇರೆ ಬೇರೆ ಕಡೆಗಳಲ್ಲಿ ಎರಡೆರಡು ಎಕರೆ ಜಮೀನುಗಳು ಇರುತ್ತದೆ, ಎಲ್ಲಾ ಕಡೆ ಅವನು ಪಂಪ್‌ಸೆಟ್ಟುಗಳನ್ನು ಉಪಯೋಗಿಸಿಕೊಳ್ಳಬೇಕಾಗುತ್ತದೆ. ಆ ಎರಡು ಪಂಪುಸೆಟ್ಟುಗಳಿಗೆ ನೀವು ರಿಯಾಯಿತಿಯನ್ನು ಕೊಡಬೇಕು, ನೀವು ಆ ರೀತಿ ಮಾಡುತ್ತಿಲ್ಲ. 10 ಹೆಚ್‌ಪಿ ಪಂಪ್‌ಸೆಟ್ಟುಗಳನ್ನು ಇಟ್ಟುಕೊಂಡವನಿಗೆ ರಿಯಾಯಿತಿಯನ್ನು ಕೊಡದಿದ್ದರೆ ಹೇಗೆ? ಯಾವ ಅಧಿಕಾರಿ ನಿಮಗೆ ಈ ರೀತಿ ಸಲಹೆ ಕೊಡುತ್ತಿದ್ದಾರೆ? ಇದರ ಬಗ್ಗೆ ತಾವು ಯೋಚನೆ ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಈ ಸಾಲಿನ ಆಯವ್ಯಯ ಮುಂಗಡಪತ್ರಗಳನ್ನು ಮಂಡಿಸುತ್ತಾ ಮೇ ತಿಂಗಳಿನಿಂದ ರಾಜ್ಯದ ಗ್ರಾಮೀಣ ಪ್ರದೇಶಗಳ ರೈತರಿಗೆ ಅನುಕೂಲವಾಗಲಿ ಎಂದು ದೃಷ್ಟಿಯಿಂದ ರಾತ್ರಿ 10 ಗಂಟೆಯಿಂದ ಬೆಳಗಿನ ಜಾವ 6 ಗಂಟೆಯವರೆವಿಗೆ ವಿದ್ಯುತ್‌ನ್ನು ಕೊಡುತ್ತೇವೆಂದು ಹೇಳಿದ್ದಾರೆ, ಹಗಲು ಹೊತ್ತಿನಲ್ಲಿ ವಿದ್ಯುತ್‌ನ್ನು ಕೊಡದೆ ರಾತ್ರಿ ಸಮಯದಲ್ಲಿ ಆ ರೈತನು ನಿದ್ದೆಗೆಟ್ಟು ತನ್ನ ಜಮೀನಿಗೆ ಹೋಗುವಂತೆ ಮಾಡಿದ್ದೀರಿ. ಈ ರೀತಿ ಮಾಡುವುದರಿಂದ ಅವನು ತನ್ನ ಗದ್ದೆಗೆ ನೀರು ಹಾಯಿಸಲು ಹೋಗುವಂತಹ ಸಂದರ್ಭದಲ್ಲಿ ಆತನಿಗೆ ವಿಷಜಂತುಗಳು ಕಚ್ಚಿ ಸಾಯಲಿ ಎನ್ನುವುದಕ್ಕೋಸ್ಕರ ತಾವು ಇಂತಹ ವ್ಯವಸ್ಥೆಯನ್ನು ಜಾರಿಗೆ ತಂದಿದ್ದೀರಾ? ಆಯವ್ಯಯ ಮುಂಗಡಪತ್ರದಲ್ಲಿ ಪ್ರಸ್ತಾಪಿಸಿರುವ ಹಾಗೆ ಹಲವು ವಿಷಯಗಳ ಪೈಕಿ ಕೆಲವೊಂದನ್ನಾದರೂ ಸ್ವಾಗತಿಸುವುದಾದರೆ ಅಡಿಕೆಯ ಬೆಳೆಯ ಮೇಲಿದ್ದ ವಾರ್ಷಿಕ ವಹಿವಾಟು ತೆರಿಗೆಯನ್ನು ತೆಗೆದು ಹಾಕಿರುವುದಕ್ಕೆ ಅಡಿಕೆ ಬೆಳಗಾರರ ಪರವಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇನ್ನು ಸರ್ಕಾರ ಪಠ್ಯಪುಸ್ತಕಗಳ ಮೇಲೆ ಶೇಕಡ 4 ರಷ್ಟು ತೆರಿಗೆಯನ್ನು ವಿಧಿಸಲು ಹೊರಟಿರುವುದು ನಮ್ಮ ದುರಾದೃಷ್ಟ, ಪ್ರಪಂಚದ ಯಾವುದೇ ರಾಷ್ಟ್ರದಲ್ಲಿಯೂ ಕೂಡ ಪಠ್ಯಪುಸ್ತಕಗಳ ಮೇಲೆ ತೆರಿಗೆಯನ್ನು ವಿಧಿಸಿರುವ ಉದಾಹರಣೆಗಳಿಲ್ಲ. ಸರ್ಕಾರ ಈ ವಿಚಾರದಲ್ಲಿ ತನ್ನ ಏಕಸ್ವಾಮ್ಯ ಮೆರೆಯಲು ಹೊರಟಿದೆಯೋ ಹೇಗೆ? ಇದರ ಬಗ್ಗೆ ನಾನು ಪ್ರಶ್ನೆ ಮಾಡಬೇಕಾಗುತ್ತದೆ. ಇನ್ನೊಂದೆಡೆ ಸರ್ಕಾರ ಕಿರಾಣಿ ಅಂಗಡಿ ಹಾಗೂ ಡಿಪಾರ್ಟ್‌ಮೆಂಟಲ್ ಸ್ಟೋರ್‌ಗಳಲ್ಲಿ ಬಿಯರ್ ಮತ್ತು ವೈನ್ ಮಾರಾಟ ಮಾಡಲು ಅನುಮತಿ ಕೊಡುತ್ತೇವೆಂದು ಹೇಳಿದ್ದೀರಲ್ಲಾ ಇದು ಎಷ್ಟು ಸಾರಿ ಈ ರೀತಿ ಮಾಡುತ್ತಿರುವುದು ನಿಮಗೆ ಸರಿ ಎನಿಸಿದರೆ ಅದು ನಿಮ್ಮ ಸರ್ಕಾರದ ಘೋಷಣೆಯಾಗಿದ್ದರೆ ನಮ್ಮದೇನೂ ಅಭ್ಯಂತರವಿಲ್ಲ. ಇವತ್ತು ಜನರಿಗೆ

ಒಂದು ಭ್ರಮೆಯನ್ನು ನಿರ್ಮಾಣ ಮಾಡತಕ್ಕಂತಹ ಈ ಬಜೆಟ್‌ನಲ್ಲಿ ಸತ್ವವೂ ಇಲ್ಲ, ಸತ್ಯವೂ ಇಲ್ಲ. ಈ ರೀತಿಯಾದ ಬೆಳವಣಿಗೆ ನಮ್ಮ ದುರಾದೃಷ್ಟವೆಂದು ಹೇಳುವುದಕ್ಕೆ ನಾನು ಬಯಸುತ್ತೇನೆ. ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ): ಮಾನ್ಯ ಅಧ್ಯಕ್ಷರೆ, 2001-2002ನೇ ಸಾಲಿನ ಆಯವ್ಯಯವನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಅರ್ಥ ಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣರವರು ಮಂಡಿಸಿದ್ದಾರೆ. ಇದರಲ್ಲಿ ಹಲವಾರು ಸುಧಾರಣೆಗಳನ್ನು ರೈತರಿಗೆ ಕೊಟ್ಟಿದ್ದೇವೆಂದು ಪ್ರಸ್ತಾಪವನ್ನು ಮಾಡಿದ್ದಾರೆ. ಅದೇ ರೀತಿ ಹಲವಾರು ಸುಧಾರಣೆಗಳನ್ನು ಮಾಡಿ ರಾಜ್ಯ ಸರ್ಕಾರವು ನಮ್ಮ ಕಾಫಿ ಬೆಳಗಾರರಿಗೆ ಸರ್ಕಾರ ಯಾವುದೇ ರಿಯಾಯಿತಿ ನೀಡದಿರುವ ಬಗ್ಗೆ ನನ್ನ ಅಸಮಾಧಾನವಿದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಕಾಫಿ ಬೆಳೆಗಾರರನ್ನು ಏಕೆ ಕಡೆಗಾಣಿಸಿದ್ದಾರೋ ನನಗೆ ತಿಳಿಯದಾಗಿದೆ. ಕಾಫಿ ಉದ್ಯಮ ಇಂದು ಸಂಕಷ್ಟದಲ್ಲಿದ್ದು, ಕಾಫಿ ಬೆಳೆಗಾರರು ತೀವ್ರ ತೊಂದರೆಗೆ ಒಳಗಾಗಿದ್ದಾರೆ, ಅವರ ಮೇಲೆ ಅನುಕಂಪ ತೋರಿಸಿ ಸರ್ಕಾರ ಈ ಬಗ್ಗೆ ಚಿಂತನೆ ಮಾಡಿ ಪರಿಹಾರ ನೀಡಬೇಕೆಂದು ಕೇಳುತ್ತೇನೆ. ಇನ್ನು ಪುಸ್ತಕಗಳ ಮೇಲೆ ಸರ್ಕಾರ ಶೇಕಡ 4 ರಷ್ಟು ತೆರಿಗೆಯನ್ನು ಹೆಚ್ಚಿಸಿರುವುದು ಸರಿಯಲ್ಲ, ಲೇಖಕರ, ಪ್ರಕಾಶಕರ ಮತ್ತು ಓದುಗರ ಹಿತದೃಷ್ಟಿಯಿಂದ ಪುಸ್ತಕಗಳ ಮೇಲೆ ಹೆಚ್ಚಿಸಿರುವ ಮಾರಾಟ ತೆರಿಗೆಯನ್ನು ಪುನರ್‌ಪರಿಶೀಲಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇನ್ನೊಂದು ಬೇಸರದ ಸಂಗತಿ ಎಂದರೆ, ಕಿರಾಣಿ ಅಂಗಡಿಗಳಲ್ಲಿ ಬಿಯರ್ ಹಾಗೂ ವೈನ್ ಮಾರಾಟ ಮಾಡಲು ಯಾವ ಉದ್ದೇಶಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಇದನ್ನು ತೆಗೆದುಕೊಂಡು ಬಂದಿದ್ದಾರೋ ಗೊತ್ತಿಲ್ಲ. ಕಿರಾಣಿ ಅಂಗಡಿಗಳಲ್ಲಿ ಬಿಯರ್‌ನ್ನು ಮಾರಾಟ ಮಾಡುವುದರಿಂದ ಹೆಣ್ಣುಮಕ್ಕಳು ಆ ಅಂಗಡಿಗೆ ಹೋಗಿ ಸಾಮಗ್ರಿಗಳನ್ನು ತೆಗೆದುಕೊಳ್ಳುವುದಕ್ಕೆ ಭಯಪಡುತ್ತಾರೆ. ಗಂಡಸರು ಅಂಗಡಿಗೆ ಹೋಗದಿರುವ ಸಂದರ್ಭದಲ್ಲಿ ಹೆಣ್ಣುಮಕ್ಕಳು ಹೋಗಬೇಕಾಗುತ್ತದೆ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮರು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಭ್ರಷ್ಟಾಚಾರದ ಬಗ್ಗೆ ಪ್ರಸ್ತಾಪವನ್ನು ಮಾಡಿದ್ದಾರೆ. ಅಣುರೇಣು ತೃಣಕಾಷ್ಠವೆಲ್ಲದರಲ್ಲೂ ಭಗವಂತನಾದ ಶ್ರೀ ಕೃಷ್ಣನು ಇದ್ದಾನೆ. ಆದರೆ ನಮ್ಮ ಈ ಕೃಷ್ಣ ಕನಿಷ್ಠ ರೈತರ ಪರವಾಗಿಯಾದರೂ ಇರಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಒಂದು ಮುಖ್ಯವಾದ ವಿಷಯವನ್ನು ತರಬಯಸುತ್ತೇನೆ, ಅದೇನೆಂದರೆ ಗ್ರಾಮಾಂತರ ಪ್ರದೇಶದಲ್ಲಿ ಶೌಚಾಲಯ ನಿರ್ಮಾಣಕ್ಕಾಗಿ ಒಂದು ಯೋಜನೆ ಇದೆ, ಆ ಯೋಜನೆಯ ಪ್ರಕಾರ ಒಂದು ಶೌಚಾಲಯ ನಿರ್ಮಾಣಕ್ಕೆ 8,070-00 ರೂಪಾಯಿಗಳನ್ನು ನಿಗದಿಮಾಡಿದ್ದಾರೆ. ಗ್ರಾಮಪಂಚಾಯಿತಿಯ ಒಬ್ಬ ಕಾರ್ಯದರ್ಶಿಯವರು 8,070-00 ರೂಪಾಯಿಗಳನ್ನು ಡ್ರಾ ಮಾಡಿ ಯಾವ ರೀತಿ ಖರ್ಚು ಹಾಕಿದ್ದಾರೆಂದರೆ, ತೆರಿಗೆ 630-00 ರೂಪಾಯಿಗಳು, ಇತರೆ ಖರ್ಚು 400-00, ಕಾರ್ಯದರ್ಶಿ ಹಾಗೂ ಅಧ್ಯಕ್ಷರಿಗೆ ಕೊಡಬೇಕಾದ ಬಾಬ್ತು 650-00 ರೂಪಾಯಿಗಳು, ತಾಲ್ಲೂಕು ಪಂಚಾಯಿತಿಗೆ 800-00 ರೂಪಾಯಿಗಳು, ಟ್ರಜರಿಗೆ 300-00 ರೂಪಾಯಿಗಳು, ಟೈಪಿಂಗ್‌ಗೆ 20-00

ರೂಪಾಯಿಗಳು, ಇತರೆ 50-00 ರೂಪಾಯಿಗಳು, ಕಾರ್ಯದರ್ಶಿಯವರಿಗೆ ಕೊಡಬೇಕಾದ ಹಿಂದಿನ ಬಾಕಿ 300-00 ರೂಪಾಯಿಗಳು ಒಟ್ಟಾರೆ 3,200-00 ರೂಪಾಯಿಗಳನ್ನು ವೆಚ್ಚ ಎಂದು ತೋರಿಸಿ ಆ ಹಣವನ್ನು ತೆಗೆದುಕೊಂಡು ಉಳಿದ 4,800-00 ರೂಪಾಯಿಗಳನ್ನು ಆ ಫಲಾನುಭವಿಗೆ ಕಳುಹಿಸಿಕೊಟ್ಟಿದ್ದಾರೆ. ಇಷ್ಟು ಹಣದಲ್ಲಿ ಅವನು ಶೌಚಾಲಯವನ್ನು ಕಟ್ಟುವುದಾದರೂ ಹೇಗೆ? ಇದೇ ಹಣದಲ್ಲಿ ಶೌಚಾಲಯವನ್ನು ಕಟ್ಟುವ ಕಂಟ್ರಾಕ್ಟರ್ ಕೂಡ ತನ್ನ ಲಾಭವನ್ನು ಇಟ್ಟುಕೊಳ್ಳುತ್ತಾನೆ. ಈ ರೀತಿಯಾಗಿ ವೆಚ್ಚ ಮಾಡಿರುವ ಪಟ್ಟಿಯನ್ನು ನಾನು ಒಂದು ತಿಂಗಳ ಹಿಂದೆ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯವರ ಸಹಿಯನ್ನೊಳಗೊಂಡ ಪಟ್ಟಿಯನ್ನು ಪಡೆದುಕೊಂಡಿದ್ದೇನೆ. ಆ ಶೌಚಾಲಯದ ಪರಿಸ್ಥಿತಿ ಏನಾಗಿದೆ ಎಂಬುದರ ಬಗ್ಗೆ ಏನ್ನೇನೂ ಹೇಳಬೇಕಾದ ಅವಶ್ಯಕತೆಯಿಲ್ಲವೆಂದು ಭಾವಿಸಿಕೊಂಡಿದ್ದೇನೆ. ನಂತರ ಮತ್ತೊಂದು ಉತ್ತಮ ಕೆಲಸ ಮಾಡಿರುವುದು ಅಂದರೆ, ಗ್ರಾಮಪಂಚಾಯಿತಿಗಳಿಗೆ ಅನುದಾನವನ್ನು ಜಾಸ್ತಿ ಮಾಡಿರತಕ್ಕದ್ದು. ಅದು ಬಹುಮುಖ್ಯವಾಗಿ ಆಗಬೇಕಾಗಿರತಕ್ಕ ಕೆಲಸ. ಅದು ನಾನು ಹೇಳಿದ ಕಾರ್ಯದರ್ಶಿಗಳ ಕೈಗೆ ಸಿಕ್ಕಿದರೆ ಆ ಹಣ ಏನಾಗುತ್ತದೋ ಗೊತ್ತಿಲ್ಲ. ಗ್ರಾಮ ಪಂಚಾಯಿತಿ, ಕೃಷಿಗೆ ಉತ್ತಮ ಕೆಲಸ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಎಲ್ಲರಿಗೂ ರಿಯಾಯಿತಿ ತೋರಿಸಿದ್ದಾರೆ. ಆದರೆ ಕಾಫಿ ಬೆಳೆಗಾರರನ್ನು ಕೈಬಿಟ್ಟಿದ್ದಾರೆ. ಅನೇಕ ಸಾರಿ ಅವರನ್ನು ಭೇಟಿ ಮಾಡಿ ಕಾಫಿ ಬೆಳೆಗಾರರ ಕಷ್ಟಸುಖಗಳನ್ನು ಹೇಳಿಕೊಂಡಿದ್ದೇವೆ. ಕಾಫಿ ಬೆಳೆಗಾರರು ಅತ್ಯಂತ ಕಷ್ಟದಲ್ಲಿದ್ದಾರೆ. ಕಾಫಿ ವಾಣಿಜ್ಯ ಬೆಳೆಯಾದರೂ ಕೃಷಿಯ ಬೆಳೆಗಳಿಗೆ ಹೋಲಿಸಿದರೆ, ಪ್ರತಿ ವರ್ಷ ಕಾಫಿ ಬೆಳೆ ಬರಲಿ ಬಿಡಲಿ ಕಾಫಿಗಿಡವನ್ನು ಸಾಕಬೇಕಾಗುತ್ತದೆ. ಸರಿಯಾಗಿ ಕಾಫಿಗಿಡವನ್ನು ಸಾಕಿದರೆ, 75 ರಿಂದ 100 ವರ್ಷ ಬಾಳುತ್ತದೆ. ಇವತ್ತಿನ ಪರಿಸ್ಥಿತಿಯಲ್ಲಿ ಒಂದು ಎಕರೆಯಲ್ಲಿ ಫಸಲು ತೆಗೆದುಕೊಳ್ಳಬೇಕಾದರೆ ಕನಿಷ್ಟ 30 ಸಾವಿರ ರೂಪಾಯಿ ಖರ್ಚಾಗುತ್ತದೆ. ಒಂದು ರೇಟನ್ನು ಕೊಟ್ಟು ಕಳೆದ ಸಾರಿ ಅನುಕೂಲ ಮಾಡಿಕೊಟ್ಟಿದ್ದಾರೆ. ಇನ್‌ಕಂ ಟ್ಯಾಕ್ಸ್ ನೀವು ಹೇಳಿದ ಹಾಗೆ ಕಟ್ಟಲಿಕ್ಕೆ ಪ್ಲಾಂಟರ್ಸ್ ಒಪ್ಪಿಕೊಂಡಿದ್ದಾರೆ. ಹಿಂದೆ 50 ಕೆ.ಜಿ. ಮೂಟೆಗೆ ಎರಡು ಸಾವಿರ ರೂಪಾಯಿ ಕ್ರಯ ಇದೆ. ಇದರ ಜೊತೆಗೆ 25 ಎಕರೆಗೆ 9 ಸಾವಿರ, 50 ಎಕರೆಗೆ 50 ಸಾವಿರ, 75 ಎಕರೆಗೆ 87 ಸಾವಿರ, 100 ಎಕರೆಗೆ 1 ಲಕ್ಷದ 15 ಸಾವಿರ, 120 ಎಕರೆಗೆ ಒಂದು ಲಕ್ಷದ 50 ಸಾವಿರ, 150 ಎಕರೆಗೆ ಒಂದು ಲಕ್ಷದ 78 ಸಾವಿರ, ಬೆಳೆಯ ಮೇಲೆ ನಾವು ಟ್ಯಾಕ್ಸನ್ನು ಕಟ್ಟಬೇಕಾಗಿತ್ತು ಕಟ್ಟುತ್ತಿದ್ದೇವೆ. ಏಳು ಸಾವಿರ ರೂಪಾಯಿ ಕ್ರಯ ಇದ್ದಂತಹ ಸಂದರ್ಭದಲ್ಲಿ ದರ ಅವೊತ್ತಿಗೆ ಸರಿಯಿತ್ತು. ಇವತ್ತು ದರ ಎರಡು ಸಾವಿರ ರೂಪಾಯಿಗೆ ಇಳಿದಿರುವುದರಿಂದ ಅದರಂತೆ ಟ್ಯಾಕ್ಸ್ ಕೆಳಗೆ ಇಳಿಯಬೇಕು. ಕಾಫಿ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುವುದರಿಂದ, ರಾಜ್ಯ ಸರ್ಕಾರ ಮಾಡಬೇಕಾದ ಕನಿಷ್ಟ ಸವಲತ್ತುಗಳನ್ನು ಒದಗಿಸಿಕೊಟ್ಟರೆ ಅನುಕೂಲವಾಗುತ್ತದೆ. ಬೆಲೆ ಬಂದಾಗ ಎಕರೆವಾರು ಟ್ಯಾಕ್ಸ್ ಫಿಕ್ಸ್ ಮಾಡಿದ್ದೀರಿ. ಕೊನೆಯ ಪಕ್ಷ ಶೇಕಡ 50 ರಷ್ಟು ಒಂದು ವರ್ಷದ ಮಟ್ಟಿಗಾದರೂ ಟ್ಯಾಕ್ಸ್ ಕಡಿಮೆ ಮಾಡಿ. ಬೆಲೆ ಬಂದಾಗ ಟ್ಯಾಕ್ಸ್ ಹೆಚ್ಚಿಸುವುದಕ್ಕೆ ಅವಕಾಶವಿದೆ. ಸಹಕಾರಿ ಬ್ಯಾಂಕುಗಳಲ್ಲಿ ಇನ್ನಿತರೆ ಬ್ಯಾಂಕುಗಳಲ್ಲಿ ಬೆಳೆಗಾರರು ಮಾಡಿರತಕ್ಕ ಸಾಲವನ್ನು ತೀರಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಬೆಳೆಗಾರರ ತೆಗೆದುಕೊಂಡಿರುವ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಮಾಡಿ. ಕಾಫಿ

ಬೆಳೆಗಾರರಿಗೆ ಸಾಲ ಕೊಡತಕ್ಕ ಸೊಸೈಟಿ ಮತ್ತು ಬ್ಯಾಂಕುಗಳು ರಾಷ್ಟ್ರೀಕೃತ ಬ್ಯಾಂಕುಗಳು ಸಾಲ ಇದ್ದರೂ ಸಾಲ ಕೊಡುವ ಬಗ್ಗೆ ಚಿಂತನೆ ಹರಿಸಿದ್ದಾರೆ. ಮೂರು ತರಹ ಸಾಲ ಕೊಡುತ್ತಾರೆ. ಆಸ್ತಿ, ಬೆಳೆ, ಜಮೀನಿನ ಮೇಲೆ, ಜಾಮೀನಿನ ಮೇಲೆ ಕೊಟ್ಟಂತಹ ಸಾಲಗಳು ಇದ್ದರೆ ಅವುಗಳನ್ನು ಯಾವುದಾದರೂ ಒಂದು ದೀರ್ಘಾವಧಿ ಸಾಲವನ್ನಾಗಿ ಮಾಡಿಕೊಂಡು ಸಾಲ ಕೊಡುವ ವ್ಯವಸ್ಥೆ ಮಾಡುತ್ತಿದ್ದಾರೆ. ಅದೇ ರೀತಿಯಲ್ಲಿ ರಾಷ್ಟ್ರೀಕೃತ ಬ್ಯಾಂಕಿನವರು ಚಿಂತನೆ ಮಾಡುತ್ತಿದ್ದಾರೆ. ಪರ್ಚೇಸ್ ಟ್ಯಾಕ್ಸ್ ನಾಲ್ಕು ಪರ್ಸೆಂಟ್ ಏನಿದೆ ಅದನ್ನು ತಾತ್ಕಾಲಿಕವಾಗಿ ತಡೆಹಿಡಿದು ಬಿಟ್ಟುಕೊಡಬೇಕೆಂದು ಕೇಳುತ್ತೇನೆ. ಕೆಲವು ಸವಲತ್ತುಗಳನ್ನು ಕೊಟ್ಟು ಕಾಫಿ ಬೆಳೆಗಾರರಿಗೆ ಸ್ವಲ್ಪ ಅನುಕಂಪವನ್ನು ತೋರಿಸಿ. ಅಡಿಕೆ ಬೆಳೆಗಾರರಿಗೆ ರಿಯಾಯಿತಿಯನ್ನು ತೋರಿಸಿದ್ದೀರಿ. ಎಲ್ಲಾ ಬೆಳೆಗಾರರ ಬಗ್ಗೆ ಅನುಕಂಪವನ್ನು ತೋರಿಸಿದ್ದೀರಿ ಆದರೆ ನಾವೇನು ಮಾಡಿದ್ದೇವೆ? ಕಾಫಿ ಬೆಳೆಗಾರರು ಆಗರ್ಭ ಶ್ರೀಮಂತರೆಂದು ಹೇಳುವಂತಹ ಒಂದು ಕಾಲ ಇತ್ತು. ಬ್ಯಾಂಕಿನವರು ಕಣ್ಣುಮುಚ್ಚಿಕೊಂಡು ಸಾಲ ಕೊಡುತ್ತಿದ್ದರು. ಇವತ್ತಿನ ಪರಿಸ್ಥಿತಿಯಲ್ಲಿ ಬ್ಯಾಂಕಿನವರು ಪ್ಲಾಂಟರ್ ಯಾರಾದರೂ ಬರುತ್ತಿದ್ದಾರೆಂದರೆ ಮ್ಯಾನೇಜರ್ ಬ್ಯಾಂಕಿನ ಬಾಗಿಲು ಹಾಕಿಸುತ್ತಾರೆ. ಆ ಮಟ್ಟಿಗೆ ನಮ್ಮ ಪರಿಸ್ಥಿತಿ ಬಂದಿದೆ. ಸಣ್ಣಪುಟ್ಟ ಸಹಾಯ ಮಾಡುವುದರ ಜೊತೆಗೆ, ಕೇಂದ್ರ ಸರ್ಕಾರಕ್ಕೆ ಹೋಗತಕ್ಕ ಸಂದರ್ಭದಲ್ಲಿ ತಾವು ನಮ್ಮ ಸಂಗಡ ಬಂದು ನಮ್ಮ ಕಷ್ಟವನ್ನು ಹಾಗೂ ಕಾಫಿ ಬೆಳೆಗಾರರ ತೊಂದರೆಯನ್ನು ನಿವಾರಿಸಿ. ಕರ್ನಾಟಕ ಉತ್ತಮ ಕಾಫಿ ಬೆಳೆಯುತಕ್ಕ ರಾಜ್ಯ. ಈ ಕಾಫಿ ಉದ್ಯಮವನ್ನು ಉಳಿಸಿ, ಲಕ್ಷಾಂತರ ಕಾರ್ಮಿಕರು, ವ್ಯಾಪಾರಸ್ಥರು ಎಲ್ಲಾ ವರ್ಗದವರಿಗೆ ಅನುಕೂಲವಾಗುತ್ತದೆ. ಈ ಉದ್ಯಮ ಹಾಳಾಗದಂತೆ ತಮ್ಮ ಸಹಾಯ ಮತ್ತು ಸಹಕಾರ ಕೊಡಬೇಕೆಂದು ಹೇಳುತ್ತೇನೆ. ನಾನು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಶಿವಪ್ಪನವರು 10 ನಿಮಿಷ ಸಮಯ ತೆಗೆದುಕೊಂಡು 9 ನಿಮಿಷದಲ್ಲಿ ಮುಗಿಸಿದ್ದಾರೆ. ಎಲ್ಲರೂ ಹಾಗೆಯೇ ಮಾಡಬೇಕು.

ಶ್ರೀ ಡಿ.ವಿ. ಸದಾನಂದಗೌಡ: ಅದಕ್ಕೆ ತಾವು ಮಾನ್ಯ ಬೈರೇಗೌಡರು ಮಾತನಾಡುವುದಕ್ಕೆ ಮೊದಲು ಶಿವಪ್ಪನವರನ್ನು ಮಾತನಾಡಲಿಕ್ಕೆ ಹೇಳಿದ್ದು ಎಂದು ಕಾಣುತ್ತದೆ.

ಅಧ್ಯಕ್ಷರು: ಏನಾಗುತ್ತದೆಂದರೆ ಬೈರೇಗೌಡರು ಮತ್ತು ಅಧ್ಯಕ್ಷರು ಕೋಲಾರ ಜಿಲ್ಲೆಯವರೆಂದು ಹೇಳುತ್ತಾರೆ ಅದಕ್ಕೆ.

+ ಶ್ರೀ ಸಿ. ಬೈರೇಗೌಡ (ವೇಮಗಲ್): ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಅರ್ಥ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು 2001-2002ನೇ ಸಾಲಿನ ಆಯವ್ಯಯವನ್ನು ಮಾನ್ಯ ಸಭೆಯ ಒಪ್ಪಿಗೆಗಾಗಿ ಇಟ್ಟಿದ್ದಾರೆ. ನಾನು ಆಯವ್ಯಯದ ಬಗ್ಗೆ ಮಾತನಾಡುವುದಕ್ಕೆ ಮೊದಲು ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಸದನದ ಸಭಾಧ್ಯಕ್ಷರಾಗಿದ್ದರು. ಅವರು ಅಧ್ಯಕ್ಷರಾಗಿದ್ದ ಕಾಲದಲ್ಲಿ ಸದನವನ್ನು ಒಂದು ವರ್ಷದಲ್ಲಿ ಕನಿಷ್ಠ ನೂರು ದಿವಸ ನಡೆಸುತ್ತೇವೆಂದು ಹೇಳಿದ್ದಾರೆ. ಆಗ ನಾನು ವಿರೋಧ ಪಕ್ಷದಲ್ಲಿದ್ದೆ. ಇದೇ ಪ್ರಸ್ತಾಪವನ್ನು ಅವರು ಮುಖ್ಯಮಂತ್ರಿಗಳಾದ ಮೇಲೆ ಅವರ ಗಮನಕ್ಕೆ ತಂದಿದ್ದೇನೆ.

ನೂರು ದಿನ ಸದನ ನಡೆಸುತ್ತೇವೆಂದು ಹೇಳಿದರು. ಈಗ ಅವರು ಅಧಿಕಾರಕ್ಕೆ ಬಂದು ಒಂದೂವರೆ ವರ್ಷಗಳಾಯಿತು. ಒಂದೂವರೆ ವರ್ಷದಲ್ಲಿ ಎಲ್ಲಾ ಸೇರಿಸಿದರೆ ನೂರು ದಿವಸ ಆಗುತ್ತಿಲ್ಲ. ಹೊಸ ಆರ್ಥಿಕ ವರ್ಷ ಪ್ರಾರಂಭವಾಗಿದೆ. ಅದರಲ್ಲೂ ಬಹುಮುಖ್ಯವಾದ ಅಧಿವೇಶನ ಬಜೆಟ್ ಅಧಿವೇಶನ. ಇಂತಹ ಅಧಿವೇಶನದಲ್ಲಿ ನೀವು ಹತ್ತು ನಿಮಿಷದಲ್ಲಿ ಮುಗಿಸಬೇಕು, ಐದು ನಿಮಿಷದಲ್ಲಿ ಮುಗಿಸಬೇಕೆಂದು ಹೇಳುತ್ತಿದ್ದಾರೆ. ಈ ರಾಜ್ಯದ ಆಗುಹೋಗುಗಳನ್ನು ಈ ರಾಜ್ಯದಲ್ಲಿ ಆಡಳಿತ ಯಾವ ರೀತಿಯಲ್ಲಿ ನಡೆಯುತ್ತಿದೆ, ರಾಜ್ಯದ ಅಭಿವೃದ್ಧಿ ಯಾವ ದಿಕ್ಕಿನಲ್ಲಿ ನಡೆಯುತ್ತಿದೆ ಎಂಬುದರ ಬಗ್ಗೆ ಈ ಸದನದಲ್ಲಿ ಕೂಲಂಕುಷವಾಗಿ ಚರ್ಚೆಯಾಗಬೇಕು. ಚರ್ಚೆಯ ಪ್ರತಿಫಲ ರಾಜ್ಯದ ಜನತೆಗೆ ಹೋಗಬೇಕು. ಮತ್ತು ಇದು ಅವರಿಗೆ ಗೊತ್ತಾಗಬೇಕು. ಈಗ ಏನಾಗುತ್ತಿದೆ ಅಂದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾರ್ವಭೌಮ ಪ್ರಜೆಗಳಿಗೆ ಗೊತ್ತಾಗುತ್ತಿದೆಯೆ? ಅದಕ್ಕೆ ಅವಕಾಶ ಇಲ್ಲದ ರೀತಿಯಲ್ಲಿ 26ನೇ ತಾರೀಖು ಆಯವ್ಯಯವನ್ನು ಮಂಡಿಸುತ್ತಾರೆ, 30ನೇ ತಾರೀಖಿಗೆ ಅದು ಮುಕ್ತಾಯವಾಗಬೇಕೆಂದು ನಮ್ಮ ಮೇಲೆ ಒತ್ತಡವನ್ನು ತರುತ್ತಿದ್ದಾರೆ. ಸರ್ಕಾರ ಸಹ ನೇರವಾಗಿ ತಮ್ಮ ಮೂಲಕ ಒತ್ತಡವನ್ನು ತರುತ್ತಿದ್ದಾರೆ. ಈ ಸಂದರ್ಭದಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದಿದ್ದರೂ ಬಹಳ ಗೊಂದಲಮಯವಾದ ಪರಿಸ್ಥಿತಿ ನನ್ನಲ್ಲಿ ಉಂಟಾಗುತ್ತಿದೆ. ಇವತ್ತು ಆಯವ್ಯಯವನ್ನು ಮುಖ್ಯಮಂತ್ರಿಗಳು ಮಂಡಿಸಿದ್ದಾರೆ. ಅವರು ಒಂದು ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಯಾರೇ ಆದರೂ ಕೂಡ ಸದನವನ್ನು ಒತ್ತೆಗೆ ಇಡಲಿಕ್ಕೆ ಅವಕಾಶ ನೀಡಲಾರೆ ಎಂದು ಹೇಳಿದ್ದಾರೆ. ಅಧಿವೇಶನ ಪ್ರಾರಂಭವಾದ ಎರಡು ಮೂರು ದಿವಸಗಳಲ್ಲಿ ಸದನವನ್ನು ಒತ್ತೆಯನ್ನಾಗಿ ಆ ಕಡೆ ಕುಳಿತಿರತಕ್ಕವರು ನಮ್ಮ ಎದುರುಗಡೆ ಕುಳಿತಿರತಕ್ಕವರು ಆಡಳಿತ ಪಕ್ಷದವರು ಇಟ್ಟುಕೊಂಡರು. ಈ ಸದನದಲ್ಲಿ ಚರ್ಚೆ ನಡೆಯುತಕ್ಕ ಸಂದರ್ಭದಲ್ಲಿ ನಡೆದಿರತಕ್ಕ ಘಟನೆಗಳನ್ನು ಕಾಂಗ್ರೆಸ್ ಪಕ್ಷದವರು ಮುಖ್ಯಮಂತ್ರಿಗಳಾಗಿರತಕ್ಕ ಸಂದರ್ಭದಲ್ಲಿ ಎಂದೂ ನಡೆಯದಿರತಕ್ಕ ರೀತಿಯಲ್ಲಿ ಸದನದ ಕಾರ್ಯಕಲಾಪಗಳು ಈ ಅಧಿವೇಶನದಲ್ಲಿ ಪ್ರಾರಂಭವಾಯಿತು. ಇದು ಎಷ್ಟರಮಟ್ಟಿಗೆ ಈ ಸರ್ಕಾರಕ್ಕೆ ಶೋಭಾಯಮಾನ ಎನ್ನುವುದನ್ನು ರಾಜ್ಯದ ಜನತೆ ತೀರ್ಮಾನ ಮಾಡಬೇಕಾಗುತ್ತದೆ. ಮುಖ್ಯಮಂತ್ರಿಗಳಿಗೆ ಎಲ್ಲಾ ಸ್ಥಾನಗಳಲ್ಲಿ ಕುಳಿತು ಕೆಲಸ ಮಾಡಿರತಕ್ಕ ಅನುಭವವಿದೆ. ಇದನ್ನು ನಾನು ಅವರಿಗೆ ಬಿಡುತ್ತೇನೆ. ಈ ರೀತಿ ಸದನದ ಕಾರ್ಯಕಲಾಪಗಳನ್ನು ನಡೆಸಲಾಗಿದೆ. ಇದು ಅವರಿಗೆ ಶೋಭೆ ತರುತ್ತದೆಯೇ ಎಂಬುದನ್ನು ಅವರಿಗೆ ಬಿಡುತ್ತೇನೆ. ನಮ್ಮ ಪರವಾಗಿ ಹೇಳುವುದಾದರೆ ಇದು ಸರಿಯಾದುದಲ್ಲ. ಇದು ಸರಿಯಾದ ಕ್ರಮವಲ್ಲವೆಂದು ಕಠಿಣವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಆಯವ್ಯಯವನ್ನು ನಮ್ಮ ಮುಂದಿಟ್ಟಿದ್ದಾರೆ. ಪ್ರಾರಂಭದಲ್ಲೇ ಅವರು ಕೆಲವು ಮಾತುಗಳನ್ನು ಹೇಳಿದ್ದಾರೆ. ಅವೆಲ್ಲವನ್ನೂ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈ ಸದನದಲ್ಲಿ ಆಯವ್ಯಯ ಮಂಡಿಸುವುದಕ್ಕೆ ಮೊದಲೇ ಬಹಳ ಚರ್ಚೆಯಾಗಿದ್ದ ವಸ್ತು ಎಂದರೆ, ಈ ಅಧಿವೇಶನದಲ್ಲಿ ಇಲ್ಲದಿದ್ದರೂ ಹಿಂದಿನ ಅಧಿವೇಶನದಲ್ಲಿ ಬಹಳ ತೀವ್ರವಾಗಿ, ಈ ಸಭೆಯ ಚರಿತ್ರೆಯಲ್ಲೇ ಯಾವತ್ತೂ ಕೂಡ ರೈತರ ವಿಚಾರ ಇಷ್ಟು ದೀರ್ಘವಾಗಿ ಚರ್ಚೆಯಾಗಿರಲಿಲ್ಲ. ಕಳೆದ ಅಧಿವೇಶನದಲ್ಲಿ ಹೀಗೆ ಚರ್ಚೆಯಾಗಿತ್ತು. ಈ ಅಧಿವೇಶನದಲ್ಲಿ ಕೂಡ ಚರ್ಚೆಯಾಗಿದೆ. ಚರ್ಚೆಗೆ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ

ಮಧ್ಯ ಪ್ರವೇಶ ಮಾಡಿ ನಾವು ರೈತರ ಪರಿಸ್ಥಿತಿ ಬಗ್ಗೆ ಒತ್ತಾಯ ಮಾಡಿದಾಗ ಬಜೆಟ್‌ನಲ್ಲಿ ನಾವು ಮಂಡಿಸುತ್ತಿದ್ದೇವೆ, ಅದನ್ನು ನೀವು ನೋಡಿ ಎನ್ನತಕ್ಕಂಥ ಮಾತನ್ನು ಹೇಳಿದ್ದರು. ಏನಿದೆ ಸ್ವಾಮಿ ಇದರಲ್ಲಿ? ಇವತ್ತು ರಾಜ್ಯದಲ್ಲಿ ರೈತನ ಪರಿಸ್ಥಿತಿ ಹೇಗಿದೆ ಎಂದರೆ ನನ್ನ ಕ್ಷೇತ್ರದಲ್ಲೇ ನಾಲ್ಕು ಜನರು ಸತ್ತಿದ್ದಾರೆ. ಕೋಲಾರ ಎಂದರೆ ಅಲ್ಲಿರುವ ಜನ ಕಷ್ಟ ಸಹಿಷ್ಣುಗಳು. ಹಾಗಿದ್ದರೂ ಈ ಪರಿಸ್ಥಿತಿ ಉಂಟಾಗಿದೆ. ರಾಜ್ಯದ ಉತ್ತರ ಕರ್ನಾಟಕದಲ್ಲಿ 'ಪ್ರತಿದಿನ ಸಾಯುವವರಿಗೆ ಅಳುವವರು ಯಾರು?' ಎನ್ನುವಂತೆ ಇವತ್ತು ರೈತನ ಪರಿಸ್ಥಿತಿ ಬಂದಿದೆ. ಇವರು ಏನೊಂದು ರೀತಿಯ ಆಶಾಭಾವನೆಯನ್ನು ಮೂಡಿಸಿದ್ದರು ಮತ್ತು ಇವತ್ತು ಬಜೆಟ್‌ನಲ್ಲಿ ಕೊಟ್ಟಿರತಕ್ಕಂಥಾದ್ದು ಏನೆಂದು ನೋಡಿದರೆ 'ಮಣ್ಣಿಗೇ ಹೋಗತಕ್ಕಂಥ ರೈತರಿಗೆ ಮಣ್ಣು ಕೊಟ್ಟಿರತಕ್ಕದ್ದು' ಇದು. ಇವರು ಎಷ್ಟು ನಿರ್ದಯಿಗಳಾಗಿದ್ದಾರೆ ಎಂದರೆ ಸತ್ತವರ ಬಗ್ಗೆ ಒಂದು ಸಹಾನುಭೂತಿಯ ಮಾತಾದರೂ ಇದೆಯಾ? ಇಂತಹ ಒಂದು ಪರಿಸ್ಥಿತಿ ರಾಜ್ಯದಲ್ಲಿ ಉಂಟಾಗಿದೆ, ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎನ್ನತಕ್ಕಂಥ ಒಂದು ಸಹಾನುಭೂತಿಯ ಮಾತಾದರೂ ಅವರ ಭಾಷಣದಲ್ಲಿ ಬರಬೇಕಿತ್ತು. ಆ ಸಹಾನುಭೂತಿಯ ಮಾತೂ ಕೂಡ ಇಲ್ಲ. ಕೊಡುತ್ತಾರೋ, ಬಿಡುತ್ತಾರೋ ಆ ಪ್ರಶ್ನೆ ಆಮೇಲೆ. ಆದರೆ ಮಾತಿನಲ್ಲಿಯಾದರೂ ಕೂಡ ಇಂತಹ ದುರ್ಘಟನೆಗಳು ರಾಜ್ಯದಲ್ಲಿ ನಡೆಯುತ್ತಿದೆ, ಇದು ನಡೆಯಬಾರದಾಗಿತ್ತು, ಯಾರು ಈ ಪರಿಸ್ಥಿತಿಗೆ ಒಳಗಾಗಿದ್ದಾರೆ ಅವರಿಗೆ ನಾವು ಸಹಾನುಭೂತಿಯನ್ನು ವ್ಯಕ್ತಪಡಿಸುತ್ತೇವೆ, ಸಂತಾಪಸೂಚಿಸುತ್ತೇವೆ ಎನ್ನುವ ಮಾತಾದರೂ ಅವರ ಬಾಯಲ್ಲಿ ಬರಬೇಕಿತ್ತು. ಅದೂ ಕೂಡ ಇಲ್ಲ. ಇದು ರೈತರ ಪಾಲಿಗೆ ನಿರ್ದಯವಾಗಿರತಕ್ಕಂಥ ಬಜೆಟ್ ಎಂದು ಬಹಳ ಸಿಟ್ಟಿನಿಂದ ನಾನು ಹೇಳುವುದಕ್ಕೆ ಇಚ್ಛಿಪಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ಈ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ಮುಖ್ಯಮಂತ್ರಿಗಳು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅದು ಏನೆಂದರೆ ರೈತರಿಗೆ ಈಗ ನೂರು ಕೋಟಿ ರೂಪಾಯಷ್ಟು ನಾವು ಮಾರ್ಕೆಟ್ ಇಂಟರ್‌ವೆನ್‌ಷನ್ ಸ್ಕೀಮ್‌ನಲ್ಲಿ ಇಟ್ಟಿದ್ದೇವೆ ಮತ್ತು ಇನ್ನೂರು ಕೋಟಿ ರೂಪಾಯಿಗಳಿಗೆ ಈ ವರ್ಷ ತೆಗೆದುಕೊಂಡು ಹೋಗುತ್ತೇವೆ. ಅದನ್ನು ನಾಲ್ಕುನೂರು ಕೋಟಿ ರೂಪಾಯಿಗಳವರೆಗೆ ತೆಗೆದುಕೊಂಡು ಹೋಗುತ್ತೇವೆ ಎನ್ನತಕ್ಕಂಥ ಮಾತನ್ನು ಸಹ ಹೇಳಿದ್ದಾರೆ. ಸ್ವಾಮಿ, ನಮ್ಮ ಮುಖ್ಯಮಂತ್ರಿಗಳಿಗೆ ಬಹಳ ಪ್ರಿಯವಾಗಿರತಕ್ಕಂಥಾದ್ದು ಏನೆಂದರೆ ಮಾತೆತ್ತಿದರೆ ಅದಕ್ಕೊಂದು ಆಯೋಗವನ್ನು ರಚನೆ ಮಾಡತಕ್ಕದ್ದು. ಇಲ್ಲ ಟಾಸ್ಕ್‌ಫೋರ್ಸ್‌ನ್ನು ರಚನೆ ಮಾಡತಕ್ಕದ್ದು ಇವರಿಗೆ ಬಹಳ ಪ್ರಿಯವಾಗಿರತಕ್ಕಂಥಾದ್ದು. ಈಗಾಗಲೇ ನಮ್ಮ ಸ್ನೇಹಿತರು ಹೇಳಿದರು ಏನೆಂದರೆ ಟಾಸ್ಕ್‌ಫೋರ್ಸ್ ಮತ್ತೆ ಈ ಆಯೋಗಗಳೆಲ್ಲಾ ರಚನೆಯಾದ ಮೇಲೆ ಇಲ್ಲಿ ಇಷ್ಟು ಜನ ಮಂತ್ರಿಗಳಿಗೆ ಏನು ಕೆಲಸ ಇದೆ? ಮತ್ತೊಂದು ಕೂಡ ತಾವು ಹೇಳಿದ್ದೀರಿ. ಅದು ಏನೆಂದರೆ ಮಂತ್ರಿಗಳ ಕೆಲಸಕಾರ್ಯಗಳನ್ನು ನಾನು ಮಾನಿಟರಿಂಗ್ ಮಾಡುತ್ತೇನೆ, ಮೌಲ್ಯಮಾಪನ ಕೂಡ ಮಾಡುತ್ತೇನೆ ಎನ್ನತಕ್ಕಂಥ ಮಾತೂ ಕೂಡ ನಿಮ್ಮಿಂದ ಬಂದಿದೆ. ಏನು ಸ್ವಾಮಿ, ಮೌಲ್ಯಮಾಪನ ಮಾಡಿದ್ದೀರಿ? ಹಾಗಾದರೆ ನೀವು ಅವರಿಗೆ ಗೊತ್ತಿಲ್ಲದೇನೆ, ಈ ರಾಜ್ಯದ ಜನತೆಗೆ ಗೊತ್ತಿಲ್ಲದೇನೆ ಮೌಲ್ಯಮಾಪನ ಮಾಡಿ ನಿಮ್ಮ ಮಂತ್ರಿಮಂಡಲದಲ್ಲಿರತಕ್ಕಂಥ ಸದಸ್ಯರೆಲ್ಲರೂ ಕೂಡ ನಿಮ್ಮ ಮಟ್ಟಕ್ಕೆ ಬರದೇಇರತಕ್ಕವರು ಎನ್ನತಕ್ಕಂಥ ಮಾಹಿತಿ ತಮಗೆ ದೊರೆತಮೇಲೆ ಆದರಿಂದಲೇ ನೀವು ಈ ಆಯೋಗಗಳನ್ನು ಮತ್ತು ಅವುಗಳ ಜೊತೆಗೆ

ಟಾಸ್ಕ್‌ಫೋರ್ಸ್‌ಗಳನ್ನು ರಚನೆ ಮಾಡುತ್ತಿದ್ದೀರಿ ಎನ್ನತಕ್ಕಂಥ ಭಾವನೆ ನನ್ನಲ್ಲಿ ಬಂದೇ ಬರುತ್ತದೆ. ಸ್ವಾಮಿ, ಎಷ್ಟೊಂದು ಆಯೋಗಗಳು ಎಂದರೆ ಲೆಕ್ಕವಿಲ್ಲದಷ್ಟು ಮಾಡಿದ್ದಾರೆ. ಹಾಗೆಯೇ ಒಂದೊಂದು ಇಲಾಖೆಗೆ ಸಂಬಂಧಪಟ್ಟ ಹಾಗೆ ಮೂರು-ನಾಲ್ಕು ಟಾಸ್ಕ್‌ಫೋರ್ಸ್‌ಗಳನ್ನು ಮಾಡಿದ್ದೀರಿ. ಅವರು ಕೊಟ್ಟಿರತಕ್ಕಂಥ ವರದಿಗಳು ಏನು? ಯಾವುದನ್ನು ನೀವು ಅನುಷ್ಠಾನ ಮಾಡಿದ್ದೀರಿ? ಅನುಷ್ಠಾನ ಮಾಡತಕ್ಕಂಥ ಪ್ರಯತ್ನವಾದರೂ ಆಗಿದೆಯಾ? ಈ ಟಾಸ್ಕ್‌ಫೋರ್ಸ್‌ಗಳನ್ನು ಮಾಡಿ, ಆಯೋಗಗಳನ್ನು ರಚನೆ ಮಾಡುವುದಕ್ಕೆ ಸರ್ಕಾರದಿಂದ ಖರ್ಚಾಗಿಸತಕ್ಕಂಥಾದ್ದು ಎಷ್ಟು ಎಂಬುದರ ಬಗ್ಗೆ ತಾವು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಹೇಳಬೇಕಾಗುತ್ತದೆ, ಅವರಿಗಾಗಿ ಮಾಡಿರುವ ಎಲ್ಲಾ ವಿಧದ ಖರ್ಚುಗಳು, ಸಂಬಳ, ಸಾರಿಗೆ, ಅವರ ಓಡಾಟದ ಖರ್ಚು, ಅವರ ಟಿ.ಎ/ಡಿ.ಎ. ಮತ್ತೊಂದಕ್ಕೆ ಎಷ್ಟೊಂದು ಸಾರ್ವಜನಿಕರ ಹಣ ಖರ್ಚಾಗಿದೆ ಎಂದು ನೀವು ಹೇಳಬೇಕಾಗುತ್ತದೆ. ದಯಮಾಡಿ ಈ ಕೆಲಸವನ್ನು ಮಾಡಬೇಕೆಂದೂ ಕೂಡ ನಾನು ಒತ್ತಾಯ ಮಾಡುತ್ತೇನೆ. ಕಾರಣ ಏನೆಂದರೆ ಸರ್ಕಾರ ಎಂದರೆ It cannot be an old-age home and it cannot also be a pinjrapole ರಿಟೈರ್ ಆಗಿರತಕ್ಕಂಥವರಿಗೆ, ವಯಸ್ಸಾಗಿರತಕ್ಕಂಥವರಿಗೆ ಅವರನ್ನು ಇಲ್ಲಿ ಸೇರಿಸುವುದಕ್ಕೆ ಅವಕಾಶ ಇಲ್ಲ. It cannot be an old-age home and it cannot also be a pinjrapole ಇವತ್ತು ನೋಡಿದರೆ ಈ ರೀತಿಯಾದಂಥ ಭಾವನೆ ನನಗಾದರೂ ಕೂಡ ಬರುತ್ತಿದೆ. It is neither an old-age home nor a pinjrapole ಇದೆಲ್ಲ ಶಕ್ತಿಯುತವಾಗಿ ಕೆಲಸ ಮಾಡಬೇಕಾಗಿರತಕ್ಕಂಥಾದ್ದು.

Sri B. Somashekar: It is both a pinjrapole and old-age home

Mr. Speaker: No conversation between two members.

ಶ್ರೀ ಸಿ. ಬೈರೇಗೌಡ: ನಮ್ಮ ಸ್ನೇಹಿತರು ಸೂಚನೆ ಮಾಡಿರತಕ್ಕಂಥಾದ್ದು....

ಶ್ರೀ ಎಂ. ಮಹದೇವ್: ಬೈರೇಗೌಡರೇ, ಇಬ್ಬರೂ ಒಂದೊಂದು ಹಂಚಿಕೊಳ್ಳುತ್ತಿದ್ದೀರಿ. ಪರವಾಗಿಲ್ಲ.

ಅಧ್ಯಕ್ಷರು: ಮಿ. ಮಹದೇವ್, ತಾವು ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಬಿ. ಸೋಮಶೇಖರ್: ಈಗ ಮಂತ್ರಿಗಳ ಪರ್‌ಫಾರ್ಮೆನ್ಸ್ ರಿವ್ಯೂ ಮಾಡುತ್ತೇನೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ಸದನದಲ್ಲಿ ರಾಜ್ಯಪಾಲರ ಭಾಷಣಕ್ಕೆ ಯಾರು ರಿಪ್ಲೈ ಕೊಟ್ಟಿದ್ದಾರೆ, ಈ ಆಯವ್ಯಯ ಮೇಲೆ ಯಾರು ರಿಪ್ಲೈ ಕೊಡುತ್ತಿದ್ದಾರೆ ಎಂದರೆ ಇದು ಎಷ್ಟರಮಟ್ಟಿಗೆ ಮಂತ್ರಿಗಳಿಗೆ ಅವರ ಪರ್‌ಫಾರ್ಮೆನ್ಸ್ ತೋರಿಸುವುದಕ್ಕೆ ಅವಕಾಶ ಕೊಟ್ಟಿದ್ದಾರೆ ಎನ್ನತಕ್ಕದ್ದು ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಸಿ. ಬೈರೇಗೌಡ: ಸ್ವಾಮಿ, ಇದಲ್ಲದೇ ಇದೇ ಮುಖ್ಯಮಂತ್ರಿಗಳು ಏನೋ ಹೇಳಿದರು. ಬಹುಶಃ ಡಿಸೆಂಬರ್ 8ನೇ ತಾರೀಖು ಈ ಮಾತನ್ನು ಅವರು ಹೇಳಿದ್ದಾರೆಂದು ಅನ್ನಿಸುತ್ತದೆ. ಡೆಲ್ಲಿಯಲ್ಲಿ ತಾವು ಹೇಳಿಕೆಯನ್ನು ಕೊಟ್ಟಿದ್ದೀರಿ. ಅದು ಎವಾಲ್ಯುಯೇಷನ್ ಮಾಡುತ್ತೇನೆ ಎನ್ನತಕ್ಕದ್ದು. ಮುಖ್ಯಮಂತ್ರಿಗಳು ಆಗಿರತಕ್ಕವರು ತಮ್ಮ ಮಂತ್ರಿಗಳ ಮೇಲೆ ಎವಾಲ್ಯುಯೇಷನ್ ಮಾಡುವುದು ಆಗಬೇಕು. ಅದನ್ನು ನಾನು ಒಪ್ಪುತ್ತೇನೆ. ಯಾರಿಗೆ ಯಾವ ಶಕ್ತಿ ಇದೆ, ಯಾರು ನಿಭಾಯಿಸತಕ್ಕಂಥ ಶಕ್ತಿಯನ್ನು ಹೊಂದಿದ್ದಾರೆ ಅವರಿಗೆ ಉತ್ತೇಜನ ಕೊಡಬೇಕಾಗುತ್ತದೆ ಮತ್ತು ಇದಕ್ಕೆ ಎವಾಲ್ಯುಯೇಷನ್ ಕೂಡ ಮಾಡಬೇಕಾಗುತ್ತದೆ ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ ಇನ್ನೊಬ್ಬರು ಬಂದು ಇಲ್ಲಿ ಎವಾಲ್ಯುಯೇಷನ್ ಮಾಡಿದರಲ್ಲಾ, ಏನು ಅಧಿಕಾರ ಅವರಿಗೆ ಇದೆ? ಗುಲಾಂ ನಬಿ ಆಜಾದ್ ಅವರು ಬಂದು ಇಲ್ಲಿ ಎವಾಲ್ಯುಯೇಷನ್ ಮಾಡಿದರು. ಮಾನ್ಯ ತಿಮ್ಮಪ್ಪನವರು ಅಲ್ಲಿಗೆ ಹೋಗಿದ್ದರು ಸ್ವಾಮಿ. ನಮ್ಮ ತಿಮ್ಮಪ್ಪನವರಿಗೆ ಈ ಗತಿ ಬರಬಾರದಾಗಿತ್ತು. ಇವರು ಹೋಗಿ ಕ್ಯೂನಲ್ಲಿ ಈ ರೀತಿ ಕೈಕಟ್ಟಿಕೊಂಡು ನಿಂತಿದ್ದರು. ಎಂತಹ ದುರ್ಗತಿ ತಿಮ್ಮಪ್ಪನವರಿಗೆ ಬಂದಿತು. ಇವರು ಹೋಗಿ ಅಲ್ಲಿ ಕೈಕಟ್ಟಿಕೊಂಡು ಕ್ಯೂನಲ್ಲಿ ನಿಲ್ಲಬೇಕಾಯಿತಲ್ಲಾ, ಯಾರು ಸ್ವಾಮಿ ಅವರು?

ಶ್ರೀ ಯು.ಆರ್. ಸಭಾಪತಿ: ಬೈರೇಗೌಡರು ಆಗ ಅಲ್ಲಿ ಇದ್ದಿರೇನು?

ಶ್ರೀ ಸಿ. ಬೈರೇಗೌಡ: ನಾನಿದ್ದರೂ ಒಂದೇ, ತಿಮ್ಮಪ್ಪನವರು ಇದ್ದರೂ ಒಂದೇ.

ಅಧ್ಯಕ್ಷರು: ನೀವು ಹೆಸರು ಹೇಳಿದರೆ ಅವರು ಏನೋ ಉತ್ತರ ಹೇಳಬೇಕಾಗುತ್ತದೆ.

ಶ್ರೀ ಎಂ. ಮಹದೇವ್: ನಮ್ಮ ಪಕ್ಷದ ವಿಚಾರ ಏಕೆ ಸ್ವಾಮಿ?

ಶ್ರೀ ಸಿ. ಬೈರೇಗೌಡ: ಸ್ವಾಮಿ, ಅವರು ಇದ್ದರು, ಇಲ್ಲ ಎಂದು ಅವರು ಹೇಳಲಿ. ನಾನು ಪಕ್ಷದ ವಿಚಾರ ಮಾತನಾಡುತ್ತಿಲ್ಲ. ಆದರೆ ಇಲ್ಲಿಯ ಸರ್ಕಾರದ ವಿಚಾರದಲ್ಲಿ ಯಾರೋ ಒಬ್ಬರು ಬಂದು ಅದನ್ನೆಲ್ಲ ನಾನು ಉಸ್ತುವಾರಿ ಮಾಡುತ್ತೇನೆ, ಎವಾಲ್ಯುಯೇಷನ್ ಮಾಡುತ್ತೇನೆ ಎಂದರೆ ಅವರಿಗೆ ಯಾವ ಅಧಿಕಾರ ಇದೆ?

(ಗೊಂದಲ)

ಅಧ್ಯಕ್ಷರು: ಅಭಿವೃದ್ಧಿ ಕಾರ್ಯಗಳ ಬಗ್ಗೆ ಹೇಳಿ.

ಶ್ರೀ ಸಿ. ಬೈರೇಗೌಡ: ಇದು ಸರ್ಕಾರದಲ್ಲಿ ನೇರವಾಗಿ ಪ್ರವೇಶ ಮಾಡತಕ್ಕದ್ದು. ಇದಕ್ಕೆಲ್ಲಾ ಹಣ ಖರ್ಚಾಗುತ್ತದೆ.

ಅಧ್ಯಕ್ಷರು: ನೀವು ಮಾತನಾಡಬೇಕಾಗಿರುವುದು ಬಜೆಟ್ ಮೇಲೆ.

ಶ್ರೀ ಸಿ. ಬೈರೇಗೌಡ: ಅವರ ಮೇಲೆ ಎವಾಲ್ಯುಯೇಷನ್ ಮಾಡತಕ್ಕಂಥ ಅಧಿಕಾರ ಮುಖ್ಯಮಂತ್ರಿಗಳಿಗೆ ಇದೆ. ಆದರೆ ಯಾರೋ ಬಂದು ಮಾಡುತ್ತಾರೆ ಎಂದರೆ ಹೇಗೆ ಇದನ್ನು ತಡೆದುಕೊಂಡಿರುವುದಕ್ಕೆ ಆಗುತ್ತದೆ? ಇದು ರಾಜ್ಯ ಜನತೆಗೆ ಮಾಡಿರತಕ್ಕಂಥ ಅವಮಾನ

ಎನ್ನತಕ್ಕದ್ದನ್ನು ನಾನಂತೂ ಕೂಡ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಸ್ವಾಮಿ, ನಾನು ಈಗಾಗಲೇ ಮಂಡಳಿಗಳ ಬಗ್ಗೆ ಮಾತನಾಡುತ್ತಾ ಹೇಳಿದ್ದೆ. ಇವತ್ತು ರಾಜ್ಯದಲ್ಲಿ ಪ್ಲಾನಿಂಗ್ ಬೋರ್ಡ್ ಎನ್ನತಕ್ಕದ್ದು ಇದೆ. ಇದಕ್ಕೆ ಒಬ್ಬರು ಉಪಾಧ್ಯಕ್ಷರನ್ನು ಮುಖ್ಯಮಂತ್ರಿಗಳು ನೇಮಿಸಿದ್ದಾರೆ. ಆದರೆ, ಎಷ್ಟು ಸಾರಿ ಈ ಪ್ಲಾನಿಂಗ್ ಬೋರ್ಡ್ ಸಭೆ ಸೇರಿದೆ? ಏನೇನು ಸಲಹೆಗಳನ್ನು ಈ ಪ್ಲಾನಿಂಗ್‌ಬೋರ್ಡ್ ಕೊಟ್ಟಿದೆ? ಪ್ಲಾನಿಂಗ್‌ಬೋರ್ಡ್ ನೀಡಿರತಕ್ಕಂಥ ಸಲಹೆಗಳಲ್ಲಿ ಯಾವುದನ್ನಾದರೂ ಸರ್ಕಾರ ಕಾರ್ಯಗತ ಮಾಡಿದ್ದಾರೆಯೆ? ಈ ಪ್ಲಾನಿಂಗ್ ಬೋರ್ಡ್‌ನಲ್ಲಿ ಯಾರು ಸದಸ್ಯರುಗಳು ಇದ್ದಾರೆ? ನನ್ನ ಮಾಹಿತಿ ಪ್ರಕಾರ ಇಲ್ಲಿಯವರೆಗೂ ಕೂಡ ಒಬ್ಬರನ್ನೂ ನೇಮಕ ಮಾಡಿಲ್ಲ.

4.20 ಪಿ.ಎಂ.

ಒಂದು ಸಭೆ ಕೂಡ ಆಗಿದೆಯೋ ಇಲ್ಲವೋ ನನಗಂತೂ ಗೊತ್ತಿಲ್ಲ. ನನ್ನ ಮಾಹಿತಿ ಪ್ರಕಾರ ಆ ಸಭೆಯೂ ಕೂಡ ನಡೆದಿಲ್ಲ. ಅದಕ್ಕಾಗಿಯೇ ನಾನು ಹೇಳಿದ್ದು. ಯಾರೋ ಒಬ್ಬರನ್ನು ಅಲ್ಲಿ ಇಡುವುದಕ್ಕೋಸ್ಕರ, ಯಾರನ್ನೋ ಒಬ್ಬರನ್ನು ನೇಮಿಸುವುದಕ್ಕೋಸ್ಕರ ಈ ಮಂಡಳಿಗಳನ್ನು, ಈ ಟಾಸ್ಕ್‌ಫೋರ್ಸ್‌ಗಳನ್ನು ನೀವು ರಚನೆ ಮಾಡುತ್ತಿದ್ದೀರೆಂದು ನಾನು ಹೇಳಿದ್ದು. It cannot be an old-age home and it cannot also be a pinjwapole ಎರಡೂ ಕೂಡ ಆಗಿದೆಯೆಂದು ನಮ್ಮ ಸ್ನೇಹಿತರು ಹೇಳುತ್ತಾ ಇದ್ದಾರೆ. ಇದಕ್ಕೆ ತಾಜಾ ಉದಾಹರಣೆ ಎಂದರೆ, ನಮ್ಮ ರಾಜ್ಯದ ಯೋಜನಾ ಮಂಡಳಿ ಆಗಿರತಕ್ಕಂಥಾದ್ದು. ನಾನು ಅಲ್ಲಿರತಕ್ಕಂಥ ವ್ಯಕ್ತಿಗಳ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ನನ್ನ ಪ್ರಕಾರ ಅವರು competent persons ಅದನ್ನು ಒಪ್ಪುತ್ತೇನೆ. ಆದರೆ, ಅಂತಹವರನ್ನು ತಂದು, ಅಲ್ಲಿ ಕೂರಿಸಿ, ಅವರ ಕೈಲಿ ನೀವು ಏನು ಕೆಲಸ ಮಾಡಿಸಿದ್ದೀರಿ. ಏನೂ ಕೆಲಸವಿಲ್ಲದಂಥವರಿಗೆ, ಕುರ್ಚಿಯ ಮೇಲೆ ಕೂಡಿಸಬೇಕು, ಒಬ್ಬರಿಗೆ ಅಧಿಕಾರ ನೀಡಬೇಕು ಎನ್ನುವ ಕಾರಣಕ್ಕೋಸ್ಕರ ಈ ಮಂಡಳಿಗಳನ್ನು, ಆಯೋಗಗಳನ್ನು, ಕ್ರಿಯಾಪಡೆಗಳನ್ನು ನೀವು ನೇಮಿಸಿದ್ದೀರಿ. ಅದರಿಂದ, ಈ ರಾಜ್ಯದ ಏಳಿಗೆಗೆ ಇವತ್ತಿನ ದಿವಸ ಸಾಧಕವಾಗಿಲ್ಲ ಎಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ತಾವು ಡಬ್ಲ್ಯು.ಟಿ.ಓ. ಸೆಲ್ ನೇಮಕ ಮಾಡಿದ್ದೀರಿ. ಅದನ್ನು ಬಹಳ ಜೋರಾಗಿ ಹೇಳಿಕೊಂಡಿದ್ದೀರಿ. ನಿಮ್ಮ ಆಯವ್ಯಯದಲ್ಲಿ "ವಾಣಿಜ್ಯ ಉದಾರೀಕರಣದ ನಂತರ ನಮ್ಮ ಕೃಷಿ ಬದುಕಿನ ಮೇಲೆ ಆಗಿರುವ ಪರಿಣಾಮವನ್ನು ಅಧ್ಯಯನ ಮಾಡಲು ಡಬ್ಲ್ಯು.ಟಿ.ಓ. ಕೋಶವನ್ನು ಸ್ಥಾಪಿಸುವುದರಲ್ಲಿ ಮೊಟ್ಟಮೊದಲನೆಯ ರಾಜ್ಯ ಕರ್ನಾಟಕ ಆಗಿದೆ" ಎಂದು ಬಹಳ ಹೊಗಳಿಕೊಂಡಿದ್ದೀರಿ. ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳತಕ್ಕ ಕೆಲಸ ಮಾಡಿದ್ದೀರಿ. ಇವತ್ತಿನದಿವಸ ಡಬ್ಲ್ಯು.ಟಿ.ಓ. ಸೆಲ್‌ನಲ್ಲಿ ಏನಾಗಿದೆ? ಇವತ್ತು ಪತ್ರಿಕೆಯಲ್ಲಿ ಬಂದಿದೆ. ಈ ದೇಶದಲ್ಲಿ ಗೋಧಿಯನ್ನು ಹೊರಗಡೆ ಕಳುಹಿಸುವುದಕ್ಕೆ ಅಮೇರಿಕಾ ಮತ್ತು ಕೆನಡಾ ದೇಶ ಎರಡೂ ಸಹ ಈಗಾಗಲೇ ತಕರಾರು ತೆಗೆದಿವೆ. ಇವತ್ತಿನ ಪತ್ರಿಕೆಯಲ್ಲಿ ವರದಿಯಾಗಿದೆ. ಇಲ್ಲಿರತಕ್ಕಂಥ ಕ್ವಾಲಿಟಿ ಸರಿಯಿಲ್ಲ, ಸಬ್ಸಿಡಿ ಹೆಚ್ಚಿಗೆ ಕೊಡುತ್ತಾ ಇದ್ದಾರೆ, ಎನ್ನತಕ್ಕಂಥ ತಕರಾರನ್ನು ಅವರು ತೆಗೆದಿದ್ದಾರೆ. ಇವತ್ತಿನದಿವಸ ನೀವೇನು ಮಾಡುತ್ತಿದ್ದೀರಿ? ನಾನು ಆಗಲೇ ಹೇಳಿದ ಹಾಗೆ, ನೂರು ಕೋಟಿ ರೂಪಾಯಿ ಇದ್ದದ್ದನ್ನು ಮಾರ್ಕೆಟ್ ಇಂಟರ್‌ವೆನ್‌ಷನ್ ಸ್ಕೀಮ್‌ನಲ್ಲಿ,

200 ಕೋಟಿ ರೂಪಾಯಿಗಳಿಂದ 400 ಕೋಟಿ ರೂಪಾಯಿಗಳಿಗೆ ತೆಗೆದುಕೊಂಡು ಹೋಗಬೇಕೆಂದು ಮಾಡುತ್ತಾ ಇದ್ದೀರಿ. ಸ್ವಾಮಿ, ಇದರಲ್ಲಿ ಏನಿದೆ? ಅಗ್ರಿಮೆಂಟ್ ಆನ್ ಅಗ್ರಿಕಲ್ಚರ್‌ನಲ್ಲಿ ಕ್ಲಾಸ್ ಏನಿದೆ ಎನ್ನುವುದು ಈ ಡಬ್ಲ್ಯು.ಟಿ.ಓ. ಸೆಲ್‌ಗೆ ಗೊತ್ತಿದೆಯೋ ಇಲ್ಲವೋ, ನನಗಂತೂ ಗೊತ್ತಿಲ್ಲ. ಏಕೆಂದರೆ, ಆ ರೀತಿಯಲ್ಲಿ ಇದು ಗೊತ್ತಿದ್ದರೆ, ಈ ವಿಚಾರವನ್ನು ಅವರು ಸರ್ಕಾರಕ್ಕೆ ತಿಳಿಸುತ್ತಾ ಇದ್ದರು. ಈ ರೀತಿಯಾಗಿ ಡಬ್ಲ್ಯು.ಟಿ.ಓ. ನಲ್ಲಿ ಕೆಲವು ನಿಬಂಧನೆಗಳು ಇವೆ, ಈ ನಿಬಂಧನೆಗಳಿಗೆ ವಿರೋಧವಾದ ಪರಿಷ್ಕೃತ ಕಲಂಗಳೂ ಇದರಲ್ಲಿ ಇವೆ ಎಂಬುದನ್ನು ನಿಮಗಾದರೂ ತಿಳಿಸುತ್ತಿದ್ದರು. ಅದರಲ್ಲಿ ರೈತರಿಗೆ ಸಂಬಂಧಪಟ್ಟಿದ್ದನ್ನು ಓದುತ್ತೇನೆ. ಸ್ವಾಮಿ, ಇದು ಅಗ್ರಿಮೆಂಟ್ ಆನ್ ಅಗ್ರಿಕಲ್ಚರ್. ಇದರಲ್ಲಿ ನಾನು ಎಲ್ಲವನ್ನೂ ಓದುವುದಕ್ಕೆ ಹೋಗುವುದಿಲ್ಲ. ಕ್ಲಾಸ್-3, ಇದು ಬಹಳ ಉದ್ದವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಗಮನಿಸಿ ಡಬ್ಲ್ಯು.ಟಿ.ಓ. ಸೆಲ್‌ನವರನ್ನು ಕರೆದು, ಇದು ಏನು ಎನ್ನತಕ್ಕಂಥಾದ್ದನ್ನು ದಯವಿಟ್ಟು ತಿಳಿದುಕೊಳ್ಳಬೇಕು. ಮತ್ತು ಮುಖ್ಯವಾಗಿರತಕ್ಕಂಥಾದ್ದರ ಬಗ್ಗೆ ಸರ್ಕಾರಕ್ಕೆ ಸರಿಯಾದ ಮಾಹಿತಿಯನ್ನು ಏಕೆ ಕೊಡಲಿಲ್ಲವೆಂಬುದನ್ನೂ ಅವರಿಗೆ ಹೇಳಬೇಕಾಗುತ್ತದೆ. ಮತ್ತು ಖಚಿತಪಡಿಸಿಕೊಳ್ಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ನಾನು ಈ ವಿವರಣೆ ಕೊಟ್ಟ ಮೇಲೆ ಅದನ್ನು ಓದುತ್ತೇನೆ. ಈ ಡಬ್ಲ್ಯು.ಟಿ.ಓ. ನಲ್ಲಿ ಏನು ಮಾಡುತ್ತಾರೆಂದರೆ, ಯಾವುದೇ ಒಂದು ವಸ್ತು. ಅದರಲ್ಲೂ ಕೃಷಿಗೆ ಸಂಬಂಧಪಟ್ಟ ವಸ್ತುವಿಗೆ ಒಂದು ರೆಫರೆನ್ಸ್ ಪ್ರೈಸ್ ಎಂದು ಇಡುತ್ತಾರೆ. ಇವತ್ತು ನಾವು ಮಾರ್ಕೆಟ್ ಇಂಟರ್‌ವೆನ್‌ಷನ್ ಸ್ಕೀಮ್‌ನಲ್ಲಿ ಕೇಂದ್ರ ಸರ್ಕಾರ ಯಾವ ರೀತಿಯಾಗಿ ಪ್ರತಿ ರಾಜ್ಯದಲ್ಲಿ ಗೋಧಿಯನ್ನು ಇಷ್ಟಕ್ಕೇ ಕೊಂಡುಕೊಳ್ಳಬೇಕು. ರಾಗಿಯನ್ನು ಇಷ್ಟಕ್ಕೇ ಕೊಂಡುಕೊಳ್ಳಬೇಕು, ಭತ್ತ ಇಷ್ಟಕ್ಕೇ ಕೊಂಡುಕೊಳ್ಳಬೇಕೆಂಬುದು Commission on Agricultural Prices and Costs ಕೇಂದ್ರ ಸರ್ಕಾರದಲ್ಲಿ ಇದೆ. ಅವರು ಎಲ್ಲಾ ರಾಜ್ಯ ಸರ್ಕಾರಗಳಿಂದಲೂ ಬೆಲೆಗಳನ್ನು ತರಿಸುತ್ತಾರೆ. ಅವೆಲ್ಲವನ್ನೂ ಪರಿಶೀಲನೆ ಮಾಡಿ, ಇದು ಮಾರ್ಕೆಟ್ ಇಂಟರ್‌ವೆನ್‌ಷನ್ ಪ್ರೈಸ್, ಎಂಬುದನ್ನು ನಿಗದಿಪಡಿಸುತ್ತಾರೆ. ಅದೇ ರೀತಿಯಲ್ಲಿ ಪ್ರಪಂಚದ ಮಟ್ಟದಲ್ಲಿ ಕೂಡ ಡಬ್ಲ್ಯು.ಟಿ.ಓ. ದಲ್ಲಿ ಒಂದು ವರ್ಲ್ಡ್ ರೆಫರೆನ್ಸ್ ಪ್ರೈಸ್ ಎನ್ನತಕ್ಕಂಥಾದ್ದು ಇದೆ. ಆ ವರ್ಲ್ಡ್ ರೆಫರೆನ್ಸ್ ಪ್ರೈಸ್‌ನಲ್ಲಿ ಅವರು ಪ್ಲಸ್ 10 ಪರ್ಸೆಂಟ್ ಮಾತ್ರ ಹೆಚ್ಚಿಗೆ ಹೋಗಬಹುದೇ ವಿನಹ ಸಬ್ಸಿಡಿ ಮತ್ತೊಂದು ಇಲ್ಲ. ಅಗ್ರಿಗೇಟ್ ಮೆಷರ್ ಆಫ್ ಸಪೋರ್ಟ್ ಎಂದು ಕರೆಯುತ್ತೇವೆ. ಆದರೆ, ಎಲ್ಲವನ್ನೂ ಕೂಡ ಲೆಕ್ಕ ಹಾಕುತ್ತಾರೆ. ನೀರನ್ನು ಸಬ್ಸಿಡೈಸ್ ಮಾಡುತ್ತಿದ್ದಾರೂ, ಅದನ್ನೂ ಲೆಕ್ಕಹಾಕುತ್ತಾರೆ. ಗೊಬ್ಬರಕ್ಕೆ ಏನು ಸಬ್ಸಿಡಿ ಕೊಡುತ್ತಾರೆ, ಅದನ್ನೂ ಲೆಕ್ಕಹಾಕುತ್ತಾರೆ. ವಿದ್ಯುತ್ ಸಬ್ಸಿಡಿ ಕೊಡುತ್ತಾ ಇದ್ದರೆ, ಅದನ್ನೂ ಲೆಕ್ಕ ಹಾಕುತ್ತಾರೆ. ಟ್ರಾನ್ಸ್‌ಪೋರ್ಟಿಂಗ್ ಸಬ್ಸಿಡಿ ಕೊಡುತ್ತಾ ಇದ್ದರೆ, ಅದನ್ನೂ ಕೂಡ ಕೊಡುತ್ತಾರೆ. ಹೀಗೆ ಕೃಷಿಯಲ್ಲಿರತಕ್ಕಂಥ ಅನೇಕ ಬಾಬುಗಳೇನಿವೆ, ರೈತರಿಗೆ ಮುಟ್ಟತಕ್ಕ ಬಾಬುಗಳೇನಿವೆ, ಇವೆಲ್ಲವನ್ನೂ ಕೂಡ ಲೆಕ್ಕ ಹಾಕುತ್ತಾರೆ. ಅದು ವರ್ಲ್ಡ್ ರೆಫರೆನ್ಸ್ ಪ್ರೈಸ್‌ನಲ್ಲಿ ಶೇಕಡ 10 ರಷ್ಟು ಮಾತ್ರ ಅಲ್ಲಿಗೆ ಹೆಚ್ಚಿಗೆ ಕೊಡುವುದಕ್ಕೆ ಸಾಧ್ಯವಿದೆ. ಅದಕ್ಕಿಂತ ಹೆಚ್ಚಿಗೆ ಕೊಡಲಿಕ್ಕೆ ಸಾಧ್ಯವಿಲ್ಲ. ಅದನ್ನು ಕೊಟ್ಟರೆ ಪುನಃ ಇವತ್ತು ಯಾವ ರೀತಿಯಲ್ಲಿ ಆಗುತ್ತದೆ ಎಂಬ ಬಗ್ಗೆ ಇವತ್ತಿನ ಹಿಂದೂ ಪತ್ರಿಕೆಯಲ್ಲಿ ವರದಿಯಾಗಿದೆ. "India dragged to WTO on wheat exports" ಈಗಾಗಲೇ

ನಮ್ಮ ದೇಶವನ್ನು ಕೋರ್ಟಿನ ಮುಂದೆ ಎಳೆದಿದ್ದಾರೆ. ಅದೇ ಪರಿಸ್ಥಿತಿ ಕೂಡ ನಿಮ್ಮ ಮಾರ್ಕೆಟ್ ಇಂಟರ್‌ವೆನ್‌ಷನ್ ಸ್ಕೀಮ್‌ನಲ್ಲಿ ನೀವೇನು ರೈತರಿಗೆ ನೀಡುತ್ತೇವೆಂದು ಹೇಳಿದ್ದೀರಿ. ಆ ಪರಿಸ್ಥಿತಿ ಕೂಡ ಬಂದೊದಗುತ್ತದೆ. ಇದಕ್ಕೆ ಎಚ್ಚರಿಕೆ ವಹಿಸಬೇಕೆಂಬುದನ್ನು ಸೂಕ್ಷ್ಮವಾಗಿ ಒಂದು ವಾಕ್ಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

> "For the purpose paragraph 3 of this Annexture - Governmental stock holding programme for food security purposes in developing countries whose operation is transparent and conducted in accordance with the officially published objective criteria or guidelines shall be considered to be in conformity with the provision of this paragraph including programmes under which stocks of foodstruffs for food security purposes are apparent and acquired or released at administered prices provided that difference between acquisition prices and the external reference price is accounted in the aggregate measure of support."

ಎನ್ನುವುದರ ಬಗ್ಗೆ ಅವರು ಹೇಳುತ್ತಾರೆ. ಅಂದರೆ, ಇವತ್ತಿನ ದಿವಸ ಸ್ಟಾಕ್ ಇಡಬೇಕಾಗಿದ್ದರೆ, ಆ ಸ್ಟಾಕನ್ನೂ ಲೆಕ್ಕ ಹಾಕುತ್ತಾರೆ. ಆ ಸ್ಟಾಕ್ ಇದ್ದು, ಬಡ್ಡಿ ಕೊಡಬೇಕಾದರೆ, ಅದನ್ನೂ ಲೆಕ್ಕ ಹಾಕುತ್ತಾರೆ. ಇದೆಲ್ಲವನ್ನೂ ಕೂಡ ಸೇರಿಸಿ, ಅಗ್ರಿಗೇಟ್ ಮೆಷರ್ ಆಫ್ ಸಪೋರ್ಟ್‌ನಲ್ಲಿ ಅದನ್ನು ಸೇರಿಸುತ್ತಾರೆ. ಅದಕ್ಕಿಂತ ಶೇಕಡ 10 ರಷ್ಟು ಮೇಲೆ ಹೋಗಬಹುದು. ಅದರಿಂದ ನೀವು ಇವತ್ತಿನ ದಿವಸ ರೈತರಿಗೆ, ಏನು ಕೊಡಬೇಕೆಂದು ಮನಸ್ಸು ಮಾಡಿದ್ದೀರಿ, ಇದು ಕೊಡುವುದಕ್ಕೆ ಆಗುವುದಿಲ್ಲ. ಇದು ರೈತರಿಗೆ ತಲುಪುವುದಿಲ್ಲ. ರೈತರಿಗೆ ತಲುಪದಂಥ ಪರಿಸ್ಥಿತಿ ಇವತ್ತು ದೇಶದಲ್ಲಿ ಮತ್ತು ಪ್ರಪಂಚದಲ್ಲಿ ಉಂಟಾಗಿದೆ.

ಶ್ರೀ ವೈ.ಕೆ. ರಾಮಯ್ಯ: ಡಬ್ಲ್ಯ್ಯು.ಟಿ.ಓ. ಸೆಲ್ ಏನು ರಿಪೋರ್ಟ್ ಕೊಟ್ಟಿದೆ ಎನ್ನುವುದನ್ನು ನಮಗೆಲ್ಲರಿಗೂ ಕೊಟ್ಟಿದ್ದಾರೆ. ಮಾನ್ಯ ಗೌಡರೂ ಕೂಡ ಓದಿದ್ದಾರೆಂದು ಭಾವಿಸಿಕೊಂಡಿದ್ದೇನೆ. ಡಬ್ಲ್ಯ್ಯು.ಟಿ.ಓ. ನವರು ಹೇಳಿರುವುದು ನೆಟ್ ಸೇಲ್ ನೆಗೋಷಿಯೇಷನ್ ಮಾಡುವ ಹಂತದಲ್ಲೇ Central Government has failed to conduct negotiation, even not consulted the Law Department. ಆಮೇಲೆ ಇನ್ನೇನು ಮಾಡಲಿಕ್ಕೆ ಸಾಧ್ಯ ಎಂಬುದಕ್ಕೆ ಅವರು ಹೇಳುತ್ತಾರೆ. They suggest for starting of renegotiation on the adverse effect on the agriculture field ಮೂರನೆಯದು, ಈ ಪರಿಸ್ಥಿತಿ ಕೇವಲ ಕರ್ನಾಟಕ ಅಥವಾ ಭಾರತ ದೇಶಕ್ಕೆ ಮಾತ್ರ ಆಗಿಲ್ಲ. ಮೆಕ್ಸಿಕೋದಂಥ ದೇಶದಿಂದ ಹಿಡಿದು ಪ್ರಪಂಚದ ಅನೇಕ ಕೃಷಿ ಪ್ರಧಾನವಾದ ರಾಷ್ಟ್ರಗಳಿಗೂ ಈ ಪರಿಸ್ಥಿತಿ ಬಂದಿದೆ. ಅವರೆಲ್ಲಾ ಏಪ್ರಿಲ್ ತಿಂಗಳಲ್ಲಿ ಸೇರುತ್ತಿದ್ದಾರೆ. ನೀವೂ ಅವರ ಜೊತೆ ಸೇರಿಕೊಂಡು ಈ ಅಡ್ವರ್ಸ್ ಎಫೆಕ್ಟ್ ಅಗ್ರಿಮೆಂಟಿನಿಂದ ಆಗಿರುವಂಥ ಕೆಟ್ಟ ಪರಿಣಾಮಗಳ ವಿರುದ್ಧ ಯುದ್ಧ ಮಾಡಲಿಕ್ಕೆ ಸಿದ್ಧರಾಗಿ ಎಂದು ಆ ಸೆಲ್‌ನವರು ಸರ್ಕಾರಕ್ಕೆ ಸಲಹೆಯನ್ನು ಮಾಡಿದ್ದಾರೆ. ನಿಮಗೂ ಆ

ಪುಸ್ತಕ ಕೊಟ್ಟಿದ್ದಾರೆ, ನನಗೂ ಆ ಪುಸ್ತಕ ಕೊಟ್ಟಿದ್ದಾರೆ. ನಾನು ಓದಿ ತಿಳಿದುಕೊಂಡಿರುವುದು ಇಷ್ಟು ಸ್ವಾಮಿ.

ಶ್ರೀ ಸಿ. ಬೈರೇಗೌಡ: ಇವತ್ತಿನದಿವಸ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಏನು ನಡೆಯುತ್ತಿದೆ ಎಂದರೆ, ಸಿಯೋಟೆಲ್‌ನಲ್ಲಿ ಸಭೆ ನಡೆಸುವುದಕ್ಕಾಗಲಿಲ್ಲ. ಅಮೇರಿಕಾದಂಥ ಮುಂದುವರೆದ ರಾಷ್ಟ್ರವಲ್ಲಿ ಮುಂದುವರೆದ ರಾಷ್ಟ್ರದಲ್ಲಿ ಅವೆರ ಕೈಲಿ ಒಂದು ಸಭೆ ನಡೆಸಲಿಕ್ಕಾಗಲಿಲ್ಲವೆಂಬುದನ್ನು ಕೇಳಿ ನಾನು ನಕ್ಕುಬಿಟ್ಟೆ. ಅವರು ರಾಷ್ಟ್ರಾಧ್ಯಕ್ಷರ ಚುನಾವಣೆ ನಡೆಸಿದ್ದು ಒಂದು ಕಡೆ ಇರಲಿ. ಸಿಯೋಟೆಲ್‌ನಲ್ಲಿ ಡಬ್ಲ್ಯು.ಟಿ.ಓ.- ವ್ಯವಸಾಯಕ್ಕೆ ಸಂಬಂಧಪಟ್ಟಂತೆ ಆ ಸಭೆಯನ್ನು ನಡೆಸಲಿಕ್ಕೆ ಆಗಲಿಲ್ಲ. ಅದಕ್ಕೋಸ್ಕರ ಈ ಸಾರಿ ಏನು ಮಾಡುತ್ತಿದ್ದಾರೆಂದರೆ, ಪ್ರಜಾಪ್ರಭುತ್ವ ಇಲ್ಲದಂಥ ರಾಷ್ಟ್ರದಲ್ಲಿ ಈ ಸಭೆಯನ್ನು ಕರೆದಿದ್ದಾರೆ. ಅಲ್ಲಿ ಪೊಲೀಸಿನವರನ್ನು ಇಟ್ಟುಕೊಂಡು ಸಭೆ ನಡೆಸುತ್ತಾರೋ, ಮಿಲಿಟರಿ ಇಟ್ಟುಕೊಂಡು ಸಭೆ ನಡೆಸುತ್ತಾರೋ ಗೊತ್ತಿಲ್ಲ. ಯಾವುದೋ ಒಂದು ಗಲ್ಫ್ ರಾಷ್ಟ್ರದಲ್ಲಿ ಸಭೆಯನ್ನು ಕರೆದಿದ್ದಾರೆ. ಇದು ಪ್ರಪಂಚದ ಮೇಲೆ ಅಮೇರಿಕಾದ ಜೇಡರ ಬಲೆ ಎನ್ನುತ್ತೀರೋ ಅಥವಾ ಆಕ್ಟೋಪಸ್ ಎಂದು ಹೇಳುತ್ತೀರೋ. ಈ ಆಕ್ಟೋಪಸ್ ಇವತ್ತಿನದಿವಸ ಅಷ್ಟೊಂದು ಪ್ರಭಾವಯುತವಾಗಿ ಕೆಲಸ ಮಾಡುತ್ತಿದೆ. ಆದುದರಿಂದ ಇವತ್ತಿನ ದಿವಸ ರೈತರ ನಾಶವಾಗತಕ್ಕ ಪರಿಸ್ಥಿತಿಯುಂಟಾಗಿದೆ. ಇದರ ಬಗ್ಗೆ ನಾವು ಕೇಂದ್ರ ಸರ್ಕಾರಕ್ಕೆ ಹೇಳಬೇಕಾಗುತ್ತದೆ. ಆ ರೀತಿ ಒಪ್ಪಂದವನ್ನು ಮಾಡಿಕೊಳ್ಳುವ ಸಂದರ್ಭದಲ್ಲಿ ನಮ್ಮ ರೈತರಿಗೆ ವಿರೋಧವಾಗತಕ್ಕ ಕಾಲಂಗಳನ್ನು ಯಾವುದೇ ಮುಲಾಜಿಲ್ಲದೆ ರಾಜಿ ಮಾಡಿಕೊಳ್ಳಬಾರದು, ಅದನ್ನು ವಿರೋಧ ಮಾಡುವ ಅವಶ್ಯಕತೆ ಇದೆ. ಕೇಂದ್ರ ಸರ್ಕಾರಕ್ಕೆ ತಾಕತ್ತು ಇದ್ದರೆ ಅಗ್ರಿಮೆಂಟ್ ಆನ್ ಅಗ್ರಿಕಲ್ಚರ್ ಏನಿದೆ ಅದಕ್ಕೆ ನಾವು ಒಪ್ಪುವುದಿಲ್ಲವೆಂದು ಹೇಳಬೇಕಾಗುತ್ತದೆ. ನಮ್ಮ ರೈತರಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ಅಲ್ಲಿ ತಿದ್ದುಪಡಿಯನ್ನು ಮಾಡಬೇಕು, ಇಲ್ಲದಿದ್ದರೆ ಅದರಿಂದ ಹೊರಗಡೆ ಬರತಕ್ಕ ರೀತಿಯಲ್ಲಿ ತಯಾರಿಯನ್ನು ನಡೆಸಬೇಕು. ಈ ರೀತಿಯಾದ ವರದಿಯನ್ನು, ತಯಾರು ಮಾಡಿರತಕ್ಕದ್ದು, ಆಲೋಚನೆ ಮಾಡಿರುವ ಪ್ರಥಮ ರಾಜ್ಯ ಇದೇ ಎಂದು ತಾವೇ ಹೇಳಿದ್ದೀರಿ. ಆದ್ದರಿಂದ ಈ ವಿಚಾರದಲ್ಲೂ ತಾವು ಧೈರ್ಯವನ್ನು ತಳೆದು ರೈತರನ್ನು ರಕ್ಷಿಸುವ ಅವಶ್ಯಕತೆ ಇದೆ. ತಾವು ನೀರು ಕೋಟಿ ರೂ. ಬಗ್ಗೆ ಹೇಳಿದ್ದೀರಿ, ಆದರೆ ಕೊಟ್ಟಿದ್ದು 12 ಕೋಟಿ ರೂಪಾಯಿಗಳು ಮಾತ್ರ. ಉಳಿದಿರತಕ್ಕದನ್ನು ಎಪಿಎಂಸಿ ಗಳಿಂದ ತೆಗೆದುಕೊಂಡಿದ್ದೀರಿ, ಮುಂದಿನ ವರ್ಷ ತಮಗೆ ಎ.ಪಿ.ಎಂ.ಸಿ. ಯಿಂದ ಒಂದು ಪೈಸೆ ಹಣ ಸಿಗುವುದಿಲ್ಲ. ಅವರು ಅಲ್ಲಿ ಇಲ್ಲಿ ಇದ್ದ ಎಲ್ಲವನ್ನೂ ಬಾಚಿ ತಮಗೆ ಕೊಟ್ಟಿದ್ದಾರೆ. ಯಾವ ಎ.ಪಿ.ಎಂ.ಸಿ. ಯಲ್ಲೂ ಬಂಡವಾಳವಿಲ್ಲ. ಈ ಕಾರ್ಯಕ್ರಮವನ್ನು ಮಾಡುತ್ತೇವೆಂದು ಹೇಳತಕ್ಕ ಸಂದರ್ಭದಲ್ಲಿ ಇದನ್ನು 100, 200, 400 ಈ ರೀತಿ ಮಲ್ಟಿಪಲ್ಸ್ ಆಗಿ ಮಾಡುತ್ತೇವೆಂದು ಹೇಳುವುದರಲ್ಲಿ ರೈತರನ್ನು ದಾರಿ ತಪ್ಪಿಸುವ ಮಾತು ಬಜೆಟ್ ಭಾಷಣದಲ್ಲಿ ಬಂದಿದೆ. ಇವತ್ತು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರ ಮನಸ್ಸಿನ ಮೇಲೆ ಸೈಕಲಾಜಿಕಲಿ ಪರಿಣಾಮ ಬೀರುವ ನಿಟ್ಟಿನಲ್ಲಿ ನಿಮ್ಮನ್ನು ರಕ್ಷಣೆ ಮಾಡುತ್ತೇವೆ, ನೀವು ಆತ್ಮಹತ್ಯೆ ಮಾಡಿಕೊಳ್ಳಬೇಡಿ ಎನ್ನತಕ್ಕ ಒಂದು ಮಾತಾದರೂ ಬರಬೇಕಾಗಿತ್ತು. ಈ ನಿಟ್ಟಿನಲ್ಲಿ ರೈತರ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ವಜಾ ಮಾಡಿ ಎಂದು ನಾವು ಬಹಳ ಒತ್ತಾಯ ಮಾಡಿದ್ದೆವು. ಆದರೆ ತಾವು

ನಮಗೆ ಮೋಸ ಮಾಡಿದಿರಿ. ಎರಡು ಪರ್‌ಸೆಂಟ್ ಹಣವನ್ನು ಡಿ.ಸಿ.ಸಿ. ಬ್ಯಾಂಕ್ ನವರು ಮತ್ತು ಅಪೆಕ್ಸ್ ಬ್ಯಾಂಕ್‌ನವರು ಕೊಡಿ ಎಂದು ಹೇಳಿದ್ದೀರಿ. ಹಾಗಾದರೆ ತಾವು ರೈತರಿಗೆ ಏನು ಕೊಟ್ಟಿದ್ದೀರಿ? ರೈತರಿಗೆ ಚಿಪ್ಪನ್ನು ಕೊಟ್ಟಿದ್ದೀರಿ. ರಾಜ್ಯದಲ್ಲಿ ಎರಡು ಡಿ.ಸಿ.ಸಿ. ಬ್ಯಾಂಕ್‌ಗಳನ್ನು ಬಿಟ್ಟರೆ ಉಳಿದ ಎಲ್ಲದರ ಹಣಕಾಸಿನ ಪರಿಸ್ಥಿತಿ ಮೈನಸ್ ಆಗಿದೆ. ಅವರು ಹಣವನ್ನು ಎಲ್ಲಿಂದ ತರುತ್ತಾರೆ. ತಾವು ಹೇಳಿರುವ ಮಾತನ್ನು ಕಾರ್ಯಗತ ಮಾಡಲು ಆಗುತ್ತದೆಯೇ? ನಾವು ಅಧಿಕಾರದಲ್ಲಿದ್ದಾಗ ಬಡ್ಡಿ ಮನ್ನಾ ಮಾಡಿದ್ದೇವೆ, ನಾವು ಮಾಡದಿರುವ ಕೆಲಸವನ್ನು ಮಾಡಿ ಎಂದು ನಾವು ಹೇಳುತ್ತಿಲ್ಲ. ಹಿಂದೆ ನಾವು ಮಾಡಿರುವ ಕೆಲಸವನ್ನೇ ಮಾಡಿ ಎಂದು ಹೇಳಿದ್ದೇವೆ. ರೈತರ ಆತ್ಮಹತ್ಯೆಯನ್ನು ತಡೆಗಟ್ಟಬೇಕಾಗಿದ್ದರೆ ರೈತರ ಸಾಲದ ಹೊರೆಯನ್ನು ಕಡಿಮೆ ಮಾಡಿಸಿ, ಸಾಲದ ಮೇಲಿರುವ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ವಜಾ ಮಾಡುತ್ತೇವೆ ಎಂಬ ಮಾತನ್ನು ತಾವು ಹೇಳಲೇ ಬೇಕೆಂದು ಒತ್ತಾಯ ಮಾಡುತ್ತೇನೆ. ಅಧಿಕಾರಿಗಳಿಗೆ ಅಂಕಿ ಅಂಶದ ಬಗ್ಗೆ ಗೊತ್ತಾಗುತ್ತದೋ ಇಲ್ಲವೋ ಎಂಬುದು ನನಗೆ ಗೊತ್ತಾಗುತ್ತಿಲ್ಲ. ರೈತ ಬಹಳ ಬೆಳೆ ಬೆಳೆದಿದ್ದಾನೆ. ಬಹಳ ಬೆಳೆ ಬಂದುಬಿಟ್ಟಿದೆ, ಆದ್ದರಿಂದ ಬೆಲೆ ಕುಸಿತವಾಗಿದೆಯೆಂದು ತಾವು ಹೇಳಿದ್ದೀರಿ. ಆದರೆ ಏಕನಾಮಿಕ್ ಸರ್ವೆಯ ಪುಸ್ತಕದ ಮೊದಲನೆಯ ಪ್ಯಾರಾದಲ್ಲಿ ಏನು ಹೇಳಿದ್ದಾರೆಂದರೆ "In general, condition of standing kharif crops was normal. As a result of timely and widespread rains throughout the State, area covered during kharif was 68.90 lakh hectares against the target of 69 lakh hectares. Food grains production is anticipated to be about 99.39 lakh tonnes against 99.42 lakh tonnes in 1999-2000." ಇದರ ಪ್ರಕಾರ ಸುಮಾರು 30 ಸಾವಿರ ಟನ್ ಆಹಾರ ಉತ್ಪಾದನೆ ಕಡಿಮೆಯಾಗಿದೆ ಎಂಬುದು ತಿಳಿದು ಬರುತ್ತದೆ. ಆದರೆ ತಾವು ಸಂವೃದ್ಧಿಯಾದ ಬೆಳೆ ಬಂದಿದೆಯೆಂದು ಬಜೆಟ್ ಭಾಷಣದಲ್ಲಿ ಹೇಳಿದರೆ ಇದು ಎಷ್ಟರಮಟ್ಟಿಗೆ ಸತ್ಯವಾಗಿದೆ ಎಂಬ ಬಗ್ಗೆ ಪ್ರಶ್ನೆ ಮಾಡಬೇಕಾಗುತ್ತದೆ. ತಾವು ಬಜೆಟ್‌ನಲ್ಲಿ ಹೇಳಿರುವ ಅಂಕಿ ಅಂಶವನ್ನು ಎಷ್ಟರಮಟ್ಟಿಗೆ ನಂಬಬೇಕು ಎಂಬ ಬಗ್ಗೆ ಪ್ರಶ್ನೆ ಮಾಡಿಕೊಳ್ಳಬೇಕಾಗಿದೆ. ಎಕ್ಸಪೋರ್ಟ್‌ನ ಬಗ್ಗೆ ಸೆಲ್ಫ್ ರೆಗ್ಯುಲೇಟರಿಂಗ್, ಸೆಲ್ಫ್ ಟ್ರಿಗರಿಂಗ್ ಎನ್ನತಕ್ಕ ಹೊಸ ಹೊಸ ಪದಗಳನ್ನೆಲ್ಲಾ ಉಪಯೋಗ ಮಾಡುತ್ತಿದ್ದೀರಿ. ವ್ಯಾಪಾರ ರಂಗದಲ್ಲಿ ಚಾಪೆ ಕೆಳಗೆ ತೂರುವವರು, ರಂಗವಲ್ಲಿ ಕೆಳಗೆ ತೂರುವವರು ಇರುವಾಗ ಇದು ಸಾಧ್ಯವಿಲ್ಲ. ಶೇರು ಮಾರುಕಟ್ಟೆಯಲ್ಲಿ ಬಹಳ ಬುದ್ಧಿವಂತರು ಏನೆಲ್ಲಾ ಕಂಪ್ಯೂಟರ್‌ಗಳನ್ನು ಇಟ್ಟುಕೊಂಡು ನಡೆಸುತ್ತಿರುವ ಸಂದರ್ಭದಲ್ಲೇ ಏನೇನಾಯಿತು ಎಂಬುದು ತಮಗೆಲ್ಲಾ ಗೊತ್ತಿದೆ. ಹರ್ಷದ್ ಮೆಹತಾ ಪ್ರಕರಣ, ಹೇಗೆ ನಡೆಯಿತು ಎಂಬುದು ತಮಗೆಲ್ಲಾ ಗೊತ್ತಿದೆ. ಅಂಥ ಪರಿಸ್ಥಿತಿಯಲ್ಲಿ ಕೃಷಿಗೆ ಸಂಬಂಧಪಟ್ಟಂತೆ ಸೆಲ್ಫ್ ರೆಗ್ಯುಲೇಟರಿ, ಸೆಲ್ಫ್ ಟ್ರಿಗರಿಂಗ್ ವ್ಯವಸ್ಥೆ ಬರಲು ಹೇಗೆ ಸಾಧ್ಯವಾಗುತ್ತದೆ? ಇದರ ಬಗ್ಗೆ ಸಹ ತಾವು ಯೋಚನೆ ಮಾಡಬೇಕೆಂದು ಹೇಳಬಯಸುತ್ತೇನೆ. ವಾಟರ್‌ಶೆಡ್‌ನ ಬಗ್ಗೆ ತಾವು ಹೇಳಿದ್ದೀರಿ, ಆದರೆ ಇದರಲ್ಲಿ ತಮ್ಮ ಪಾಲೇನಿದೆ? ಅವರು ಇವರು ಕೊಟ್ಟಿರುವ ಬಗ್ಗೆ ಮಾತ್ರ ಹೇಳಿದ್ದೀರಿ. ಇದರಲ್ಲಿ ತಮ್ಮ ಪಾಲು ಏನೇನೂ ಇಲ್ಲ. ಕೃಷಿಗೆ ಸಂಬಂಧಪಟ್ಟಂತೆ ಕೆಲವು ಒಳ್ಳೆಯ ವಿಚಾರಗಳನ್ನು ಹೇಳಿದ್ದೀರಿ. ತಮ್ಮ ಬಯೋಟೆಕ್ನಾಲಜಿ ಪಾಲಿಸಿಯೇನಿದೆ ಅದನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಈ ದೇಶದಲ್ಲಿ ಕೃಷಿಯನ್ನು

ವರ್ಟಿಕಲ್ ಆಗಿ ಬೆಳೆಸಲು ಸಾಧ್ಯವಿದೆಯೇ ವಿನಹ ಹಾರಿಜಂಟಲ್ ಆಗಿ ಬೆಳೆಸಲು ಸಾಧ್ಯವೇ ಇಲ್ಲ. ಬಯೋಟೆಕ್ನಾಲಜಿಯಲ್ಲಿ ಮೆರಿಟ್ಸ್ ಮತ್ತು ಡೀಮೆರಿಟ್ಸ್ ಎರಡೂ ಇದೆ. ಡೀಮೆರಿಟ್ಸ್‌ನ ಬಗ್ಗೆ ನಾವು ಎಚ್ಚರಿಕೆ ವಹಿಸುವ ಅವಶ್ಯಕತೆ ಇದೆ. ಇದರಲ್ಲಿ ತಾವು ಮಾಡಿರುವ ಕೆಲಸವನ್ನು ಒಪ್ಪಿಕೊಳ್ಳುತ್ತೇನೆ, ಇದು ಇನ್ನೂ ವೇಗವಾಗಿ ಆಗಬೇಕೆಂದು ಹೇಳಬಯಸುತ್ತೇನೆ. ನಮ್ಮಲ್ಲಿ ಆಗ್ರೋಪ್ರೋಸೆಸಿಂಗ್ ಎನ್ನುವಂಥಾದ್ದು ತುಂಬಾ ನೆಗ್ಲಿಜಿಬಲ್. ಹಾರ್ಟಿಕಲ್ಚರ್ ಕ್ರಾಪ್‌ಗಳಲ್ಲಿ ನಾವು ಲೆಕ್ಕ ಹಾಕಿದರೆ 1.6 ರಷ್ಟು ಮಾತ್ರ ಈ ದೇಶದಲ್ಲಿ ಪ್ರೋಸೆಸಿಂಗ್ ಆಗುತ್ತಾ ಇದೆ. ಇದನ್ನು ಮಾನ್ಯ ಮುಖ್ಯಮಂತ್ರಿಯವರು ದಯಮಾಡಿ ಗಮನಿಸಬೇಕು. ಇದನ್ನು ಮನಗಂಡು ನಾವು ದಕ್ಷಿಣ ಕರ್ನಾಟಕದಲ್ಲಿ ಮತ್ತು ಉತ್ತರ ಕರ್ನಾಟಕ ಭಾಗದಲ್ಲಿ ಒಂದೊಂದು ಕಡೆ ಆಗ್ರೋಪ್ರೋಸೆಸಿಂಗ್ ಪಾರ್ಕ್‌ನ್ನು ಮಾಡಬೇಕೆಂದು ಅಂದು ನಾವು ತೀರ್ಮಾನವನ್ನು ತೆಗೆದುಕೊಂಡಿದ್ದೆವು. ಇವೊತ್ತು ತಾವುಗಳು ಮಾಲೂರು ಮತ್ತು ಬಾಗಲಕೋಟೆಯಲ್ಲಿರತಕ್ಕಂಥದ್ದರ ಜೊತೆಗೆ ನೀವು ಮದ್ದೂರನ್ನು ಸೇರಿಸಿಕೊಂಡಿದ್ದೀರಿ. ಚಿತ್ರದುರ್ಗ ಸೇರಿಸಿಕೊಂಡಿದಿದ್ದೀರಿ. ಇದನ್ನು ಎರಡು ಕಡೆಗಳಲ್ಲಿ ದೊಡ್ಡದಾಗಿ ಮಾಡಬೇಕೆಂಬ ತೀಮಾ ನವು ನಮ್ಮದಾಗಿತ್ತು. ಅದೇ ಪ್ರೋಸೆಸಿಂಗ್ ಯೂನಿಟ್‌ಗಳನ್ನು ಇನ್ನೂ ಎರಡು ಕಡೆ ಹೆಚ್ಚು ಮಾಡಬೇಕೆಂಬ ತೀರ್ಮಾನವನ್ನು ನೀವು ಮಾಡಿದ್ದೀರಿ. ಇದಕ್ಕೆ ನಿಮ್ಮ ಇನ್‌ಫರ್ಮೇಷನ್ ಟೆಕ್ನಾಲಜಿ, ಬಯೋಟೆಕ್ನಾಲಜಿಗಳ ಬಗ್ಗೆ ಯಾವ ಒತ್ತನ್ನು ನೀವು ಕೊಡುತ್ತಾ ಇದ್ದೀರಿ ಅದಕ್ಕಿಂತ ಹೆಚ್ಚಿನ ಒತ್ತನ್ನು ನೀವು ಆಗ್ರೋ ಪ್ರೋಸೆಸಿಂಗ್ ಯೂನಿಟ್‌ಗಳಿಗೆ ಕೊಡುವ ಅವಶ್ಯಕತೆಯಿದೆ. ಏಕೆಂದರೆ ಅದೊಂದು ರೀತಿಯಲ್ಲಿ ಶಾಕ್‌ಅಬ್‌ಸಾರ್ಬರ್ ಇದ್ದಹಾಗೆ. ನಮ್ಮ ರೈತರಿಗೆ ಇನ್‌ಫರ್ಮೇಷನ್ ಸಿಸ್ಟಂ ಇಲ್ಲದೆ ಇರುವುದರಿಂದ ಕಣ್ಣುಮುಚ್ಚಿಕೊಂಡು Indian farmaer gambles with monsoon and governments also ಒಂದೊಂದು ಸರಕಾರ ಬಂದಾಗ ಒಂದೊಂದು ನೀತಿಯನ್ನು ಮಾಡುತ್ತಿರುವುದರಿಂದ ರೈತರ ಮೇಲೆ ಕಲ್ಲು ಚಪ್ಪಡಿ ಎಳೆಯುವುದಕ್ಕೆ ಏನೇನು ಸಾಧ್ಯವಿದೆಯೋ ಅಂಥ ವ್ಯವಸ್ಥೆ ಈ ದೇಶದಲ್ಲಿ ಆಗುತ್ತಿದೆ. ಬಹಳ ಮುಖವಾಗಿರತಕ್ಕಂಥ ಆಗ್ರೋಪ್ರೋಸೆಸಿಂಗ್‌ನಂಥ ವಿಚಾರವನ್ನು ಮರೆತೇ ಬಿಟ್ಟಿದ್ದಾರೆ. ಹೀಗೆ ಮರೆತಿರುವ ಕಾರಣದಿಂದಾಗಿ ಇವೊತ್ತಿನ ದಿವಸ ಬೆಲೆಗಳು ಇಷ್ಟೊಂದು ಏರಿಳಿತಕ್ಕೆ ಗುರಿಯಾಗಬೇಕಾಗಿದೆ. ಆದ್ದರಿಂದ, ಇನ್ನು ಮುಂದಾದರೂ ಕೂಡ ಈ ಆಗ್ರೋಪ್ರೋಸೆಸಿಂಗ್ ಕೂಡ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡಬೇಕೆನ್ನುವುದಕ್ಕೆ ನೀವು ಪ್ರಯತ್ನಪಡಬೇಕು. ಮತ್ತೆ ಕನ್‌ಸೆಷನ್ಸ್ ಏನೆಲ್ಲಾ ಇದ್ದಾವೆ, ಅದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಕೊಡಬೇಕು, ನಮ್ಮ ಸರಕಾರ ಇದ್ದಂಥ ಕಾಲದಲ್ಲಿ ಒಂದು ಆಗ್ರೋಪ್ರೋಸೆಸಿಂಗ್ ಪಾಲಿಸಿಯನ್ನು ಮಾಡಿ ಸರಕಾರಿ ಆಜ್ಞೆಯನ್ನೂ ಕೂಡ ಹೊರಸಿದ್ದೇವೆ. ಅದನ್ನೆಲ್ಲಾ ತಾವುಗಳು ಪರಿಶೀಲನೆ ಮಾಡಿ ಅದರಲ್ಲಿ ಇನ್ನು ಏನಾದರೂ ಮಾಡಿಫಿಕೇಷನ್ಸ್ ಮಾಡುವುದರಲ್ಲಿ ಮಾಡಿ ಇದನ್ನು ಯಥೋಚಿತವಾದ ರೀತಿಯಲ್ಲಿ ದಯಮಾಡಿ ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರು ನನಗೆ ಇನ್ನಷ್ಟು ಅವಕಾಶ ಮಾಡಿಕೊಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ಬೈರೇಗೌಡರವರೇ, ತಮ್ಮ ಸರಕಾರದ ಅವಧಿಯಲ್ಲಿ ತಾವುಗಳು ಸಚಿವರಾಗಿ ಐದು ಗಂಟೆಗಳ ಕಾಲ ಉತ್ತರ ಕೊಟ್ಟಿರುವುದನ್ನು ಅರಿತುಕೊಂಡಿದ್ದೇನೆ. ತಮ್ಮಲ್ಲಿ ದೀರ್ಘಕಾಲ ಭಾಷಣ ಮಾಡುವ ಶಕ್ತಿಯು ಇದೆ. ಆದರೆ ಈಗ ತಮಗೆ ಅವಕಾಶ ಕೊಡಲು ಹೆಚ್ಚಿನ ಅವಕಾಶವಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಬೈರೇಗೌಡರು ಬಹಳಷ್ಟು ಚರ್ಚೆ ಮಾಡಿದಲ್ಲಿ ಮಾನ್ಯ ಮುಖ್ಯಮಂತ್ರಿಯವರಿಗೂ ಕೂಡ ಉತ್ತರಿಸಲು ಸಮಯವಿಲ್ಲ.

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೇ, ತಾವುಗಳು ಬಹಳ ಶ್ರಮ ವಹಿಸಿ ಈ ಆಯೋಗಗಳನ್ನು ರಚನೆ ಮಾಡಿದ್ದೀರಿ. ಮಾನ್ಯ ವೀರಪ್ಪ ಮೊಯಿಲಿಯವರ ಅಧ್ಯಕ್ಷತೆಯಲ್ಲಿ ಮಾಡಿರತಕ್ಕಂಥ ಆಯೋಗ ತನ್ನ ವರದಿಯನ್ನು ಕೊಟ್ಟಿದೆ. ಅದರಲ್ಲಿ 1,450 ಕೋಟಿ ರೂಪಾಯಿಗಳಷ್ಟು ಹಣ ಎಕ್ಸೈಸ್ ಬಾಬಿನಲ್ಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು): ಆಯೋಗದವರು ಆ ಮೊತ್ತವನ್ನು ಈ ವರ್ಷದ್ದು ಎಂದು ಹೇಳಿಲ್ಲ. ಇದು ಅವರ ಕಾಲದಿಂದ, ನಿಮ್ಮ ಕಾಲದಿಂದ ನಡೆದುಕೊಂಡು ಬಂದಿದೆ ಎಂದು ಹೇಳಿದ್ದಾರೆ. ಅದೆಲ್ಲವನ್ನೂ ಸೇರಿಸಿ ಅವರು ಹೇಳಿದ್ದಾರೆ. ತಾವುಗಳು ಅದನ್ನು ಓದಿ ನೋಡಬೇಕು.

ಶ್ರೀ ಸಿ. ಬೈರೇಗೌಡ: ಆಯಿತು, ಆದರೆ ನಾನು ಆ ಕಡೆಯಲ್ಲಿ ಕುಳಿತಾಗ ಒಂದು ಮಾತು ಈ ಕಡೆಯಲ್ಲಿ ಕುಳಿತಾಗ ಒಂದು ಮಾತು ಎಂಬ ರೀತಿಯಲ್ಲಿ ಹೇಳುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಾವುಗಳು ಆ ಕಡೆಯಲ್ಲಿ ಕುಳಿತಾಗ ಎಕ್ಸೈಸ್ ಮೇಲೆ ಗಂಟೆಗಟ್ಟಲೆ ಮಾತನಾಡಿದ್ದೀರಿ. ನಾವು ಅನೇಕ ವಿಚಾರಗಳನ್ನು ಹೇಳಿದಾಗ ನೀವು ಅದಕ್ಕೆ ಒಪ್ಪಲೇ ಇಲ್ಲ. ಅಗ್ರಿಕಲ್ಚರ್ ವಿಚಾರದಲ್ಲಿ ನೀವು ಒಂದೇ ಉಸಿರಲ್ಲಿ ಆರು ಗಂಟೆಗಳ ಕಾಲ ಉತ್ತರವನ್ನು ಕೊಟ್ಟಿದ್ದೀರಿ.

ಶ್ರೀ ಸಿ. ಬೈರೇಗೌಡ: ನಾನು 1983-84ರ ಸಮಯದಲ್ಲಿ ಆ ಕಡೆಯುಲ್ಲಿ ಕುಳಿತಿದ್ದ ಸಂದರ್ಭದಲ್ಲಿ ಒಂದು ದಿವಸಕ್ಕೆ ಒಂದು ಕೋಟಿ ರೂಪಾಯಿಗಳಷ್ಟು ಹಣ ಇದರಲ್ಲಿ ಸೋರಿ ಹೋಗುತ್ತದೆ ಎಂಬ ಮಾತನ್ನು ಹೇಳಿದ್ದು ಆ ಬಗ್ಗೆ ದಾಖಲೆ ಕೂಡ ಇದೆ.

(ಗೊಂದಲ)

ಹಿಂದಿನ ಮುಖ್ಯಮಂತ್ರಿಯವರಾಗಿದ್ದಂಥ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಇರುವಾಗಲೇ ಒಂದು ದಿವಸಕ್ಕೆ ಒಂದು ಕೋಟಿ ರೂಪಾಯಿಗಳು ಸೋರಿ ಹೋಗುತ್ತಿದೆ ಎಂದು ಹೇಳಿದ್ದೇನೆ. ಇವೊತ್ತು ಕೂಡ ಒಬ್ಬ ಮುಖ್ಯಮಂತ್ರಿಯಾಗಿರತಕ್ಕಂಥವರು ಅದೆಲ್ಲವನ್ನೂ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಆಡಳಿತ ಸೂತ್ರ ಹಿಡಿದಿರತಕ್ಕಂಥವರಿಗೆ ಎಲ್ಲಿ ಏನಾಗುತ್ತಿದೆಯೆಂಬುದು ಎಲ್ಲವೂ ಗೊತ್ತಿರುತ್ತದೆ. ಹಾಗೆ ಎಲ್ಲವೂ ಗೊತ್ತಿರತಕ್ಕಂಥವರೇ ಇವೊತ್ತು ತಮ್ಮ ವರದಿಯಲ್ಲಿ 1,450 ಕೋಟಿ ರೂಪಾಯಿಗಳಷ್ಟು ಸೋರಿ ಹೋಗುತ್ತಾ ಇದೆ ಎಂದು ಹೇಳಿದ್ದಾರೆ. ಆದ್ದರಿಂದ, ಅವರ ಮಾತುಗಳನ್ನು ಅಷ್ಟು ಲಘುವಾಗಿ ತೆಗೆದುಕೊಳ್ಳಲು ನಾನಂತೂ ತಯಾರಾಗಿಲ್ಲ. ಆದರೆ ಅದು ತುಂಬಾ ಕನ್ಸರ್‌ವೇಟಿವ್ ಎಸ್ಟಿಮೇಟ್ ಎಂಬುದನ್ನು ನಾನೂ ಕೂಡ ಒಪ್ಪುತ್ತೇನೆ. ರಾಜ್ಯದಲ್ಲಿ ಪೂರ್ತಿಯಾಗಿ ನೂರಕ್ಕೆ ನೂರರಷ್ಟು ಸೋರಿಕೆಯನ್ನು ತಪ್ಪಿಸುತ್ತೇವೆಂದು ಯಾರಾದರೂ ಭ್ರಮಿಸಿದ್ದರೆ, ಅದು ಸಾಧ್ಯವಿಲ್ಲ. ಅದು ನಮ್ಮೆಲ್ಲರ ಅನುಭವ ಕೂಡ ಆಗಿದೆ ಎಂಬುದನ್ನು ಮನಗಂಡಿದ್ದೇವೆ. ಆದರೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಅಂದರೆ

ದಿವಸಕ್ಕೆ ಒಂದು ಕೋಟಿ ಸೋರಿಕೆ ಇರತಕ್ಕಂಥಾದ್ದು ದಿವಸಕ್ಕೆ ನಾಲ್ಕು ಕೋಟಿ ಸೋರಿಕೆ ಆಗತಕ್ಕಂಥ ಪರಿಸ್ಥಿತಿಯಲ್ಲಿ ನಿಮ್ಮ ಕ್ರಮಗಳೇನು ಸ್ವಾಮಿ? ನೀವು ಈ ದಿಕ್ಕಿನಲ್ಲಿ ಹಾಲೋಗ್ರಾಂ ಹಾಕುತ್ತೇವೆಂದು ಹೇಳಿದ್ದೀರಿ. ಇದೇ ಮಾತನ್ನು ರಾಜಶೇಖರಮೂರ್ತಿಯವರು ಇಲ್ಲಿದ್ದಾಗ ಸೆಕ್ಯೂರಿಟಿ ಲೇಬಲ್ ಹಾಕುತ್ತೇವೆಂದು ಹೇಳಿದ್ದರು. ಅವರು ಹೇಳಿದ ಕೆಲವೇ ದಿವಸಗಳಲ್ಲಿ ಸೆಕ್ಯೂರಿಟಿ ಲೇಬಲ್‌ಗಳು ಲಾರಿಗಟ್ಟಲೆ ಸಿಕ್ಕಿತು. ಅಂತೆಯೇ ನಿಮ್ಮ ಹಾಲೋಗ್ರಾಂಗಳ ಸ್ಥಿತಿಯೂ ಅದೇ ಆಗುತ್ತದೆ. ಅದೇ ಲಾಬಿಗೆ ವ್ಯಾಗನ್‌ಗಟ್ಟಲೆ ಹಾಲೋಗ್ರಾಂಗಳನ್ನು ಮಾಡುವ ಶಕ್ತಿ ಇದೆ. ಈ ರಂಗದಲ್ಲಿರತಕ್ಕಂಥವರು ಅಂತ ಪ್ರಬಲರಾಗಿದ್ದಾರೆ. You have resorted to fix halogram on the liquor bottles. But this is not going to serve the purpose at all. ನಾನು ಮಾನ್ಯ ವೀರೇಂದ್ರ ಪಾಟೀಲರು ತಮ್ಮ ಜಾಗದಲ್ಲಿ ಕುಳಿತಿದ್ದಾಗ ಒಂದು ಮಾತನ್ನು ಹೇಳಿದ್ದೆ. ಅದನ್ನು ತಮಗೂ ಕೂಡ ಹೇಳಲಿಚ್ಛಿಸುತ್ತೇನೆ. ಆ ಸ್ಥಾನದಲ್ಲಿ ಕುಳಿತಿರತಕ್ಕಂಥವರಿಗೆ ಇದನ್ನು ಕಡಿಮೆ ಮಾಡತಕ್ಕಂಥಾದ್ದು, ಸೆಕೆಂಡ್ಸ್‌ನ್ನು ಕಡಿಮೆ ಮಾಡತಕ್ಕಂಥದ್ದು ಕಂಟ್ರೋಲ್ ಮಾಡತಕ್ಕಂಥಾದ್ದು ಮಿನಿಮೈಸ್ ಮಾಡತಕ್ಕಂಥಾದ್ದು it is a matter of seconds ಇವೊತ್ತಿನ ದಿವಸ ನೀವು ಅದನ್ನು ಬಿಟ್ಟು ಹಾಲೋಗ್ರಾಂ ಹಾಕುತ್ತೇವೆ ಎಂದರೆ that is not going to help ಅದೆಲ್ಲಾ ಆಗುವುದಿಲ್ಲ ಸ್ವಾಮಿ. ನಿಮಗೆ ಇದನ್ನು ನಿಲ್ಲಿಸುತ್ತೇವೆಂಬ ಇಚ್ಛಾಶಕ್ತಿಯು ಇರಬೇಕು. ಆ ಇಚ್ಛಾಶಕ್ತಿ ಇದ್ದರೆ ಹಾಲೋಗ್ರಾಂ ಬೇಡ, ಬೇರೆ ಏನೂ ಬೇಡ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು): ಹಾಗಾದರೆ ನೀವು ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು, ಹಾಗೆಯೇ ನಾವು ಆ ಬಗ್ಗೆ ಬಿಟ್ಟ ಕ್ರಮಗಳೇನು ಎಂದು ಹೇಳಬಹುದಲ್ಲವೇ?

ಶ್ರೀ ಸಿ. ಬೈರೇಗೌಡ: ಅದೆಲ್ಲವನ್ನೂ ನಾನು ಇಲ್ಲಿ ಹೇಳುವುದಕ್ಕೆ ತಯಾರಾಗಿಲ್ಲ. ನಮಗೂ ಅನೇಕ ವಿಚಾರಗಳು ಗೊತ್ತಿವೆ. ನೀವು ನಿಮ್ಮಲ್ಲಿ ಚರ್ಚೆ ಮಾಡಿದ್ದನ್ನೆಲ್ಲಾ ಇಲ್ಲಿ ಬಂದು ಹೇಳುತ್ತೀರಾ? ನೀವು ಚರ್ಚೆ ಮಾಡುವ ಅನೇಕ ವಿಚಾರಗಳು ನಮಗೆ ಗೊತ್ತಿಲ್ಲವೆಂದು ಅಂದುಕೊಂಡಿದ್ದೀರಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, in the interest of government and in the interest of the people ಈಗ ತಾವುಗಳು ಸೆಕೆಂಡ್ಸ್‌ನ್ನು ಒಂದು ಸೆಕೆಂಡ್‌ನಲ್ಲಿ ನಿಲ್ಲಿಸಬಹುದೆಂಬ ಅಭಿಪ್ರಾಯ ಹೇಳಿದ್ದೀರಿ. ಹಾಗಾದರೆ ಒಂದು ಸೆಕೆಂಡ್ ಕೆಲಸದಿಂದ ಕೋಟ್ಯಾಂತರ ರೂಪಾಯಿಗಳು ಸಿಗುತ್ತಿತ್ತು ಅಂದರೆ, ಆ ಸಲಹೆಯನ್ನು ನಿಮ್ಮ ಸರಕಾರದಲ್ಲಿಯೂ ತೆಗೆದುಕೊಂಡು ಮಾಡಬಹುದಾಗಿತ್ತು. ತಮ್ಮ ಮಂತ್ರಿಮಂಡಳದಲ್ಲಿ ತಮ್ಮ ಪ್ರಭಾವವೂ ಜಾಸ್ತಿ ಇತ್ತು. ಕೊನೆಕೊನೆಗಂತೂ ಆ ಒಂದು ಪ್ರಭಾವದಿಂದಲೇ ಇವೊತ್ತು ತಾವುಗಳು ಅಧ್ಯಕ್ಷರಾಗಿ ಉಳಿದಿದ್ದೀರಿ. ಅಂದಾಗ ಖಂಡಿತವಾಗಿ ಒಂದು ಸೆಕೆಂಡ್‌ನಲ್ಲಿಯೇ ಸೆಕೆಂಡ್ಸ್ ಕ್ಲೋಸ್ ಮಾಡತಕ್ಕಂಥ ಸ್ಕೀಮ್ ನಿಮ್ಮಲ್ಲಿದ್ದಿದ್ದರೆ ಜೆ.ಹೆಚ್. ಪಟೇಲರು ತತ್‌ಕ್ಷಣವೇ ಮಾಡುತ್ತಿದ್ದರು. ಅಂಥ ಸ್ಕೀಮ್ ಏನಾದರೂ ಇದ್ದರೆ ನಮಗೆ ಕೊಟ್ಟರೆ ಆ ಬಗ್ಗೆ ನಾವಾದರೂ ಯೋಚನೆ ಮಾಡುತ್ತೇವೆ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ: ಮಾನ್ಯ ಅಧ್ಯಕ್ಷರೇ, ಸೆಕೆಂಡ್ಸ್ ಕ್ಲೋಸ್ ಮಾಡುವ ವಿಚಾರದಲ್ಲಿ ನಾನು ಆಗ ಮಾತನಾಡುವಾಗ ಹೇಳಿದ್ದೇನೆ. ಸೆಕೆಂಡ್ಸ್ ಬರುವುದು ಯಾವ ಡಿಸ್ಟಿಲರಿಯಿಂದ ಎಂದು ಗೊತ್ತಾಗುತ್ತದೆ. ಅಲ್ಲಿ ಸರಕಾರದ ಅಧಿಕಾರಿಯೊಬ್ಬ ಇದ್ದಾನೆ. Keep him under suspension. ಅದು ಯಾವ ಡಿಸ್ಟಿಲರಿಯಿಂದ ಬಂದಿದೆ ಎಂದೂ ಕೂಡ ಗೊತ್ತಾಗುತ್ತದೆ. ಈ ವಿಚಾರದಲ್ಲಿ ಯಾವ ಸರಕಾರವನ್ನೂ ಬ್ಲೇಮ್ ಮಾಡುತ್ತಿಲ್ಲ.

(ಗೊಂದಲ)

ನೀವು ಅಂಥ ಅಕ್ರಮದಲ್ಲಿ ಭಾಗಿಯಾದ ಡಿಸ್ಟಿಲರಿಗಳ ಲೈಸನ್ಸ್ ಕ್ಯಾನ್ಸಲ್ ಮಾಡಬಹುದು.

4.50 ಪಿ.ಎಂ.

ನಿಮ್ಮ ಸರ್ಕಾರವನ್ನು ನಾನು ಬ್ಲೇಂ ಮಾಡುತ್ತಿಲ್ಲ, ಹಲವಾರು ವರ್ಷಗಳಿಂದ ಇದು ನಡೆದುಬಂದಿದೆ.

ಶ್ರೀ ಸಿ. ಬೈರೇಗೌಡ: ಆದ್ದರಿಂದ, ಇದು ಬಹಳ ಮುಖ್ಯವಾಗಿರುವ ವಿಚಾರ. ಸರ್ಕಾರಕ್ಕೆ ಅಪಾರವಾದ ಹಣ ಸೋರಿಕೆಯಾಗುತ್ತಿರುವುದನ್ನು, ತಪ್ಪಿಸಬಹುದು. ಜನರ ಬಾಯಲ್ಲೂ ಕೂಡ ಇದೆ, ಮತ್ತು ಅಧಿಕೃತ ಆಯೋಗ ಏನು ರಚನೆ ಮಾಡಿದ್ದಿರಿ ಆ ಆಯೋಗ ಕೂಡ ಸಲಹೆ ಕೊಟ್ಟಿದೆ. ನಾನು ಸರ್ಕಾರದಲ್ಲಿದ್ದಾಗಲೂ ಅನೇಕರಿಗೆ ಹೇಳಿದೆ, ನೋಡಪ್ಪ ಈ ಅಬ್ಕಾರಿಯವರ ಸಹವಾಸವೇ ಬೇಡ. ಆಡಳಿತ ನಡೆಸುವ ನಮ್ಮನ್ನೆಲ್ಲಾ ಕೂಡ ಜನ ಇವತ್ತು ಸಂಶಯಾತ್ಮಕ ದೃಷ್ಟಿಯಿಂದ ನೋಡುತ್ತಾರೆ, ಎಕ್ಸೈಜ್‌ನವರ ಹತ್ತಿರ, ಅವರ ಹತ್ತಿರ ಇಷ್ಟು ಹೋಗಿದರು ಎಂದು. ಅವರ ಸಹವಾಸವೇ ಬೇಡವೆಂದು ಹೇಳಿದೆ, ನನ್ನ ಮಾತು ನಡೆಯಲಿಲ್ಲ. ಅದನ್ನು ಒಪ್ಪಿಕೊಳ್ಳಲು ನಾನು ಇಷ್ಟಪಡುತ್ತೇನೆ. ನೀವೂ ಕೂಡ ಅಂತಹ ಗಟ್ಟಿಮನಸ್ಸು ಮಾಡಿ ಇವರನ್ನು ದೂರವಿಡುವ ಕೆಲಸ ಮಾಡಿ. ಚರಿತ್ರೆಯಲ್ಲಿ ನಮೂದಾಗುವ ಕೆಲಸ ನಿಮ್ಮಿಂದಾಗುತ್ತದೆ.

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ ಸಚಿವರು): ಹತ್ತಿರ ಕರೆದುಕೊಂಡಿದ್ದಾರೆಂದು ನಿಮಗೆ ಹೇಳಿದವರು ಯಾರು? ಹಲವಾರು ವರ್ಷಗಳಿಂದ ಎಂದು ಆಯೋಗ ಹೇಳಿರುವುದು.

ಶ್ರೀ ಸಿ. ಬೈರೇಗೌಡ: ಎಷ್ಟೇ ವರ್ಷ ಇರಬಹುದು, ಆದರೆ ಅಪಾರವಾದ ಹಣ ಇದರಲ್ಲಿ ಸೋರಿಕೆಯಾಗುತ್ತಿದೆ ಎಂದಿದ್ದಾರೆ.

ಶ್ರೀ ಕೆ.ಎಚ್. ರಂಗನಾಥ್: ಇರಬಹುದು, ಇಲ್ಲವೆನ್ನುವವರು ಯಾರು? ನೀವೂ ದೂರವಿರಿ ನಾವೂ ದೂರವಿರುತ್ತೇವೆ, ಅಷ್ಟೇ.

ಶ್ರೀ ಸಿ. ಬೈರೇಗೌಡ: ನಾವು ದೂರವಿರುವ ಪ್ರಶ್ನೆನೇ ಇಲ್ಲ. ಯಾಕೆಂದರೆ ನೀವು ಇವತ್ತು ಹತ್ತಿರ ಇಟ್ಟುಕೊಂಡಿರುವವರು. ನಮ್ಮ ಹತ್ತಿರ ಯಾರೂ ಬರುವುದಿಲ್ಲ.

ಶ್ರೀ ಕೆ.ಎಚ್. ರಂಗನಾಥ್: ಬೈರೇಗೌಡರೇ, ಬಹಳ ದಿವಸದಿಂದ ಇದನ್ನು ನಾನು ನೋಡಿದ್ದೇನೆ. ಕೆಲವು ಹಿತ್ತಿಲಬಾಗಿಲಿನಿಂದ ಓಡಾಡುವವರು ಇರುತ್ತಾರೆ, ಮುಂಬಾಗಿಲಿನಿಂದ

ಓಡಾಡುವವರು ಇರುತ್ತಾರೆ. ಇದೆಲ್ಲಾ ಇರುತ್ತದೆ, ಇದು ಸ್ವಲ್ಪ ಕಷ್ಟದ ಮಾತಿದೆ. ಸುಮ್ಮನೆ ಗಲಾಟೆ ಮಾಡಿದಾಕ್ಷಣ ನಾವೆಲ್ಲಾ ನಿವಾರಣೆ ಮಾಡಿಬಿಟ್ಟೆವು ಎಂದು ಹೇಳಿದಂತೆ ಆಗುವುದಿಲ್ಲ. ಅದರ ಬದಲು ಏನು ಮಾಡಬೇಕು ಎಂದು ಸಲಹೆ ಹೇಳಿ. ತಮ್ಮ ಪಕ್ಷದ ನಾಣಯ್ಯ ಚೆನ್ನಾಗಿ ಹೇಳುತ್ತಿದ್ದರು ಆ ಮನೆಯಲ್ಲಿ, ನಿಮ್ಮಷ್ಟು ಗಲಾಟೆಯೇನೂ ನೋಡಲಿಲ್ಲ, ಒಳ್ಳೆಯ ರಚನಾತ್ಮಕ ಸಲಹೆ ಕೊಡುತ್ತಿದ್ದರು. ಹೇಗೆ ಮಾಡಿದರೆ ಕಡಿಮೆ ಆಗಬಹುದೆಂದು ಹೇಳಿ.

ಶ್ರೀ ಸಿ. ಬೈರೇಗೌಡ: ದೂರವಿಡಿ ಎಂಬುದಕ್ಕಿಂತ ಉತ್ತಮ ಸಲಹೆ ಯಾವುದು ಹೇಳಿ? ಅದಕ್ಕೇ ಹೇಳಿದ್ದು, ಇದು ಕೆಲವು ಕ್ಷಣಗಳ ಕೆಲಸ ಎಂದು. ಈಗ ಮುಖ್ಯಮಂತ್ರಿಗಳು ಬೆಂಗಳೂರು ಬಗ್ಗೆ ಬಹಳ ಕಾಳಜಿ ವಹಿಸುತ್ತಿದ್ದಾರೆ. ತಾವೂ ಚುನಾವಣೆ ಎದುರಿಸಿದ್ದೀರಿ, ನಾವೂ ಎದುರಿಸಿ ಬಂದಿದ್ದೇ ಚುನಾವಣೆ ಸಂದರ್ಭಗಳಲ್ಲಿ ಏನಾದರೂ ಬ್ಯಾನರ್ ಕಟ್ಟಿದರೆ ಅದಕ್ಕೆ ಪಂಚಾಯಿತಿಗೆ ಇಲ್ಲ ಮುನಿಸಿಪಾಲಿಟಿಗೆ ಅಥವಾ ಬೆಂಗಳೂರಲ್ಲಾದರೆ ಕಾರ್ಪೋರೇಷನ್‌ಗೆ ಹಣ ಕಟ್ಟಬೇಕು. ಮೊನ್ನೆ ಇವರ ಪಕ್ಷದ ಸಭೆ ಬೆಂಗಳೂರಲ್ಲಿ ಆಯಿತು. ಆಗ ಬೆಂಗಳೂರಿನಲ್ಲಿ ಬ್ಯಾನರ್‌ಗಳು ಮತ್ತೊಂದು ಮಗದೊಂದು ರಾರಾಜಿಸುತ್ತಿತ್ತು. ಪತ್ರಿಕೆಗಳಲ್ಲಿ ಫೋಟೋ ಬಂತು, ಏನೇನಾಯಿತು ಎಂದು ವರದಿಗಳು ಬಂದಿವೆ. ಇವತ್ತು ನಮ್ಮ ಸ್ನೇಹಿತರು ಮಾತನಾಡಿದಾಗ ತಾವು ನಿನ್ನೆ ಹೇಳುತ್ತಿದ್ದಿರಿ, ನೀವೆಲ್ಲಾ ಪತ್ರಿಕೆ ಓದುತ್ತೀರೋ ಇಲ್ಲವೋ ಎಂದು.

ಶ್ರೀ ಕೆ.ಎಚ್. ರಂಗನಾಥ್: ಅಧ್ಯಕ್ಷರೇ, ಬೈರೇಗೌಡರನ್ನು ಬಹಳ ದಿವಸದಿಂದ ನಾನು ನೋಡಿದ್ದೇನೆ. ಯಾಕೆ ಇತ್ತೀಚೆಗೆ ಒಂದು ತರಹ ಆಗುತ್ತಿದ್ದಾರೆ ಇವರು. ನಾನು ಹಾಗೆ ಹೇಳಿದೆನೆ? ವಿಶ್ವೇಶ್ವರಹೆಗಡೆ ಮಾತನಾಡುತ್ತಿದ್ದರು, ಚಿಕ್ಕವಯಸ್ಸಿನವರು, ಸಂಪಾದಕೀಯಗಳನ್ನೆಲ್ಲಾ ಓದಿರಬಹುದು, ಹೆಚ್ಚಿಗೆ ಬೆಳಕು ಚೆಲ್ಲುತ್ತೀರಿ ಎಂದು ಭಾವನೆ ಮಾಡಿದ್ದೆ, ತಾವು ಯಾಕೋ ಬೆಳಕು ಚೆಲ್ಲುತ್ತಿಲ್ಲವಲ್ಲಾ ಅಂದೆನೇ ಹೊರತು ಬೈರೇಗೌಡರು ಪೇಪರ್ ಓದಿಲ್ಲ ಎಂದು ಹೇಳಿದೆನೇ?

ಶ್ರೀ ಸಿ. ಬೈರೇಗೌಡ: ಪ್ರಜಾವಾಣಿಯಲ್ಲಿ ಇವತ್ತು ಬಂದಿದೆ, ಜಾಸ್ತಿ ಕುಡಿಯಿರಿ ಕಡಿಮೆ ಓದಿರಿ ಎಂಬ ಹಣೆಬರಹವಿದೆ. ಎಂದರೆ ಪುಸ್ತಕಗಳ ಮೇಲೆ ತೆರಿಗೆ ಹಾಕಿದ್ದಾರೆ, ಬೀರನ್ನು ಫ್ರೀಯಾಗಿ ಎಲ್ಲಿ ಬೇಕಾದರೂ ಮಾರಾಟ ಮಾಡಬಹುದು, 30 ಹೋಲ್‌ಸೇಲ್ ಕೊಡುತ್ತೇವೆ ಎಷ್ಟೋ ರೀಟೇಲ್‌ಶಾಪ್ಸ್ ಕೊಡುತ್ತೇವೆಂದಿದ್ದಾರೆ. ಹಾಗೆ ಮಾಡಿರುವುದಕ್ಕೂ ಮೊನ್ನೆ ನಡೆದಿರುವುದಕ್ಕೂ ಸಂಬಂಧವಿದೆ. ಮೊನ್ನೆ ನಡೆದ ಎಐಸಿಸಿ ಸಭೆಗೂ ಬೀರನ್ನು ಇಷ್ಟೊಂದು ಪುಗಸಟ್ಟೆ ಮಾರಲು ಹೊರಟಿದ್ದೀರಲ್ಲಾ ಅದಕ್ಕೂ ಇದಕ್ಕೂ ಸಂಬಂಧವಿದೆ. ಮತ್ತು ಬೆಂಗಳೂರಿನಲ್ಲಿ ರಾರಾಜಿಸುತ್ತಿರುವ ಬ್ಯಾನರ್‌ಗಳಿಗೆ ಇವರು ಹಣ ಕಟ್ಟಿದ್ದಾರೆಯೇ? ಲೆಕ್ಕ ಕೊಡಬೇಕು. ಇವತ್ತಿಗೂ ಬ್ಯಾನರ್‌ಗಳನ್ನು ತೆಗೆದಿಲ್ಲ, ದಿನಕ್ಕಿಷ್ಟು ಎಂದೂ ಕೊಡಬೇಕಾಗುತ್ತದೆ, ಎಷ್ಟು ಹಣ ಕಟ್ಟಿದ್ದೀರೆಂದು ನೀವು ಲೆಕ್ಕ ಕೊಡಬೇಕಾಗುತ್ತದೆ. ಆ ರೀತಿ 20-25 ಕೋಟಿ ರೂಪಾಯಿ ಹಣ ಖರ್ಚಾಯಿತಲ್ಲಾ, ಎಲ್ಲಿಂದ ಬಂತು ಇದೆಲ್ಲಾ? ಇದನ್ನು ರಾಜ್ಯದ ಜನತೆಗೆ ಹೇಳಬೇಕಾಗುತ್ತದೆ.

ಮಾನ್ಯ ಸದಸ್ಯರು: ಒಂದು ತಿಂಗಳ ಸಂಬಳ ನಾವೆಲ್ಲಾ ಕೊಟ್ಟಿದ್ದೇವೆ.

ಶ್ರೀ ಸಿ. ಬೈರೇಗೌಡ: ಇವರದೆಲ್ಲಾ ಸಂಬಳ ಸೇರಿದರೆ 25 ಕೋಟಿ ರೂಪಾಯಿಗಳೇ ಆದರೆ ಇವರ ಸಂಬಳ ಯಾವುದು ಎಂದು ಗೊತ್ತಾಯಿತಲ್ಲಾ. ಇಲ್ಲಿ ಏನು ನಡೆದಿದೆಯೆಂದು

ರಾಜ್ಯದ ಜನತೆ ನೋಡುತ್ತಿದ್ದಾರೆ, ಅವರಿಗೆ ತಿಳಿಸಬೇಕಾದ ಅವಶ್ಯಕತೆಯೂ ಇದೆ, ಇನ್ನು ಈ ಬಜೆಟ್‌ನಲ್ಲಿ ಕೆಲವು ಬಾಬ್ತುಗಳಿಗೆ, ಅಡಿಕೆ ಇರಬಹುದು ಸ್ವಲ್ಪ ವಿನಾಯಿತಿ ಕೊಟ್ಟಿದ್ದಾರೆ, ಅದನ್ನು ನಾನು ಒಪ್ಪುತ್ತೇನೆ. ಇದೇ ವೈಶಾಲ್ಯತೆಯನ್ನು ತಾವು ಬಡ್ಡಿ ಸುಸ್ತಿಬಡ್ಡಿ ಮನ್ನಾ ಮಾಡುವುದರಲ್ಲಿ ತೋರಬೇಕಾಗಿತ್ತು. ಆ ಅಪರಾಧ ಇವತ್ತು ನಿಮ್ಮಿಂದ ಆಗಿದೆ. ಒಂದು ಕಡೆ ಇಲ್ಲಿ ಎಐಸಿಸಿ ಸಭೆಯನ್ನು ನೀವು ಅದ್ದೂರಿಯಾಗಿ ಮಾಡುತ್ತೀರಿ, ಆದರೆ ಸಾಯುತ್ತಿರುವ ರೈತನ ನೆರವಿಗೆ ಬರದೇ ಇರುವ ಸರ್ಕಾರವನ್ನು ಖಂಡಿಸಿ ತಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ, ನಮಸ್ಕಾರಗಳು.

+ ಶ್ರೀ ಎನ್. ಚಲುವರಾಯಸ್ವಾಮಿ (ನಾಗಮಂಗಲ): ಮಾನ್ಯ ಅಧ್ಯಕ್ಷರೇ, 2001-02ನೇ ಆಯವ್ಯಯದ ಮಂಡನೆಯ ವಿಚಾರದಲ್ಲಿ ಮಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತಾ ಮಾನ್ಯ ಮುಖ್ಯಮಂತ್ರಿಗಳು ಪ್ರಥಮವಾಗಿ ಆರ್ಥಿಕ ಪರಿಸ್ಥಿತಿಯ ಬಗ್ಗೆ 'ಕರ್ನಾಟಕ ತೀವ್ರ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿಲ್ಲ, ನಿಜ, ಹಾಗೆಂದು ರಾಜ್ಯದ ಆರ್ಥಿಕ ಸ್ಥಿತಿ ಆಶಾದಾಯಕವಾಗಿಲ್ಲ' ಎನ್ನುವುದನ್ನು ಹೇಳಿದ್ದಾರೆ. ಈ ವಿಚಾರವನ್ನು ನಾವಂತೂ ಮುಖ್ಯಮಂತ್ರಿಗಳ ಅನುಭವದಲ್ಲಿ ಅವರ ಬುದ್ಧಿವಂತಿಕೆಯಲ್ಲಿ ತುಂಬಾ ಅಪಾರವಾದ ಒಂದು ವಿಶ್ವಾಸವನ್ನು, ನಂಬಿಕೆಯನ್ನು ಇಟ್ಟುಕೊಂಡಿರತಕ್ಕವನು. ನನಗೆ ಒಂದು ಅನುಮಾನ ಬರುತ್ತದೆ. ಕಳೆದ 1994ನೇ ಇಸವಿಯಲ್ಲಿ ಕಾಂಗ್ರೆಸ್ ಸರ್ಕಾರ ಬಿಟ್ಟುಕೊಟ್ಟ ಸಂದರ್ಭವನ್ನು ನಾವೇಕೆ ಜ್ಞಾಪಕವನ್ನು ಮಾಡಿಕೊಳ್ಳಬಾರದು? ಅವತ್ತು ಇದ್ದಂಥ ಪರಿಸ್ಥಿತಿ ಪಿಯರ್‌ಲೆಸ್ ಕಂಪನಿಯಿಂದ ಸಾಲ ಇರಬಹುದು, ಅಥವಾ ಟ್ರೆಜರಿಯಿಂದ ಯಾವುದೇ ಬಿಲ್ ಪಾವತಿಯಾಗದೇ ಇರತಕ್ಕ ಪರಿಸ್ಥಿತಿ ಇರಬಹುದು. ಅಂಥ ಪರಿಸ್ಥಿತಿಯಲ್ಲಿ 1994 ರಲ್ಲಿ ಬಂದಂಥ ಸರ್ಕಾರ ಕೊನೆಯವರೆಗೂ ಆರ್ಥಿಕ ಪರಿಸ್ಥಿತಿಯನ್ನು ಕೊಂಡೊಯ್ದು ಕೊನೆಯಲ್ಲಿ ಬಿಟ್ಟುಕೊಟ್ಟ ಪರಿಸ್ಥಿತಿಯನ್ನು ಸಹಾ ನಾವು ನೋಡಬಹುದು. ಆದರೆ ಈಗ ಇಷ್ಟು ಬೇಗ ಕಳೆದ ಮೊದಲನೇ ಬಜೆಟ್‌ನಲ್ಲಿ ನಿನ್ನೆ ಮಾನ್ಯ ಸದಸ್ಯರಾದ ವಿಶ್ವೇಶ್ವರ ಹೆಗಡೆಯವರು ಮಾತನಾಡುತ್ತಾ ಹೇಳಿದರು. ಈಗ ಒಂದೂವರೆ ವರ್ಷದಿಂದಲೂ ಭರವಸೆಯ ಕಾಲ ಮುಗಿದಿದೆ, ಮತ್ತೆ ಈಗ ಕೆಲಸ ಮಾಡುವ ಸ್ಥಿತಿಗೆ ಹೋಗಬೇಕೆಂದು ಹೇಳಿದ್ದಾರೆ. ನಾವು ಇಲ್ಲಿಯವರೆಗೂ ಭರವಸೆಯನ್ನು ಕೊಟ್ಟುಕೊಂಡು ಬಂದಿದ್ದೆವು, ಇನ್ನು ಮೇಲೆ ಅನುಷ್ಠಾನವನ್ನು ಮಾಡುತ್ತೇವೆ ಎನ್ನುವುದನ್ನು ಸರ್ಕಾರ ಒಪ್ಪಿದೆ ಎನ್ನುವುದನ್ನು ನಾವು ಸ್ಮರಿಸಬೇಕಾಗುತ್ತದೆ. ಇದರ ಜೊತೆಗೆ ಆರ್ಥಿಕವಾಗಿ ಸಂಪನ್ಮೂಲ ಎಲ್ಲಿ ಸೋರಿಹೋಗುತ್ತಿದೆ, ಎಲ್ಲಿ ಕ್ರೋಢೀಕರಿಸಬಹುದು, ಅದರ ಬಗ್ಗೆಯೂ ನಾವು ಸರಿಯಾದ ರೀತಿಯಲ್ಲಿ ಸಮಗ್ರವಾಗಿ ಅಧ್ಯಯನ ಮಾಡದೇ ಇದ್ದರೆ ಸಾಲವನ್ನು ತಂದು ಈ ರಾಜ್ಯವನ್ನು ಅಭಿವೃದ್ಧಿ ಮಾಡತಕ್ಕ ಸ್ಥಿತಿಯನ್ನು ನಾವು ಸಂಪೂರ್ಣವಾಗಿ ಅವಲಂಬಿಸಿದರೆ ಮುಂದಿನ ದಿನಗಳಲ್ಲಿ ನಾವು ಎದುರಿಸಬೇಕಾದ ಪರಿಸ್ಥಿತಿಯನ್ನೂ ಸಹಾ ಗಂಭೀರವಾಗಿ ಯೋಚನೆ ಮಾಡಬೇಕಾಗುತ್ತದೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಗಂಭೀರವಾಗಿ ಈ ವಿಚಾರದಲ್ಲಿ ಯೋಚನೆ ಮಾಡಬೇಕು ಎಂದು ಹೇಳುತ್ತೇನೆ. ವಿದ್ಯುಚ್ಛಕ್ತಿ ಬಗ್ಗೆ ಅವರು ಹೇಳಿದ್ದಾರೆ. ದಿವಸಕ್ಕೆ ಎಂಟು ಗಂಟೆಗಳ ಕಾಲ ರೈತರಿಗೆ ಕರೆಂಟನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ತುಂಬಾ ಸ್ವಾಗತ. ಆದರೆ ರಾತ್ರಿಹೊತ್ತುಕೊಡುತ್ತೇನೆಂದು ಹೇಳಿದ್ದಾರೆ, ರೈತರು ಮಲಗುವುದು ಬೇಡ ಎಂದು. ಬೆಳಿಗ್ಗೆ ಹೊತ್ತು ಬೇರೆ ಕೆಲಸಗಳು ಇರುತ್ತವೆ. ರಾತ್ರಿಹೊತ್ತು ನೀರು ಹಾಯಿಸುತ್ತಾರೆ. ಅಂದರೆ ಬೆಳಿಗ್ಗೆ ರಾತ್ರಿ ಎರಡೂ ಹೊತ್ತು ಕೆಲಸ ಮಾಡಲಿ ಎಂದು

ಮಾಡಿದ್ದಾರೆ. ಈಗ ರೈತರು ಅನುಭವಿಸುತ್ತಿರುವ ಕಷ್ಟ ಇನ್ನಷ್ಟು ಜಾಸ್ತಿಯಾಗಲಿ ಎಂದು ಮಾಡಿದ್ದಾರೆ. ಎಂಟು ಗಂಟೆಗಳ ಕಾಲ ರಾತ್ರಿ ಹೊತ್ತು ಕೂಡ ಕೊಡುವುದಕ್ಕಾಗುವುದಿಲ್ಲ. ಏಕೆಂದರೆ ಕಳೆದ 20-30 ವರ್ಷದ ಹಿಂದೆ ಇದ್ದ ಕೆಇಬಿ ವ್ಯವಸ್ಥೆ ಇವತ್ತಿಗೂ ಮುಂದುವರಿಯುತ್ತಿದೆ. ಇವತ್ತು ನೂರೆಂಟು ಕನೆಕ್ಷನ್‌ಗಳು ಹೆಚ್ಚಾಗಿದ್ದರೂ ಅದೇ ವ್ಯವಸ್ಥೆ ಮುಂದುವರಿಯುತ್ತಿದೆ. ಇಂಥ ಸಂದರ್ಭದಲ್ಲಿ ಯಾವ ರೀತಿ ಸರಿಯಾದ ರೀತಿಯಲ್ಲಿ ಕರೆಂಟನ್ನು ಕೊಡುವುದಕ್ಕೆ ಸಾಧ್ಯ ಎನ್ನುವುದನ್ನು ನಾವು ಯೋಚಿಸಬೇಕಾಗುತ್ತದೆ. ಇವತ್ತು ಒಬ್ಬ ರೈತ ಎರಡು ಎಕರೆ ಜಮೀನು ಇಟ್ಟುಕೊಂಡಿದ್ದು ಹೊಸ ಪಂಪ್‌ಸೆಟ್ ಬೇಕು ಎಂದು ಅರ್ಜಿಯನ್ನು ಹಾಕಿಕೊಂಡರೆ ಅದನ್ನು ಕನ್‌ಸಿಡರ್ ಮಾಡಬೇಕಾದರೆ ಮೂರು-ನಾಲ್ಕು ವರ್ಷಗಳು ಬೇಕಾಗುತ್ತವೆ. ಇವತ್ತು ಒಂದು ಟಿಸಿ ಇದ್ದರೆ ವೋಲ್ಟೇಜ್ ಇಲ್ಲದೆ ಅಥವಾ ಟ್ರಿಪ್ ಆಗುವ ಸ್ಥಿತಿಯನ್ನು ನಾವು ದಿವಸ ದಿವಸ ಹೆಚ್ಚಾಗಿ ಎದುರಿಸುವ ಪರಿಸ್ಥಿತಿಯಲ್ಲಿ ಇಂಥ ಆಶ್ವಾಸನೆಗಳನ್ನು ಕೊಡತಕ್ಕದ್ದು ಸರಿಯಲ್ಲ. ಬೇಸಿಕ್ ಆಗಿ ಸಮಗ್ರವಾಗಿ ರೈತರಿಗೆ ನೆರವಾಗುವ ರೀತಿಯಲ್ಲಿ, ಇವತ್ತು ಸರ್ಕಾರ ಸಂಪೂರ್ಣವಾಗಿ ತೊಡಗಿಸಿಕೊಂಡಿಲ್ಲವೆಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇಷ್ಟಾದರೂ ಸಹ ಅವರು ಪವಾಡವನ್ನು ಮಾಡುತ್ತಾರೋ ಇನ್ನೊಂದು ಮಾಡುತ್ತಾರೋ ಅಂತೂ ಸುಧಾರಣೆ ಮಾಡುತ್ತೇವೆಂದು ಹೇಳಿದ್ದಾರೆ. ಮೇ, ಜೂನ್, ಜುಲೈ ತಿಂಗಳಲ್ಲಿ ಆಗ ಮಳೆ ಬರುತ್ತದೆ, ಆಗ ಯಾರೂ ಹೆಚ್ಚಿಗೆ ಕರೆಂಟ್‌ನ್ನು ಕೇಳುವ ಪರಿಸ್ಥಿತಿಯಲ್ಲಿರುವುದಿಲ. ಆಗ ಸಕ್ಸಸ್ ಆಗಬಹುದು. ಆದಾನಂತರ ಮತ್ತೆ ಬೇಸಿಗೆ ಬರುತ್ತದೆ. ಎಂಟು ಗಂಟೆಗಳ ಕಾಲ ಕರೆಂಟನ್ನು ನಿಜವಾಗಿಯೂ ಕೊಟ್ಟರೆ ನಾವು ಸ್ವಾಗತಿಸುತ್ತೇವೆ. ಕೆಲವು ಕಡೆ ಎಂಎಸ್ ಸ್ಟೇಷನ್ ಆಗಬೇಕಾಗುತ್ತದೆ, ಹೊಸ ಟಿಸಿ ಬರಬೇಕಾಗುತ್ತದೆ, ಹೊಸ ಲೈನ್‌ಗಳು ಬರಬೇಕಾಗುತ್ತವೆ, ನನ್ನ ತಾಲ್ಲೂಕಿನಲ್ಲಿ ವಾಟರ್ ಸಪ್ಲೈಗೆ 30 ಕಡೆ ಇನ್ನೂ ಕನೆಕ್ಷನ್ನೇ ಕೊಟ್ಟಿಲ್ಲ. ಏಕೆ ಎಂದು ಕೆಇಬಿ ಇಂಜನಿಯರ್‌ರವರನ್ನು ಕೇಳಿದರೆ ಕಂಬ ಇಲ್ಲ, ಸ್ಟಾರ್ಟರ್ ಇಲ್ಲ, ಅನೇಕ ಸಣ್ಣಪುಟ್ಟ ಮೆಟೀರಿಯಲ್ಸ್‌ನ ಕೊರತೆ ಇದೆ, ಶಾಸಕರ ಹತ್ತಿರ ಇದರ ಬಗ್ಗೆ ಹೇಳಬೇಡಿ ಎಂದು ಹೇಳಿದ್ದಾರೆ ಸ್ವಾಮಿ ಎಂದು ಅವರು ಹೇಳುತ್ತಾರೆ. ಅವರಿಗೆ ನಾವು ನಿಧಾನವಾಗಿ ಕೊಡುತ್ತೇವೆ. ನಾವು ಕೊಟ್ಟಂತೆ ಮಾಡಿಕೊಂಡು ಹೋಗಿ ಎಂದು ಹೇಳಿದ್ದಾರೆ ಎನ್ನುತ್ತಾರೆ. ಇಂಥ ಪರಿಸ್ಥಿತಿ ಇವತ್ತು ಇದೆ. ಜನರಿಗೆ ಆಶಾದಾಯಕವಾಗಿರುವ ರೀತಿಯಲ್ಲಿ ಹೇಳಿದ್ದಾರೆ. ಕರೆಂಟನ್ನು ಕೊಟ್ಟರೆ ತುಂಬಾ ಸ್ವಾಗತ. ಇಲ್ಲದಿದ್ದರೆ ರೈತರಿಗೆ ಮತ್ತೊಂದು ಅನ್ಯಾಯವನ್ನು ಮಾಡುತ್ತೀರಿ ಎಂದು ಹೇಳುವುದಕ್ಕೆ ಬಯಸುತ್ತೇನೆ. ಕೃಷಿ ಬಗ್ಗೆ ನಮ್ಮ ಹಿರಿಯ ನಾಯಕರೆಲ್ಲರೂ ಮಾತನಾಡಿದರು. ರೈತರು ಮೊನ್ನೆ ಕೂಡ ಆತ್ಮಹತ್ಯೆ ಮಾಡಿಕೊಂಡಿರುವ ಸಂಗತಿಯನ್ನು ಕೇಳಿದ್ದೇವೆ. ಇಷ್ಟಾದರೂ ಸಹ ವಿಶೇಷವಾಗಿ ರೈತರ ಬಗ್ಗೆ ಕಾಳಜಿಯನ್ನು ಈ ಸರ್ಕಾರ ತೋರಿಲ್ಲ. ಯಾವುದ್ಯಾವುದೋ ಕೆಲಸಕ್ಕೆ ನಾವು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ, ಇವತ್ತು ರೈತರಿಗೋಸ್ಕರ ಬಡ್ಡಿ ಮನ್ನಾ ಮಾಡಲು ತಯಾರಿಲ್ಲ. 300-400 ಕೋಟಿ ರೂಪಾಯಿಗಳನ್ನು ಮನ್ನಾ ಮಾಡುವ ತೀರ್ಮಾನವನ್ನು ತೆಗೆದುಕೊಂಡಿದ್ದರೆ ಸರ್ಕಾರ ರೈತರ ಪರವಾಗಿದೆ, ಸ್ವಲ್ಪ ಆಲೋಚನೆ ಮಾಡಿದೆ, ಇಂಥ ಕೆಟ್ಟಕಾಲದಲ್ಲಿ ರೈತರ ಕಷ್ಟಕ್ಕೆ ಭಾಗಿಯಾಗಿದೆ ಎಂದು ನಾವು ತಿಳಿದುಕೊಳ್ಳಬಹುದಾಗಿತ್ತು. ರೈತರೂ ಸಹ ಸಂತೋಷ ಪಡುತ್ತಿದ್ದರು. ಏಕೆ ಈ ರೀತಿಯಾದ ತೀರ್ಮಾನವನ್ನು ತೆಗೆದುಕೊಳ್ಳಲಿಲ್ಲ? ಕೊನೆಯ ಪಕ್ಷ

ಅಲ್ಪಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತನೆ ಮಾಡತಕ್ಕ ಕೆಲಸವನ್ನು ಸರ್ಕಾರ ಮಾಡಿಲ್ಲ. ರೈತರ ಕಲ್ಯಾಣ ನಿಧಿ ಎಂದು 200 ಕೋಟಿ ರೂಪಾಯಿಗಳನ್ನು ಇಟ್ಟಿರುವುದು ತುಂಬಾ ಸ್ವಾಗತಾರ್ಹವಾಗಿರುವ ವಿಚಾರ. ಆದರೆ ಅದು ಎಷ್ಟು ಉಪಯೋಗ ಸರಿಯಾದ ರೀತಿಯಲ್ಲಿ ಆಗುತ್ತೋ, ಇನ್ನೂ ಹೆಚ್ಚುವರಿ ಬೇಕಾಗುತ್ತೋ ಅದು ಎರಡನೇ ಮಾತು. ಆದರೆ ಇಂಥ ಸಂದರ್ಭದಲ್ಲಿ ಯಾವುದೇ ಭಾಗದಲ್ಲಿ ರೈತ ಬೆಳೆದಂಥ ಬೆಳೆಗೆ ಬೆಲೆ ಕುಸಿತವಾದಾಗ ಆ ಒಂದು ಬರವನ್ನು ತುಂಬಿ ರೈತರ ಕಷ್ಟಕ್ಕೆ ಹೋಗುವ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಈಗ ಕಳೆದ ದಿನಗಳಿಂದ ಆ ರೀತಿ ಒಂದು ವ್ಯವಸ್ಥಿತವಾದ ಕೆಲಸವನ್ನು ಮಾಡಿಲ್ಲವೆಂಬುದು ತಮಗೂ ಗೊತ್ತಿದೆ. ಇದರ ಬಗ್ಗೆ ಸದನದಲ್ಲೂ ಚರ್ಚೆಯಾಗಿರುವುದರಿಂದ ಮುಂದೆ ಈ ಕೆಲಸವನ್ನು ಮಾಡಬೇಕೆಂದು ಒತ್ತಾಯವನ್ನು ಮಾಡುತ್ತೇನೆ. ಏಕೆಂದರೆ ತೆಂಗಿನ ಬೆಳೆ ನಮ್ಮ ಭಾಗದಲ್ಲಿ ಹೆಚ್ಚಿರುವುದರಿಂದ ಅವರ ಕಷ್ಟವನ್ನು ನೋಡುವುದಕ್ಕಾಗುವುದಿಲ್ಲ. ಇವತ್ತು ತರಕಾರಿ ಬೆಳೆಯುವ ಜನರ ಕಷ್ಟವನ್ನು ನೋಡುವುದಕ್ಕಾಗುವುದಿಲ್ಲ. ಇಂಥ ಅನೇಕ ಸಮಸ್ಯೆಗಳು ಇರತಕ್ಕ ಈ ಭಾಗದ ರೈತರ ಕಷ್ಟಕ್ಕೆ ಸಹ ಸರ್ಕಾರ ಭಾಗಿಯಾಗಬೇಕೆಂದು ಹೇಳುತ್ತೇನೆ. ವಸತಿ ವಿಚಾರದಲ್ಲಿ ಹತ್ತು ಲಕ್ಷ ಮನೆಗಳನ್ನು ಕಟ್ಟುತ್ತೇವೆಂದು ಹೇಳಿದ್ದಾರೆ. ಕಳೆದ ಬಾರಿಯೂ ಬಜೆಟ್‌ನಲ್ಲಿ ಹೇಳಿದ್ದರೂ. ಈ ಬಾರಿಯೂ ಹೇಳಿದ್ದಾರೆ. ಇದರ ಬಗ್ಗೆ ಆಗಲೇ ಸಾಕಷ್ಟು ಚರ್ಚೆಯಾಗಿದೆ. ಸರ್ಕಾರ ಬಂದು ಒಂದು ವರ್ಷ ಆರು ತಿಂಗಳಾಗಿದೆ. 640 ಮನೆಗಳನ್ನು ಮಾತ್ರ ನೀವು ಇಲ್ಲಿಯವರೆಗೆ ಕೊಟ್ಟಿರುವುದು. ಹತ್ತು ಲಕ್ಷ ಮನೆಗಳನ್ನು ಮುಗಿಸಬೇಕು ಎಂದರೆ ಒಂದು ವರ್ಷಕ್ಕೆ ಕೊನೆಯ ಪಕ್ಷ 900 ರಿಂದ ಒಂದು ಸಾವಿರ ಮನೆಗಳನ್ನು ಕೊಡಬೇಕು. ಇದು ಎಲ್ಲಿ ಸಾಧ್ಯವಾಗುತ್ತದೆ? ಇಲ್ಲಿಯವರೆಗೆ ನೀವು ಒಂದೂವರೆ ಸಾವಿರ ಮನೆಗಳನ್ನು ಕೊಡಬೇಕಾಗಿತ್ತು. ಇದುವರೆಗೂ ಆರು ನೂರು ಮನೆಗಳನ್ನು ಕೊಟ್ಟಿರುವುದರಿಂದ ಯಾವ ರೀತಿ ಹತ್ತು ಲಕ್ಷ ಮನೆಗಳನ್ನು ಕೊಡುವುದಕ್ಕೆ ಸಾಧ್ಯತೆ ಇದೆ ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಹತ್ತು ಲಕ್ಷ ಮನೆಗಳನ್ನು ಕೊಡುತ್ತೇವೆಂದು ಹೇಳಿರುವುದು ಜನರಿಗೆ ಆಶಾದಾಯಕವಾಗಿಲ್ಲ, ಇದು ಸುಳ್ಳು ಎಂದು ತಾವೇ ಪ್ರೂವ್ ಮಾಡುವುದಕ್ಕೆ ಹೊರಟಿರುವ ಹಾಗೆ ಕಾಣುತ್ತದೆ. ಆಶ್ರಯ ಯೋಜನೆಯ ಬಗ್ಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ವಸತಿ ಸಚಿವರು ಇಲ್ಲಿಯೇ ಇದ್ದಾರೆ. ಆಶ್ರಯ ಸಮಿತಿಯನ್ನು ಮಾಡಿರುವ ಸರ್ಕಾರ ಸಮಿತಿಯಲ್ಲಿ ಮಂಜೂರು ಮಾಡಿರುವ ಮನೆಯನ್ನು ಒಬ್ಬ ಅಧಿಕಾರಿ ಅಪ್ರೂವ್ ಮಾಡುವ ವ್ಯವಸ್ಥೆ ಇದೆ. ಸಿಇಓ ಅವರು ಜಿಲ್ಲಾ ಪಂಚಾಯಿತಿಯವರು ಅಪ್ರೂವ್ ಮಾಡಿ ಆದಾದನಂತರ ಮಂತ್ರಿಯವರು ಪ್ರಿನ್ಸಿಪಾಲ್ ಸೆಕ್ರೆಟರಿ ಮೂಲಕ ಸ್ಟೇಯನ್ನು ಕೊಟ್ಟು ಮತ್ತೆ ರಿಪೋರ್ಟನ್ನು ಕಾಲ್ ಮಾಡಿ ಸಿ.ಇ.ಓ. ಮತ್ತು ಇ.ಓ. ಅವರಿಂದ ರಿಪೋರ್ಟ್ ಬಂದನಂತರ ಸ್ಟೇಯನ್ನು ಕೂಡ ವೆಕೇಟ್ ಮಾಡಿ ಐದು ಲಕ್ಷ ರೂಪಾಯಿಗಳನ್ನೂ ಬಿಡುಗಡೆ ಮಾಡಿ ಕೆಲವು ಭಾಗಗಳಿಗೆ ಹೆಂಚುಗಳನ್ನು ವಿತರಣೆ ಮಾಡಿ ಮಂಜೂರಾತಿ ಪತ್ರವನ್ನೂ ಕೂಡ ಕೊಟ್ಟು ಮತ್ತೆ ಇದು ಸರಿಯಿಲ್ಲ, ಸಿ.ಇ.ಓ. ಮೀಟಿಂಗನ್ನು ಕರೆದು ಮಾಡಿ ಎಂದರೆ ನಾವ್ಯಾಕೆ ಇರಬೇಕು ಸ್ವಾಮಿ? ನೀವುಗಳೇ ಒಪ್ಪಿರುವ ಲಿಸ್ಟನ್ನೇ ನೀವೇ ಮತ್ತೆ ಬದಲಾವಣೆ ಮಾಡಿದರೆ ಹೇಗೆ? ಇದು ನಾಚಿಕೆಗೇಡು. ದಯಮಾಡಿ ಇಂಥ ಕೆಲಸವನ್ನು ಮಾಡಬೇಡಿ. ನನ್ನ ತಾಲ್ಲೂಕಿನಲ್ಲಿ ನೀವೇ ಸಂಪೂರ್ಣವಾಗಿ ತೆಗೆದುಕೊಂಡು ಯಾರಿಗೆ ಬೇಕಾದರೂ ಹಂಚಿ. ನಾಗಮಂಗಲ ತಾಲ್ಲೂಕಿನಿಂದ ಶಾಸಕರನ್ನು ವಿತ್‌ಡ್ರಾ ಮಾಡಿದ್ದೇವೆ,

ಅವರನ್ನು ಆಶ್ರಯ ಕಮಿಟಿಯಲ್ಲಿ ಇಟ್ಟಿಲ್ಲ ಎಂದು ಹೇಳಿ ಮಾಡಿ. ನಾನು ಬೇಜಾರು ಮಾಡಿಕೊಳ್ಳುವುದಿಲ್ಲ. ದಯಮಾಡಿ ಇನ್ನು ಮುಂದಾದರೂ ಈ ರೀತಿ ಮಾಡಬೇಡಿ ಎಂದು ಕೇಳಿಕೊಳ್ಳುತ್ತೇನೆ. ಈ ತರಹವಾದರೆ ನೀವು ಇನ್ನು ಹತ್ತು ಲಕ್ಷದಷ್ಟು ಮನೆ ಹಂಚುವ ಕೆಲಸವನ್ನು ಯಾವಾಗ ಪೂರ್ಣಗೊಳಿಸುತ್ತೀರಿ ಎಂಬುದು ಇಡೀ ರಾಜ್ಯದ ಜನರಿಗೆ, ಈ ಸದನಕ್ಕೆ ಗೊತ್ತಾಗುತ್ತದೆಂಬ ವಿಷಯವನ್ನು ನಾನು ಮತ್ತೊಮ್ಮೆ ವಸತಿ ಸಚಿವರಾದ ಖಮರುಲ್ ಇಸ್ಲಾಂರವರ ಗಮನಕ್ಕೆ ತಂದು ಸ್ಪಷ್ಟಪಡಿಸುತ್ತಿದ್ದೇನೆ. ಇನ್ನು ಪಂಚಾಯತ್ ರಾಜ್ ವ್ಯವಸ್ಥೆ ಬಗ್ಗೆ ಹೇಳುವುದಾದರೆ, ಇಂದಿನ ಪ್ರಜಾಪ್ರಭುತ್ವದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಇರಬೇಕು, ಅದಕ್ಕೆ ಮತ್ತಷ್ಟು ಶಕ್ತಿ ತುಂಬಬೇಕು, ತನ್ಮೂಲಕ ಅಧಿಕಾರ ವಿಕೇಂದ್ರಿಕರಣವಾಗಬೇಕೆನ್ನುವುದು ಎಲ್ಲಾ ನಾಯಕರುಗಳ ಬಹು ದಿನಗಳ ಆಸೆಯಾಗಿದೆ. ಈ ನಿಟ್ಟಿನಲ್ಲಿ ರಾಷ್ಟ್ರದ ಪ್ರತಿಯೊಂದು ರಾಜ್ಯದಲ್ಲೂ ಈ ವ್ಯವಸ್ಥೆಯನ್ನು ಭದ್ರಗೊಳಿಸುತ್ತಿರುವುದನ್ನು ಗಮನಕ್ಕೆ ತಂದುಕೊಳ್ಳಬೇಕಾಗಿದೆ. ಇವೊತ್ತು ಪಂಚಾಯತ್ ರಾಜ್‌ಗೆ ಒಂದು ಲಕ್ಷ ಇದ್ದುದ್ದನ್ನು ಎರಡು ಲಕ್ಷ ಮಾಡಿ ನಂತರ ಅದನ್ನು ಮೂರೂವರೆ ಲಕ್ಷಕ್ಕೇರಿಸಿರುವುದು ತುಂಬಾ ಸ್ವಾಗತಾರ್ಹವಾದುದು. ಆದರೆ, ಒಂದು ನೋವಿನ ಸಂಗತಿ ಕುರಿತು ಸರ್ಕಾರ ಯೋಚಿಸಬೇಕಾಗಿರುವುದನೆಂದರೆ, ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತ್‌ಗಳಿಗೆ ಸರ್ಕಾರ ಬಿಡುಗಡೆ ಮಾಡುವ ಹಣದಲ್ಲಿ, ಗ್ರಾಮ ಪಂಚಾಯಿತಿಗೆ ನೀಡುತ್ತಿರುವ ಮೂರೂವರೆ ಲಕ್ಷ ರೂಪಾಯಿಗಳಲ್ಲಿ ಅಭಿವೃದ್ಧಿ ಕಾಮಗಾರಿಗಾಗಿ ಎಷ್ಟು ಹಣವನ್ನು ಖರ್ಚು ಮಾಡಲಾಗುತ್ತಿದೆ ಎಂಬುದನ್ನು ಗಮನಿಸಬೇಕು. ಮಾನ್ಯ ಸದಸ್ಯರಾದ ಶಿವಪ್ಪನವರು ಮಾತನಾಡುತ್ತಾ ಪಂಚಾಯಿತಿಯವರು ಯಾವ ರೀತಿ ಕೆಲಸ ಹಮ್ಮಿಕ್ಕೊಳ್ಳುತ್ತಾರೆಂಬ ಬಗ್ಗೆ ಒಂದು ನಿದರ್ಶನ ನೀಡಿದರು. ಗ್ರಾಮ ಪಂಚಾಯಿತಿಗೆ ನೀಡುತ್ತಿರುವ ಮೂರೂವರೆ ಲಕ್ಷ ರೂಪಾಯಿಗಳಲ್ಲಿ ಹಳ್ಳಿಯ ಜನರಿಗೆ ಹಾಗೂ ಹಳ್ಳಿಯ ಅಭಿವೃದ್ಧಿಗೆ ಯಾವ ರೀತಿ ಉಪಯೋಗವಾಗುತ್ತದೆಂಬುದನ್ನು ತಾವು ಯೋಚಿಸಿದ್ದೀರಾ? ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲಿ ಇರುವ ವ್ಯವಸ್ಥೆ ಕುರಿತು ತಾವು ಯೋಚಿಸಿದ್ದೀರಾ? ಅಲ್ಲಿನ ಸ್ಥಿತಿ-ಗತಿಯ ಅರಿವಿದೆಯೇ? ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳಲ್ಲಿ ಆಗುತ್ತಿರುವ ಸಂಗತಿ ಎಲ್ಲರಿಗೂ ತಿಳಿದೇ ಇದೆ. ಇದರ ಜೊತೆಗೆ ಶೇಕಡ 20 ರಷ್ಟು ಆದಾಯ ತೆರಿಗೆ, ಮಾರಾಟ ತೆರಿಗೆ, ರಾಯಲ್ಟಿ ಇದ್ದರೆ, ಇನ್ನು ಶೇಕಡ 5 ರಷ್ಟು ಇತರೆ (ಮಿಸಲೇನಿಯಸ್). ಇಲ್ಲಿಯೇ ಶೇಕಡ 50 ರಷ್ಟು ಹಣ ಹೋದರೆ ಉಳಿದ ಶೇಕಡ 50 ರಷ್ಟು ಹಣದಲ್ಲಿ ಗುತ್ತಿಗೆದಾರನ ಲಾಭ ಶೇಕಡ 10 ರಷ್ಟಿದ್ದರೆ ಉಳಿದ ಶೇಕಡ 40 ರಷ್ಟು ಹಣದಲ್ಲಿ ಕೆಲಸ ಮಾಡಬೇಕು. ಸರ್ಕಾರ ಎಷ್ಟೇ ಹಣ ಒದಗಿಸಿದರೂ ಇನ್ನು ನೂರು ವರ್ಷಗಳಾದರೂ ಇದೇ ರೀತಿಯ ವ್ಯವಸ್ಥೆ ಇದ್ದರೆ ಯಾವ ರಸ್ತೆಯೂ, ಯಾವ ಊರೂ ಸಹ ಅಭಿವೃದ್ಧಿಯಾಗುವುದಿಲ್ಲ. ಆದಕಾರಣ, ಇಡೀ ರಾಜ್ಯದಲ್ಲಿ ಎಲ್ಲಾದರೂ ಒಂದು ತಾಲ್ಲೂಕನ್ನು ತೆಗೆದುಕೊಂಡು ಸರ್ಕಾರ ಪಂಚಾಯತ್ ವ್ಯವಸ್ಥೆಗೆ ಕೊಡುತ್ತಿರುವ ಹಣ ಯಾವ ರೀತಿ ಖರ್ಚಾಗುತ್ತಿದೆಯೆಂಬ ಬಗ್ಗೆ ಸಮಗ್ರವಾಗಿ ತನಿಖೆ ನಡೆಸಬೇಕು. ಇವೊತ್ತು ಪಂಚಾಯತ್ ವ್ಯವಸ್ಥೆಯನ್ನು ವಜಾಗೊಳಿಸುವುದಕ್ಕಾಗುವುದಿಲ್ಲವಾದ್ದರಿಂದ ಸೋರಿ ಹೋಗುತ್ತಿರುವ ಹಣವನ್ನು ನಿಲ್ಲಿಸಿ ಹೊಸದಾದ ಮಾದರಿ ವ್ಯವಸ್ಥೆಯೊಂದನ್ನು ತರಲು ಸರ್ಕಾರ ಪ್ರಯತ್ನಿಸಬೇಕಾಗುತ್ತದೆ. ಇನ್ನು ನೀರಾವರಿ ಇಲಾಖೆಯಲ್ಲಿ ಟೆಂಡರ್ ಕರೆಯುವ ವ್ಯವಸ್ಥೆ ಕುರಿತು ಹೇಳುವುದಾದರೆ, ಹತ್ತು ಲಕ್ಷ ರೂಪಾಯಿಗಳ ಕಾಮಗಾರಿಯಿದ್ದರೂ ಅವರೇ ಟೆಂಡರ್

ಕರೆಯಬೇಕಾಗುತ್ತದೆ, ಹತ್ತು ಸಾವಿರ ರೂಪಾಯಿಗಳ ಕಾಮಗಾರಿ ಇದ್ದರೂ ಅವರೇ ಟೆಂಡರ್ ಕರೆಯಬೇಕಾಗುತ್ತದೆ. ಆದರೆ, ಜಿಲ್ಲಾ ಪಂಚಾಯತ್‌ನಲ್ಲಿ ಎರಡು ಲಕ್ಷ ರೂಪಾಯಿಗಳ ಕಾಮಗಾರಿಯಿದ್ದರೆ ಜಿಲ್ಲಾ ಪಂಚಾಯತ್‌ನವರು ಟೆಂಡರ್ ಕರೆಯುವಂತಿಲ್ಲ! ಇಲ್ಲಿ ಆಗಿರುವ ವ್ಯತ್ಯಾಸ, ತಾರತಮ್ಯವನ್ನು ಸರಿಪಡಿಸಿ ಸರ್ಕಾರದಿಂದ ಬಿಡುಗಡೆಯಾಗುವ ಹಣ ನೇರವಾಗಿ ಹಳ್ಳಿಯ ಅಭಿವೃದ್ಧಿಗೆ ವಿನಿಯೋಗವಾಗುವ ದಿಸೆಯಲ್ಲಿ ಅಧ್ಯಯನ ಮಾಡಿ ಸರ್ಕಾರ ಶಿಸ್ತಿನ ಕ್ರಮ ಕೈಗೊಳ್ಳಬೇಕು ಹಾಗೂ ಯಾವ ಉದ್ದೇಶವಿಟ್ಟುಕೊಂಡು ಪಂಚಾಯತ್‌ಗಳಿಗೆ ಸರ್ಕಾರ ಮೂರೂವರೆ ಲಕ್ಷ ರೂಪಾಯಿಗಳನ್ನು ಒದಗಿಸುತ್ತದೋ ಆ ಉದ್ದೇಶ ಈಡೇರಬೇಕೆಂದು ನಾನು ಸರ್ಕಾರದ ಗಮನ ಸೆಳೆಯುತ್ತಿದ್ದೇನೆ. ಇನ್ನು ಆರೋಗ್ಯ ಇಲಾಖೆ ಕುರಿತು ಹೇಳುವುದಾದರೆ, ತಾಲ್ಲೂಕು ಕೇಂದ್ರಗಳಲ್ಲಿರುವ ಆಸ್ಪತ್ರೆಗಳಲ್ಲಿ ಟೆಕ್ನಿಷಿಯನ್ ಇದ್ದರೆ ಎಕ್ಸ್‌ರೇ ತಜ್ಞರಿರುವುದಿಲ್ಲ, ಎಕ್ಸ್‌ರೇ ತಜ್ಞರಿದ್ದರೆ ಟೆಕ್ನಿಷಿಯನ್ ಇರುವುದಿಲ್ಲ. ಅದೇ ರೀತಿ ಸರ್ಜರಿ ಮಾಡುವುದಕ್ಕೆ ಅಗತ್ಯವಿರುವ ಎಲ್ಲಾ ಉಪಕರಣಗಳಿದ್ದರೆ ಅನಸ್ತೇಷಿಯಾ ವೈದ್ಯರಿರುವುದಿಲ್ಲ, ಅನಸ್ತೇಷಿಯಾ ವೈದ್ಯರಿದ್ದರೆ ಸರ್ಜರಿ ಮಾಡುವವರು ಇರುವುದಿಲ್ಲ. ಇಂತಹ ಸ್ಥಿತಿ ರಾಜ್ಯದ ಬಹುತೇಕ ತಾಲ್ಲೂಕು ಆಸ್ಪತ್ರೆಗಳಲ್ಲಿದೆ. ಈ ಸಲ ಈ ಇಲಾಖೆಯಲ್ಲಿ ಮೂರನೇ ಹಾಗೂ ನಾಲ್ಕನೇ ದರ್ಜೆಯ ನೌಕರ ಸಿಬ್ಬಂದಿಗಳನ್ನು ಮಾತ್ರ ಸಮಗ್ರವಾಗಿ ವರ್ಗಾವಣೆ ಮಾಡಲಾಗಿದೆ. ಯಾವ ಉದ್ದೇಶವಿಟ್ಟುಕೊಂಡು ಈ ರೀತಿ ಮಾಡಿದ್ದಾರೋ ಗೊತ್ತಿಲ್ಲ. ಇವೊತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಒಬ್ಬ ವೈದ್ಯರಿದ್ದರೆ, ಅವರಿಗೆ ಸಹಾಯಕರು, ಎ.ಎನ್.ಎಂ. ಇರುವುದಿಲ್ಲ. ಇಂತಹ ಅನೇಕ ಮೂಲಭೂತ ಅಗತ್ಯಗಳ ಕೊರತೆಯಿದೆ. ನೀವು ಮೂಲಭೂತ ಅಗತ್ಯಗಳನ್ನು ಒದಗಿಸದೇ ಎಂಬತ್ತು ಪುಟಗಳ ಆಯವ್ಯಯ ಪತ್ರವಲ್ಲ ಇನ್ನು ಮುಂದೆ ಒಂದು ನೂರ ಇಪ್ಪತ್ತು ಪುಟಗಳ ಆಯವ್ಯಯ ಪತ್ರ ಓದಿದರೂ ಏನೂ ಪ್ರಯೋಜನವಾಗುವುದಿಲ್ಲ. ಆದುದರಿಂದ, ಮೂಲಭೂತ ಅಗತ್ಯವಾಗಿರುವ ಆರೋಗ್ಯ, ಶಿಕ್ಷಣ, ಕುಡಿಯುವ ನೀರಿನ ಸೌಲಭ್ಯ ಹಾಗೂ ರಸ್ತೆಗಳನ್ನು ಅಭಿವೃದ್ಧಿಪಡಿಸುವುದಕ್ಕೆ ರಾಜ್ಯ ಸಚಿವ ಸಂಪುಟದಲ್ಲಿರುವ ಬುದ್ಧಿವಂತ ಮಂತ್ರಿಗಳು ಬಹಳ ದೀರ್ಘವಾಗಿ ಯೋಚಿಸಬೇಕೆಂದು ನಾನು ಹೇಳುತ್ತೇನೆ. ಇನ್ನು ಶಿಕ್ಷಣದಲ್ಲಿ ಕಂಪ್ಯೂಟರ್ ಪರಿಚಯಿಸುತ್ತಿರುವ ಕುರಿತು ತಮ್ಮ ಗಮನಕ್ಕೆ ತರುವುದಾದರೆ, ಈಗಿನ ವಿದ್ಯುತ್ ಸರಬರಾಜಿನ ವ್ಯವಸ್ಥೆಯಲ್ಲಿ ಯಾವ ಊರಿನಲ್ಲಿ ಕಂಪ್ಯೂಟರ್ 'ಆನ್' ಆಗುತ್ತದೆ ಎಂಬುದನ್ನು ತಾವು ನೋಡಬೇಕು. ಹಳ್ಳಿಗಳಲ್ಲಿರುವ ಶಾಲೆಗಳಲ್ಲಿ ಇರುವ ವ್ಯವಸ್ಥೆ ಹೇಗಿದೆಯೆಂದರೆ, ಒಂದು ಶಾಲೆಯಲ್ಲಿ ಎರಡು ಕೊಠಡಿಗಳಿರುತ್ತವೆ ಮತ್ತು ಐದು ತರಗತಿಗಳಿರುತ್ತವೆ. ಒಂದೊಂದು ಕೊಠಡಿಯಲ್ಲಿ ಮೂರು ತರಗತಿಗಳನ್ನಿಟ್ಟುಕೊಂಡು ಪಾಠ ಮಾಡಬೇಕಾಗುತ್ತದೆ, ಪಾಠ ಮಾಡಲು ಇಬ್ಬರು ಮಾಸ್ತರು ಇರುತ್ತಾರೆ. ಒಂದು ತರಗತಿಗೆ ಒಬ್ಬರು ಮಾಸ್ತರು ಪಾಠ ಹೇಳುತ್ತಿದ್ದರೆ ಉಳಿದ ತರಗತಿಯ ಮಕ್ಕಳು ನಗುತ್ತಿರುತ್ತಾರೆ! ಪರಿಸ್ಥಿತಿ ಹೀಗಿರುವಾಗ, ಒಂದೇ ತರಗತಿಗೆ ಒಂದೇ ಕೊಠಡಿಯಿದ್ದು ಪ್ರತಿಯೊಂದು ತರಗತಿಗೂ ಒಬ್ಬೊಬ್ಬ ಮಾಸ್ತರಿರಬೇಕು. ಒಟ್ಟು ಐದು ತರಗತಿಗಳಿದ್ದರೆ ಐದು ಜನ ಮಾಸ್ತರಿರಬೇಕು. ಇಂತಹ ಸ್ಥಿತಿಯನ್ನು ಮೊದಲು ನಿರ್ಮಾಣ ಮಾಡಿದಲ್ಲಿ ಮತ್ತು ಪ್ರಾಥಮಿಕ ಶಿಕ್ಷಣವನ್ನು ಭದ್ರಗೊಳಿಸಿ ಕಂಪ್ಯೂಟರ್ ಮೂಲಕ ಮಕ್ಕಳಿಗೆ ಸರಿಯಾದ ರೀತಿಯಲ್ಲಿ ಶಿಕ್ಷಣ ಒದಗಿಸಿದರೆ ಹೈಸ್ಕೂಲು ಮತ್ತು ಕಾಲೇಜು ಹಂತಗಳಲ್ಲಿ

ಅವರುಗಳಿಂದ ಈ ದೇಶವನ್ನು ಸುಭದ್ರವಾಗಿರಿಸುವ ನಿಟ್ಟಿನಲ್ಲಿ ಏನಾದರೂ ನಿರೀಕ್ಷಿಸಲು ಸಾಧ್ಯವಾಗುತ್ತದೆ. ಹಿಂದಿನ ಸರ್ಕಾರ ಸುಮಾರು ಒಂದೂವರೆ ಲಕ್ಷದಷ್ಟು ಶಿಕ್ಷಕರನ್ನು ನೇಮಕ ಮಾಡಿದೆ. ಆದರೆ, ಈ ಸರ್ಕಾರ ಅಧಿಕಾರಕ್ಕೆ ಬಂದು ಒಂದೂವರೆ ವರ್ಷವಾದರೂ ಶಿಕ್ಷಕರ ಕೊರತೆ ಬಗ್ಗೆ ಇನ್ನೂ ಯೋಚಿಸುವ ಸ್ಥಿತಿಯಲ್ಲಿಲ್ಲ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ದಿಕ್ಕಿನಲ್ಲಿ ಕೆಲವು ಹೊಸ ಬದಲಾವಣೆ ತರುವುದರತ್ತ ಗಮನಹರಿಸಿರುವುದು ಒಳ್ಳೆಯದು. ಆದುದರಿಂದ, ಇದನ್ನು ನಾನು ತುಂಬಾ ಸಂತೋಷದಿಂದ ಸ್ವಾಗತಿಸುತ್ತೇನೆ. ಆದರೆ, ಪ್ರಾಥಮಿಕ ಹಂತದಲ್ಲಿರುವ ಶಿಕ್ಷಕರ ಕೊರತೆ, ಕೊಠಡಿಗಳ ಕೊರತೆ ಮತ್ತು ಶಿಕ್ಷಣದ ಗುಣಮಟ್ಟದ ಕೊರತೆಯತ್ತ ಸಚಿವರು ಕೈಹಾಕಿಲ್ಲದಿರುವುದರಿಂದ ಶಿಕ್ಷಣ ರಂಗದಲ್ಲಿ ಮುಂದೆ ತಾವೇನೇ ಬದಲಾವಣೆ ತಂದರೂ ಏನೂ ಪ್ರಯೋಜನವಾಗುವುದಿಲ್ಲ. ಅ, ಆ, ಇ, ಈ ಮತ್ತು ಎ.ಬಿ.ಸಿ.ಡಿ. ಕಲಿಸದೇ ಮಕ್ಕಳಿಗೆ ಕಂಪ್ಯೂಟರ್ ಕೊಟ್ಟರೆ ಅವರೇನು ಮಾಡುತ್ತಾರೆ? ಅದರಿಂದ ಏನು ಪ್ರಯೋಜನವಾಗುತ್ತದೆ? ಬದಲಾಗಿ ಕಂಪ್ಯೂಟರ್ ಶಿಕ್ಷಣ ಮಾಡಿದಂತಹವರಿಗೆ, ಕಂಪ್ಯೂಟರ್ ಒದಗಿಸಿಕೊಟ್ಟ ಏಜೆನ್ಸಿಯವರಿಗೆ ಇದರಿಂದ ಉಪಯೋಗವಾಗುತ್ತದೆಯೇ ವಿನಾ ಇನ್ಯಾರಿಗೂ ಸಹ ಉಪಯೋಗವಾಗುವುದಿಲ್ಲವಾದ್ದರಿಂದ ಸರ್ಕಾರ ಇದರತ್ತ ಗಮನಹರಿಸಿ ಆಯವ್ಯಯ ಪತ್ರದಲ್ಲಿ ಶಿಕ್ಷಣ ರಂಗಕ್ಕೆ ನೀಡಿರುವ ಆದ್ಯತೆಯನ್ನೊಮ್ಮೆ ನೀವು ದಯಮಾಡಿ ಪುನರ್ ಪರಿಶೀಲಿಸಬೇಕು. ಇನ್ನು ನೀರಾವರಿ ಬಗ್ಗೆ ಹೇಳುವುದಾದರೆ, ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರ ಬಗ್ಗೆ ನನಗೆ ಬಹಳ ಅಪಾರವಾದ ಗೌರವಿದೆ. ಇದುವರೆವಿಗೂ ಬರೀ ಬಾಕಿ ಬಿಲ್ ಪಾವತಿಸುತ್ತಾ ಬಂದಿರುವ ಈ ಸರ್ಕಾರ ಜನರಿಗೆ ನೀರನ್ನು ಯಾವ ರೀತಿ ಒದಗಿಸಿಕೊಡುತ್ತದೆಂಬುದನ್ನು ಯೋಚಿಸಬೇಕಾಗಿದೆ. ಹೇಮಾವತಿ ನೀರನ್ನು ಒದಗಿಸಿಕೊಡಬೇಕೆಂದು ಕಳೆದ ಸಲ ಸಂಬಂಧಪಟ್ಟ ಕ್ಷೇತ್ರಗಳ ಶಾಸಕರುಗಳೆಲ್ಲರೂ ಸೇರಿ ತಮ್ಮ ಮುಂದೆ ಒಂದು ಬೇಡಿಕೆ ಇಟ್ಟು ಇದಕ್ಕಾಗಿ ನೂರು ಕೋಟಿ ರೂಪಾಯಿಗಳನ್ನು ಒದಗಿಸಿಕೊಡಬೇಕೆಂದು ಕೋರಿದೆವು. ತಾವು ನಲವತ್ತು ಕೋಟಿ ರೂಪಾಯಿಗಳನ್ನಷ್ಟೆ ಕೊಟ್ಟಿರಿ. ಇವತ್ತು ಅಷ್ಟೂ ಹಣ ಪೆಂಡಿಂಗ್ ಬಿಲ್ಲಿಗೆ ಜಮಾ ಆಗಿ, ಇನ್ನೂ ಮೂವತ್ತು ಕೋಟಿ ರೂಪಾಯಿಗಳಷ್ಟು ಪೆಂಡಿಂಗ್ ಬಿಲ್ ಇದೆ. ಇವತ್ತು ಅಷ್ಟೇ ಹಣ ಆಡಳಿತ ಮತ್ತು ನಿರ್ವಹಣೆಗೆ ಖರ್ಚಾಗುತ್ತದೆ. ಗೊರೂರು ಮತ್ತು ತುಮಕೂರು ವಲಯಗಳ ನೀರಾವರಿ ಯೋಜನೆಗೆ ಪ್ರತಿ ವರ್ಷವೂ ನೂರು ಕೋಟಿ ರೂಪಾಯಿಗಳಂತೆ ಮೂರು ವರ್ಷಗಳ ಕಾಲ ಒದಗಿಸಿಕೊಟ್ಟರೆ ಯೋಜನೆ ಪೂರ್ಣಗೊಳ್ಳುತ್ತದೆ. ಆದುದರಿಂದ, ಒಂದು ಯೋಜನೆ ಯಾವ ಸ್ಥಿತಿಯಲ್ಲಿದೆ? ಯೋಜನೆಯನ್ನು ಪೂರ್ತಿಗೊಳಿಸಲು ಯಾವ ರೀತಿ ಹಣ ಬಿಡುಗಡೆ ಮಾಡಬೇಕೆಂಬ ಬಗ್ಗೆ ಸರ್ಕಾರ ಸಮಗ್ರವಾಗಿ ಚಿಂತನೆ ಮಾಡದಿದ್ದರೆ ಮುಂಬರುವ ದಿನಗಳಲ್ಲಿ ಕೆಟ್ಟ ಆರ್ಥಿಕ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಇನ್ನು ಆಡಳಿತ ಸುಧಾರಣೆ ಕುರಿತು ಹೇಳುವುದಾದರೆ, ಯಾವ ಅಧಿಕಾರಿಗಳೂ ಸಹ ಇವತ್ತಿನ ದಿವಸ ಆಸಕ್ತಿಯಿಂದ ಕೆಲಸ ಮಾಡುವ ಸ್ಥಿತಿಯಲ್ಲಿಲ್ಲ. ವರ್ಗಾವಣೆ ಎಂಬ ಅಸ್ತ್ರವನ್ನು ಉಪಯೋಗಿಸಬಹುದೆಂದರೆ ಎಲ್ಲರಿಗೂ ಶಿಫಾರಸ್ಸು ಇದೆ. ಇವತ್ತು ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಒಬ್ಬ ಜವಾನನಿಗೆ ಗಾಡ್ ಫಾದರ್ ಆಗಿ ಒಬ್ಬ ಐ.ಎ.ಎಸ್. ಅಧಿಕಾರಿ ಅಥವಾ ಮತ್ಯಾರೋ ಇರುತ್ತಾರೆ. ಎಸ್.ಪಿ. ಹಾಗೂ ಡಿ.ಸಿ. ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರು ತಮ್ಮ ಮೇಲಾಧಿಕಾರಿಗಳಿಗೆ

ಹೆದರುವ ಸ್ಥಿತಿಯಲ್ಲಿಲ್ಲ. ಸಿಬ್ಬಂದಿ ವರ್ಗದವರು ತಪ್ಪು ಮಾಡಿದಾಗ ತಮ್ಮ ಮೇಲೆ ಕ್ರಮ ಕೈಗೊಂಡಲ್ಲಿ ತಮ್ಮನ್ನು ರಕ್ಷಣೆ ಮಾಡುವವರು ಒಬ್ಬರಿದ್ದಾರೆಂಬ ಭಾವನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ವರ್ತಿಸುತ್ತಿರುವ ಪರಿಸ್ಥಿತಿಯಿರುವ ಈ ಸಂದರ್ಭದಲ್ಲಿ ಇದನ್ನು ತಡೆಗಟ್ಟದಿದ್ದರೆ ಜನರು ತಮಗೆ ಮತ ನೀಡಿ ಗೆಲ್ಲಿಸಿ ರಾಜ್ಯದ ಆಡಳಿತ ನಡೆಸಲು ಏನು ಅಧಿಕಾರ ಕೊಟ್ಟಿದ್ದಾರೆ, ಅವರೇ ಅದನ್ನು ತಿರಸ್ಕರಿಸುವ ಪರಿಸ್ಥಿತಿ ಬರಬಹುದೆಂದು ಹೇಳುತ್ತೇನೆ. ಇನ್ನು ರಾಜ್ಯದ ಶಾಸಕರುಗಳು ತಮ್ಮ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೂ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಒದಗಿಸಿರುವುದು ತುಂಬಾ ಸ್ವಾಗತಾರ್ಹವಾದ ವಿಚಾರವಾಗಿದೆ. ನಾವು ಇದಕ್ಕಾಗಿ ಬಹಳ ದಿವಸಗಳಿಂದ ಹೋರಾಟ ಮಾಡಿದ್ದೆವು. ಆದರೆ, ಇಷ್ಟು ಹಣವನ್ನು ಕೊಡುತ್ತೇವೆಂದು ಒಂದು ಕಡೆ ತೋರಿಸಿ ಮತ್ತೊಂದು ಕಡೆ ಕಿತ್ತುಕೊಳ್ಳುವ ಪರಿಸ್ಥಿತಿಯುಂಟಾಗಿದೆ. ಇದಕ್ಕಾಗಿ ನೀವು ವಿಧಿಸಿರುವ ಷರತ್ತುಗಳನ್ನು ಗಮನಿಸಿದರೆ ಈ ಹಣ ಬಹುತೇಕ ಶಾಸಕರಾದ ನಮಗೆ ತಲುಪುವುದಿಲ್ಲವೆಂಬ ನಂಬಿಕೆ ಬರುತ್ತದೆ. ಸಂಸತ್ ಸದಸ್ಯರಿಗೆ ಅನುದಾನವಾಗಿ ಎರಡು ಕೋಟಿ ರೂಪಾಯಿಗಳನ್ನು ಒದಗಿಸಿಕೊಟ್ಟು ತಮ್ಮ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯಕ್ರಮ ಹಮ್ಮಿಕೊಳ್ಳಲು ಅವರಿಗೂ ಷರತ್ತುಗಳನ್ನು ವಿಧಿಸಲಾಗಿದೆ. ಆದರೆ, ಶಾಸಕರಾಗಿರುವ ನಮಗೆ ಒದಗಿಸಿರುವ ಇಪ್ಪತ್ತೈದು ಲಕ್ಷ ರೂಪಾಯಿಗಳಲ್ಲಿ ದೇವಸ್ಥಾನ ನಿರ್ಮಾಣ, ಜೀರ್ಣೋದ್ಧಾರ, ಸಮುದಾಯ ಭವನದ ನಿರ್ಮಾಣ, ರಸ್ತೆಗಳಿಗೆ ಡಾಂಬರೀಕರಣ ಮಾಡುವುದು, ಶಾಲಾ ಕೊಠಡಿಗಳ ನಿರ್ಮಾಣ ಮುಂತಾದ ಯಾವುದೇ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲು ಸಾಕಾಗುವುದಿಲ್ಲವಾದ್ದರಿಂದ ಇದನ್ನು ಐವತ್ತು ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿದರೆ ಮಾತ್ರ ಉಪಯೋಗವಾಗುತ್ತದೆ. ಇಲ್ಲದಿದ್ದರೆ, ಒದಗಿಸಿರುವ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಹಿಂತೆಗೆದುಕೊಳ್ಳುವುದು ಸೂಕ್ತ. ಇನ್ನು ಕೊನೆಯದಾಗಿ ತಿಳಿಸುವುದೇನೆಂದರೆ, ಒಬ್ಬ ಶಾಸಕರಾದವರು ತಮ್ಮ ಕ್ಷೇತ್ರದಲ್ಲಿ ತಿರುಗಾಡುವುದಕ್ಕೆ ತಹಶೀಲ್ದಾರ್‌ರವರ ಜೀಪ್ ಇಟ್ಟುಕೊಂಡು ಓಡಾಡುವುದಕ್ಕಾಗುವುದಿಲ್ಲ. ಸಣ್ಣ-ಪುಟ್ಟ ಅಧಿಕಾರಿಗಳಿಗೆ ವಾಹನದ ಸೌಕರ್ಯವಿದ್ದು, ಒಬ್ಬ ಶಾಸಕರಿಗೆ ತಾಲ್ಲೂಕು ಮಟ್ಟದಲ್ಲಿ ತಿರುಗಾಡಲು ವಾಹನ ಸೌಲಭ್ಯ ಒದಗಿಸಿಕೊಟ್ಟರೆ ಅದರಲ್ಲಿ ತಪ್ಪೇನೂ ಇಲ್ಲ. ಶಾಸಕರಿಗೂ ಸರ್ಕಾರ ಅನುಕೂಲತೆ ಒದಗಿಸಿಕೊಡಬೇಕು. ಕಿರಾಣಿ ಹಾಗೂ ದಿನಸಿ ಅಂಗಡಿಗಳಲ್ಲಿ ಬಿಯರ್ ಮಾರಾಟ ಮಾಡುವುದಕ್ಕೆ ತಾವು ನೀಡಿರುವ ಅನುಮತಿಯನ್ನು ಮೊದಲು ರದ್ದುಗೊಳಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ಇದಕ್ಕೆ ರಾಜ್ಯದ 224 ಜನ ಶಾಸಕರೂ ಒಪ್ಪುತ್ತಾರೆ. ಆಡಳಿತ ವ್ಯವಸ್ಥೆಯಲ್ಲಿ ವಿಶೇಷವಾದ ಸುಧಾರಣೆಯನ್ನು ಮಾಡಬೇಕೆಂದು ಹೇಳುತ್ತಾ ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶವಿತ್ತ ಮಾನ್ಯ ಛೇರ್ಮನ್‌ರಾದ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

8. ಪ್ರಕಟಣೆ

ಛೇರ್ಮನ್: ಈಗ ಒಂದು ಪ್ರಕಟಣೆ. ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ: